ಸಂಪುಟ : ೨೦
ಸಂಚಿಕೆ : ೨

ಕರ್ನಾಟಕ ಭಾರತಿ

ರಾಜ್ಯೋತ್ಸವ ಸಂಚಿಕೆ

ನವಂಬರ, ೧೯೮೭

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩ ಇವರಿಗೆ ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ　೨. ರಾಜ್ಯೋತ್ಸವ ಸಂಚಿಕೆ

೩. ಸಂಕ್ರಮಣ ಸಂಚಿಕೆ　೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ: ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ: ರೂ. ೨-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ) ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ. ಹಣವನ್ನು ಫಾಯನಾನ್ಸ್ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩ ಇವರ ಹೆಸರಿನಲ್ಲಿ ತೆಗೆಯಿಸಿದ ಡಿ. ಡಿ. ಮೂಲಕ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೦ ಸಂಚಿಕೆ : ೧

ಪ್ರಧಾನ ಸಂಪಾದಕರು :

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಂಪಾದಕರು :

ಡಾ. ವಿಲ್ಯಂ ಮಾಡ್ತ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೦ ಸಂಚಿಕೆ : ೨

ರಾಜ್ಯೋತ್ಸವ ಸಂಚಿಕೆ

ನವಂಬರ, ೧೯೮೭

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಸುನೀಲಕುಮಾರ ಪ್ರಿಂಟಿಂಗ್ ಪ್ರೆಸ್

ರಜತಗಿರಿ, ಧಾರವಾಡ– ೫೮೦ ೦೦೪

ಪರಿವಿಡಿ

ಯಶವಂತ ಚಿತ್ತಾಲರೊಂದಿಗೆ ಸಂದರ್ಶನ

● ಬಸವರಾಜ ನಾಯ್ಕರ

ಯಶವಂತ ಚಿತ್ತಾಲರ 'ಕತೆಯಾದಳು ಹುಡುಗಿ' ಎಂಬ ಕಥಾಸಂಕಲನಕ್ಕೆ ೧೯೮೩ ರಲ್ಲಿ ಕೇಂದ್ರ ಸಾಹಿತ್ಯ ಅಕ್ಯಾಡೆಮಿಯ ಪ್ರಶಸ್ತಿ ಬಂದಾಗ, ಆ ಹಿನ್ನೆಲೆಯಲ್ಲಿ ಗುಲಬರ್ಗಾ ಆಕಾಶವಾಣಿಯ ವತಿಯಿಂದ ನಾನು ಅವರೊಂದಿಗೆ ಒಂದು ಸಂದರ್ಶನ ನಡೆಸಿದೆ. ಆ ಸಂದರ್ಶನದಲ್ಲಿ ಯಶವಂತ ಚಿತ್ತಾಲರು ಅನೇಕ ಮೂಲಭೂತ ಸಮಸ್ಯೆಗಳ ಬಗೆಗೆ ಅತ್ಯಂತ ಮೌಲಿಕವಾದ ವಿಚಾರಗಳನ್ನು ಅಭಿವ್ಯಕ್ತಿಸಿದರು. ಈ ಮಾತುಗಳು ಗಾಳಿಯಲ್ಲಿ ತೇಲಿಹೋಗದೆ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತವಾಗಲೆಂಬ ಉದ್ದೇಶದಿಂದ ಅವನ್ನಿಲ್ಲಿ ದಾಖಲಿಸಲಾಗಿದೆ. ಈ ಸಂದರ್ಶನವನ್ನು ನಡೆಸಿದ್ದು ೧೯೮೪ ರ ಮಾರ್ಚ ತಿಂಗಳಲ್ಲಿ.

* * *

ನಾಯ್ಕರ— ಚಿತ್ತಾಲ ಅವರೇ, ನೀವು ಕಾದಂಬರಿ ಮತ್ತು ಸಣ್ಣಕಥೆ ಇವೆರಡನ್ನೂ ಬರೆದಿದ್ದೀರಿ. ಸಣ್ಣಕಥೆಗಳನ್ನು ಬರೆಯುವ ರೀತಿಯಲ್ಲಿ ಮುಂದಗತಿಯಾಗಿಯೆ ಸಾಗಿದ್ದೀರಿ ಎಂಬುದು ನನ್ನ ಅಭಿಪ್ರಾಯ. ಈ ಸಣ್ಣಕಥೆಯ ಪ್ರಕಾರ ಭಾರತದಲ್ಲಿ ಮೊದಲಿನಿಂದ ಇದ್ದರೂ, ಇತ್ತೀಚಿನ, ಅಂದರೆ ನವ್ಯ ಸಾಹಿತಿಗಳು ಬರೆಯುವ ಸಣ್ಣಕಥೆಗಳು, ಪಾಶ್ಚಾತ್ಯ ಕಥೆಗಳಿಂದ ಬಂದಿಲ್ಲ ಒಂದು ರೀತಿಯಿಂದ ಪ್ರಭಾವಿತವಾಗಿವೆಯೆನ್ನುವ ಒಂದು ವಿಚಾರವಿದೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು ?

ಚಿತ್ತಾಲ— ನಿಜವಾಗಿ ನೋಡಿದಲ್ಲಿ ಇದು ನೇರವಾಗಿ ಆಧುನಿಕ ಸಣ್ಣಕಥೆಯ ಇತಿಹಾಸವನ್ನೆ ಪರೀಕ್ಷಿಸಲು ಹಚ್ಚಿಸುವ ಪ್ರಶ್ನೆ. ಅಂದರೆ ಸಣ್ಣಕಥೆಯ ಜನಕರೆಂದು ಹೆಸರಾದ ಹಾಗೂ ನನ್ನ ಕಥಾಸಾಹಿತ್ಯದ ಮೇಲಿನ ಬಹುದೊಡ್ಡ ಪ್ರಭಾವವಾದ ಮಾಸ್ತಿಯವರ ಕಥೆಗಳು ರೂಪಗೊಂಡವರೆಗೂ ನಮ್ಮನ್ನು ಒಯ್ಯಬಹುದಾದ ಪ್ರಶ್ನೆ. ಅಷ್ಟುದೂರ ಹೋಗದೆ, ಸದ್ಯ ನವ್ಯಕಥೆ ಹುಟ್ಟಿದ್ದು ಕನ್ನಡದ ನವ್ಯಕಾವ್ಯದ ಸಂದರ್ಭದಲ್ಲಿ, ನವ್ಯಕಾವ್ಯದ ಪ್ರಭಾವದಿಂದ ಎನ್ನಬಹುದು. ನವ್ಯಕಾವ್ಯದ ಪ್ರಾದುರ್ಭಾವಕ್ಕೆ ಕಾರಣರಾದ ಪಾಶ್ಚಿಮಾತ್ಯ ಪ್ರಭಾವಗಳು ಈಗಾಗಲೆ ಸಾಕಷ್ಟು ಚರ್ಚೆಗೆ ಒಳಪಟ್ಟಿವೆಯಾದರೂ, ಕನ್ನಡದ ನವ್ಯಕಥೆ ಅಂತಹದೆ ಒಂದು ಪಾಶ್ಚಿಮಾತ್ಯ ಕಥಾಪ್ರಕಾರದಿಂದ ಹುಟ್ಟಿದೆಯೆಂದು ಹೇಳಲು ಸಾಧ್ಯವಿಲ್ಲ. ಅಂದರೆ ಕನ್ನಡದ ನವ್ಯಕಥೆ ಪ್ರಭಾವಿತಗೊಂಡದ್ದು ಕನ್ನಡದ ನವ್ಯಕಾವ್ಯದಿಂದ.

ನಾಯ್ಕರ— ಇಂದಿನ ಭಾರತೀಯ ಸಣ್ಣಕಥೆಗೂ ಪಾಶ್ಚಾತ್ಯ ಸಣ್ಣಕಥೆಗೂ ಕಥಾವಸ್ತುವಿನ ದೃಷ್ಟಿಯಿಂದ ಅಥವಾ ತಂತ್ರದ ದೃಷ್ಟಿಯಿಂದ ಏನಾದರೂ ಭಿನ್ನತೆಯಿದೆಯೆ ?

ಚಿತ್ತಾಲ— ಭಾರತೀಯ ಸಣ್ಣ ಕಥೆಯ ಬಗೆಗೆ ಮಾತನಾಡುವ ಅಧಿಕಾರ ನನಗೆ, ಇದ್ದಂತೆ ಇಲ್ಲ. ಯಾಕೆಂದರೆ ಉಳಿದ ಭಾಷೆಗಳ ಕಥೆಗಳನ್ನು ಅಷ್ಟಾಗಿ ಅಭ್ಯಾಸ ಮಾಡಿದವನಲ್ಲ. ಮೇಲಾಗಿ ನಿಮ್ಮ ಪ್ರಶ್ನೆ ನೇರವಾದ ಉತ್ತರ ಅಸಾಧ್ಯವೆನ್ನು ವಷ್ಟು ಹರವಾಗಿದೆ. ಇಷ್ಟು ಹರವಾದ ಪ್ರಶ್ನೆ ನೀವು ಉಲ್ಲೇಖಿಸಿದ ಎರಡು ಕಥಾ ಸಂಪ್ರದಾಯಗಳ ಸಮಾನತೆಗೆ, ಅಂದರೆ ಅವುಗಳ ಸಾಮಾನ್ಯ ಅಂಶಗಳಿಗೆ ಅನ್ವಯಿ ಸಬಹುದೆ ಹೊರತು ಅವುಗಳ ವಿಭಿನ್ನತೆಗಲ್ಲ; to what is common between them and not to the differnce between them. ಜಗತ್ತಿನ ಎಲ್ಲಾ ಕಥಾ ಸಾಹಿತ್ಯಕ್ಕೂ ಸಮಾನವಾದ ಸಂಗತಿಯೆಂದರೆ ಅದರ ಕಥಾನಕದ ಧಾಟಿ, the narrative tone· ಈ ಧಾಟಿಗೆ ಕಾರಣ ಎಂದರೆ ಕಥೆಗೆ ವಸ್ತುವಾದ ಮನುಷ್ಯನ ಬಗೆಗಿನ ಜೀವಂತ ಆಸ್ಥೆ. ವಿಚಾರ ಮಾಡಿ ನೋಡಿ. ಮನುಷ್ಯನ ಬಗೆಗೆ ಹೇಳಹೊರಟಂತೆಲ್ಲವೂ ಹೇಗೆ ಸಹಜವಾಗಿಯೆ ಕಥಾ ನಕದ ಧಾಟಿ ಪಡೆಯುತ್ತದೆ ಎನ್ನುವದನ್ನು. ಈ ಧಾಟಿಯಲ್ಲಿಯ, ಅದಕ್ಕೆ ಕಾರಣ ವಾದ ಆಸ್ಥೆಗಳಲ್ಲಿಯ ಬೆರಗುಗೊಳಿಸುವ ವೈವಿಧ್ಯ, ನಮ್ಮ ಕುತೂಹಲಕ್ಕೆ ಕಾರಣ ವಾಗಿರಬೇಕೆ ಹೊರತು, ಬರಿಯ ವಿಭಿನ್ನತೆಯಲ್ಲ

ನಾಯ್ಕರ— ಅನಂತಮೂರ್ತಿಯವರ ಕಥೆಗಳಲ್ಲಿ ಅದರಂತೆ ನಿಮ್ಮ ಕಥೆಗಳಲ್ಲಿ ವಿಧ್ಯುಕ್ತ ಸಾಂಕೇತಿಕತೆ, ಅಂದರೆ ritual symbolism ಅನೇಕ ಸಾರೆ ಬಂದಿದೆ. ಅಂದರೆ ನಿಮ್ಮ ಕಥೆಗಳು ವಾಸ್ತವಿಕವಾಗಿದ್ದೂ, ಮನೋವೈಜ್ಞಾನಿಕವಾಗಿದ್ದೂ ಸಾಂಕೇತಿಕ ಎತ್ತರವನ್ನು ಮುಟ್ಟಿ ಕಾವ್ಯಮಯವಾಗುತ್ತವೆ. ಇಂಥ ತಂತ್ರವನ್ನು ನೀವು ಬುದ್ಧಿಪೂರ್ವಕ ಉಪಯೋಗಿಸುತ್ತೀರೊ ಅಥವಾ ಅದು ತಾನೇತಾನಾಗಿ ಬರವಣಿಗೆಯಲ್ಲಿ ಬಂದುಬಿಡುತ್ತದೆಯೋ ?

ಚಿತ್ತಾಲ— ನನ್ನ ಕಥೆಗಳ ಬಗೆಗೆ ಹೇಳಿದ ಒಳ್ಳೆಯ ಮಾತುಗಳಿಗಾಗಿ ಕೃತಜ್ಞ ನಾಗಿದ್ದೇನೆ. ಆದರೆ ತಂತ್ರದ ಬಗೆಗೆ ಮಾತು : ನಾನು ಈ ವಿಷಯವಾಗಿ ಕೆಲವು ಪ್ರಬಂಧಗಳನ್ನು ಈಗಾಗಲೆ ಬರೆದಿದ್ದೇನೆ. ಅಂದರೆ ಸಾಹಿತ್ಯದಲ್ಲಿ ಒದಗುವ ಸೃಷ್ಟಿ ಪ್ರಕ್ರಿಯೆಯ ಬಗೆಗೆ· ಸಾಹಿತ್ಯದಲ್ಲಿ ಒದಗುವ ಸೃಷ್ಟಿಪ್ರಕ್ರಿಯೆಯ ಅವಿ ಭಾಜ್ಯ ಅಂಗವಾಗಿ ತಂತ್ರ ಬಂದಾಗ ಮಾತ್ರ ಕಥೆಯ ಸಫಲತೆಗೆ ನೆರವಾಗಬಲ್ಲದು ಎನ್ನುವದು ನನ್ನ ವಿಚಾರ. ಬುದ್ಧಿಪೂರ್ವಕವಾಗಿ ಬಳಸಿದಾಗ ಕಥೆ ನಮ್ಮನ್ನು ತಟ್ಟುವುದರಲ್ಲಿ ಸೋಲುತ್ತದೆ.

ನಾಯ್ಕರ— ಒಂದು ಕಥೆ ಉತ್ತಮ ಕಥೆಯಾಗಿರಬೇಕಾದರೆ ಅದರಲ್ಲಿ ಯಾವ ಲಕ್ಷಣಗಳಿರಬೇಕು ? ಅಂದರೆ ಅದರಲ್ಲಿ First Person Narration

ಇದ್ದರೆ ಒಳ್ಳೆಯದೊ, ಅಥವಾ Omniscient Narration ಇರಬೇಕೊ ಅಥವಾ Point of View Technique ಇರಬೇಕೊ ?

ಚಿತ್ತಾಲ— (ನಗುತ್ತ) ಇದು ಬಹಳ ಕ್ಲಾಸ್‌ರೂಮ್ ಪ್ರಶ್ನೆಯಾಗಿ ಬಿಟ್ಟಿತಲ್ಲ. ಕಥೆ ಬರೆಯುವಾಗ ಕಥೆ ಬರೆಯುವದು, ಕಥೆಯ ಮುಖಾಂತರ ಹೇಳಹೊರಟದ್ದು ಮುಖ್ಯವಾಗುತ್ತದೆಯೆ ಹೊರತು ಉತ್ತಮ ಕಥೆಯ ಲಕ್ಷಣಗಳಲ್ಲ. ಅಂದರೆ, ಇಂಥ ಲಕ್ಷಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಕಥೆ ಬರೆಯಲಿಕ್ಕೆ ಹೋಗುವದು ಶಕ್ಯವಿಲ್ಲ. ಕಥೆ ಹುಟ್ಟಿಬಂದ ಮೇಲೆ ಅದು ಸೃಷ್ಟಿಸಿದ ಅರ್ಥಪ್ರಪಂಚದ ಹಲವಾರು ಸಾಧ್ಯತೆಗಳು, ಓದುಗನ, ಅಂದರೆ ವಿಮರ್ಶಕನ, ಸಹೃದಯನ, ಸೃಜನಶೀಲ ಪ್ರತಿಕ್ರಿಯೆಯಲ್ಲಿಯೆ ನೆಲೆಗೊಳ್ಳಬೇಕು. ಆಮೇಲೆ ತನ್ನಮೇಲೆ ಇಷ್ಟೊಂದು ಪರಿಣಾಮ ಮಾಡಿದ್ದಕ್ಕೆ ಕಾರಣ ತಿಳಿಯಲು ಹೊರಟಾಗ ವಿಮರ್ಶೆ ಆರಂಭವಾಗಬೇಕೆ ಹೊರತು, ವಿಮರ್ಶೆಯ ಅಪೇಕ್ಷೆಗಳನ್ನು ನಿಜಗೊಳಿಸಲು ಕಥೆ ಹುಟ್ಟಲಾರದು ಇದು ನನ್ನ ಅಭಿಪ್ರಾಯ.

ನಾಯ್ಕರ— ಮುಂಬಯಿಯಲ್ಲಿ ಇರುವಂಥ ತಮಗೆ ಯಾರಾದರೂ ಭಾರತೀಯ ಅಥವಾ ಪರದೇಶದ ಲೇಖಕರಿಂದ ಪ್ರಭಾವ ಅಥವಾ ಪ್ರೇರಣೆ ದೊರತಿದೆಯೆ ?

ಚಿತ್ತಾಲ— ನಾನು ಮುಂಬಯಿಯಲ್ಲಿ ಇರುವದಕ್ಕೂ ನನ್ನ ಸಾಹಿತ್ಯದ ಮೇಲಿನ ಪ್ರಭಾವಕ್ಕೂ ಯಾವ ಸಂಬಂಧವೂ ಇಲ್ಲವಲ್ಲ. ನನ್ನ ಸಾಹಿತ್ಯದ ಮೇಲಿನ ದೊಡ್ಡ ಪ್ರಭಾವವೆಂದರೆ–ನಮ್ಮ ಕನ್ನಡದಿಂದಲೆ ಹೇಳಬೇಕಾದರೆ–ಮಾಸ್ತಿ ವೆಂಕಟೇಶ್ ಅಯ್ಯಂಗಾರ್. ನಾನು ಕಥೆ ಬರೆಯಲಿಕ್ಕೆ ಆರಂಭಿಸಿದ್ದು ಮಾಸ್ತಿಯವರ ಪರಂಪರೆಯಲ್ಲಿ, ಮಾಸ್ತಿಯವರ ಪ್ರಭಾವಕ್ಕೆ ಒಳಗಾಗಿ ಎಂದು. ನಾನು ಇನ್ನೂ ಮುಂದೆ ಹೋಗಿ ಹೇಳುತ್ತೇನೆ : ನನ್ನ ಬರಿಯ ಆರಂಭದ ಕಥೆಗಳಲ್ಲ; ನನ್ನ ಇಂದಿನ ವರೆಗಿನ ಎಲ್ಲಾ ಸಾಹಿತ್ಯದ ಮೇಲೆ ಮಾಸ್ತಿಯವರ ಗಾಢಪ್ರಭಾವವಿದೆಯೆಂದು ನಾನು ಅತ್ಯಂತ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಹಾಗೆಯೆ ಕುವೆಂಪು, ಶಿವರಾಮ ಕಾರಂತ, ಬೇಂದ್ರೆ, ಅಡಿಗ ಹಾಗೂ ಎಲ್ಲಕ್ಕೂ ಮೊದಲು, ನನ್ನನ್ನು ಬಹುಶಃ ಸಾಹಿತ್ಯರಚನೆಗೆ ಹಚ್ಚಿದ ನನ್ನ ಅಣ್ಣನವರಾದ ಗಂಗಾಧರ ಚಿತ್ತಾಲ. ನಾನು ಮೆಚ್ಚಿಕೊಂಡ— ಯಾಕಂದರೆ ನೀವು ಪ್ರಭಾವವೆಂದ ಕೂಡಲೆ ನನಗೆ ಹೆದರಿಕೆಯಾಗುತ್ತದೆ. ಪ್ರಭಾವ ಇದರ ಅರ್ಥವನ್ನು ನೀವು ಹೇಗೆ ಗ್ರಹಿಸುತ್ತೀರಿ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳದೆಯೆ ನಿಮ್ಮ ಮೇಲೆ ಪ್ರಭಾವ ಬೀರಿದ ಪಾಶ್ಚಿಮಾತ್ಯ ಲೇಖಕರು ಯಾರು ಎಂದು ಕೇಳಿದರೆ ಉತ್ತರ ಕೊಡಲಿಕ್ಕೆ ಸ್ವಲ್ಪ difficult ಆಗುತ್ತದೆ. ಆದರೆ ಅದನ್ನು ನಾನು ಹೀಗೆ ಪರಿವರ್ತಿಸುತ್ತೇನೆ : ನಾನು ಮೆಚ್ಚಿಕೊಂಡ

ಪಾಶ್ಚಾತ್ಯ ಲೇಖಕರಲ್ಲಿ ದಸ್ತಾವಸ್ಕಿ, ಚೆಕಾವ್, ಕಾಫ್ಕಾ, ಆಲ್ಬರ್ಟ ಕಾಮೂ, ಇತ್ತೀಚೆಗೆ ಐಝ್ಯಾಕ್ ಸಿಂಗರ್ ಹಾಗೂ ಮಾರ್ಕ್ವೆಜ್ ಇವರು ಮುಖ್ಯರು.

ನಾಮ್ಕರ— ಭಾರತೀಯರು ಭಾರತೀಯ ಸಂಪ್ರದಾಯದಲ್ಲಿದ್ದುಕೊಂಡೆ ಬೇರೆ ಬೇರೆ ತಾಂತ್ರಿಕ ಪ್ರಯೋಗಗಳನ್ನು ಮಾಡಲು ಸಾಧ್ಯವಿಲ್ಲವೆ? ಅಂದರೆ ಪಂಚ ತಂತ್ರ, ಕಥಾಸರಿತ್ಸಾಗರ, ಬೇತಾಳನ ಕಥೆಗಳು ಮುಂತಾದವುಗಳಿಂದ ಪ್ರೇರಣೆ ಪಡೆದು ಭಾರತೀಯವಾದಂಥ ತಂತ್ರವನ್ನು ರೂಪಿಸಿಕೊಳ್ಳಲು ಸಾಧ್ಯವಿಲ್ಲವೆ?

ಚಿತ್ತಾಲ— ಸಾಧ್ಯವಿದೆ, ನಿಜಕ್ಕೂ ಸಾಧ್ಯವಿದೆ. ಎಪ್ಪತ್ತು ವರುಷಗಳ ಶುಚಿಯಾದ ಇತಿಹಾಸವುಳ್ಳ ಕಥಾ ಸಂಪ್ರದಾಯ ಈಗಾಗಲೆ ನೀವು ಉಲ್ಲೇಖಿಸಿದ ಎಲ್ಲ ಪ್ರೇರಣೆ ಗಳನ್ನು ಅರಗಿಸಿಕೊಂಡಿದೆ, ಅವುಗಳಿಂದ ಪೋಷಿತವಾಗಿದೆ ಎಂಬುದೆ ನನ್ನ ನಂಬಿಕೆ. ಆದರಿಂದ ಪ್ರತಿಯೊಬ್ಬ ಲೇಖಕ ಮತ್ತೆ ಈ ಮೂಲಕ್ಕೇ ಹೋಗಿ ತನ್ನ ಬರವಣಿ ಗೆಯ ರೀತಿಯನ್ನು ನಿಶ್ಚಿತಗೊಳಿಸಬೇಕಾಗಿಲ್ಲ. ಸಂಪ್ರದಾಯದ ಅರ್ಥವೆ ಇದು. ನಾನು ಬರೆಯುವಾಗ ಇದ್ದ, ಬೆಳೆದುಬಂದ ಸಂಪ್ರದಾಯ ನನಗಿದ್ದೆಲ್ಲ ತಂತಾನೆ ಒದಗಿಸಿರಬೇಕು. ಆದರೆ ನಿಮ್ಮ ಪ್ರಶ್ನೆಯ ಅರ್ಥ —ಈ ನಿಮ್ಮ ಪಂಚತಂತ್ರ ಹೇಳಿದಿರಿ, ಕಥಾಸರಿತ್ಸಾಗರ ಹೇಳಿದಿರಿ,—ಇಂಥವುಗಳ ಪ್ರಭಾವ ಅಷ್ಟೇ ಸಾಲದೆ ಎಂಬ ನಿಮ್ಮ ಪ್ರಶ್ನೆಯ ಒಳದನಿಯಾಗಿದ್ದರೆ ನನ್ನ ಉತ್ತರ ಬೇರೆಯೆ. ಸಮಕಾಲೀನ ಮನುಷ್ಯನ ಬದುಕು ನಾವು ತಿಳಕೊಂಡಷ್ಟು ಪ್ರತ್ಯೇಕವಾಗಿಲ್ಲ; ಬಿಡಿಯಾಗಿಲ್ಲ. ಇಡೀ ಮಾನವಕೋಟಿಗೆ ಆಗುತ್ತಿದ್ದುದರ ಪ್ರಭಾವಕ್ಕೆ ಪ್ರತಿಕ್ಷಣಕ್ಕೂ ಒಳ ಪಡುತ್ತಿದೆ ನಮ್ಮ ಜೀವನ. ಹೀಗಿರುವಾಗ ಮಾನವ ಮನಸ್ಸು ಸಾಧಿಸಿದ ಅತ್ಯುತ್ತಮವಾದದ್ದಕ್ಕೆ ಪ್ರತಿಯೊಬ್ಬ ಮನುಷ್ಯನೂ ಸಹಜವಾದ ವಾರಸುದಾರ ನೆಂದು ನಾವು ತಿಳಿದಿರಲು ತಪ್ಪಿಲ್ಲ. ಉದಾಹರಣೆಗೆ ಈ ಸಂದರ್ಶನವನ್ನು ಸಾಧ್ಯ ಮಾಡುತ್ತಿರುವ ನಿಮ್ಮ ರೇಡಿಯೊ. ಇದರ ಹಿಂದೆ ಪಾಶ್ಚಿಮಾತ್ಯ ವಿಜ್ಞಾನವಿದೆ, ತಂತ್ರಜ್ಞಾನವಿದೆ, ಇದಕ್ಕೆ ನಿಮ್ಮ ಅಡ್ಡಿಯಿಲ್ಲ. ಆದರೆ ಸಾಹಿತ್ಯಕ್ಕೆ ಮಾತ್ರ ಬಂದ ಕೂಡಲೆ ಇಂಥ ಪ್ರಭಾವಗಳ ಅಡಚಣೆ ಯಾಕೆ ಬರುತ್ತದೆಯೊ ಗೊತ್ತಿಲ್ಲ. ಸಾಹಿತ್ಯ ಕೂಡ ಇಂಥದಕ್ಕೆ ಅಪವಾದವಾಗಬೇಕಿಲ್ಲ. ನಮ್ಮ ಸಂಪ್ರದಾಯಕ್ಕೆ ಈ ಎಲ್ಲ ಪ್ರಭಾವಗಳನ್ನೂ ಅರಗಿಸಿಕೊಂಡು ತನ್ನದಾಗಿಸುವ ಶಕ್ತಿಯಿದ್ದರೆ ಅವಶ್ಯವಾಗಿ ಮಾಡಬಹುದಾದ ಕೆಲಸವೆಂದೆ ನಾನು ತಿಳಿಯುತ್ತೇನೆ. ಅಂದರೆ ಪ್ರಭಾವಕ್ಕೆ ನಾವು ಹೆದರಬೇಕೆಂದಿಲ್ಲ, ಆ ಪ್ರಭಾವದಿಂದ ಅಥವಾ ಅಂಥ ಪ್ರೇರಣೆಗಳಿಂದ ಎಂಥ ಸಾಹಿತ್ಯ ಹುಟ್ಟಿಸುತ್ತಿದ್ದೇವೆ ಎನ್ನುವದು ಮುಖ್ಯ. ನಾವು ಹುಟ್ಟಿಸಿದ ಸಾಹಿತ್ಯ ಭಾರತೀಯ ಮನಸ್ಸಿಗೆ, ಅದಕ್ಕಿಂತ ಹತ್ತಿರ ಬಂದರೆ- ಯಾಕಂದರ

ನಿಮ್ಮ ಎಲ್ಲ ಪ್ರಶ್ನೆಗಳಲ್ಲಿ 'ಭಾರತೀಯತೆ'ಯು ಮೇಲೆ ಒತ್ತಿದೆ. ಯಾಕಂದರೆ ನಾವು ಕನ್ನಡ ಕಥೆಗಳ ಬಗೆಗೆ ಮಾತನಾಡಬೇಕಾದರೆ ಇನ್ನೂ ಹತ್ತಿರ ಬಂದು— ಕನ್ನಡದ ಮನಸ್ಸಿಗೆ ಅರ್ಥಪೂರ್ಣವಾಗುತ್ತದೆಯೆ ಈ ಸಾಹಿತ್ಯ ಎನ್ನುವದು ಮುಖ್ಯ ಅಥವಾ ಇದು ಬರಿಯ ಪಾಶ್ಚಿಮಾತ್ಯ ಸಾಹಿತ್ಯದ ಭಾಷಾಂತರದ ಹಾಗೆ ಅಥವಾ ಅಲ್ಲಿಯ ಕಥೆಗಳ ಹಾಗೆ ಕೇಳಿಸಿದರೆ ಆ ಕಥೆಗಳು ಸೋತಿವೆ. ನಮ್ಮ ಮನಸ್ಸಿಗೆ, ನಮ್ಮ ಸಂಸ್ಕೃತಿಗೆ ಇದು ಬಗ್ಗುವಂಥದಾಗಿದ್ದರೆ, ನಮ್ಮ ಮನಸ್ಸಿಗೆ ಅರ್ಥಪೂರ್ಣವಾಗುವಂತಿದ್ದರೆ, ಅದನ್ನು ನಾವು ತಳ್ಳಬೇಕಾಗಿಲ್ಲ.

ನಾಯ್ಕರ— ಅಂದರೆ, ನೀವು ಹೇಳಿದ ಮೇಲೆ ನನಗೆ ಮತ್ತೊಂದು ಪ್ರಶ್ನೆ ಹೊಳೆಯುತ್ತಿದೆ, ಸರ್. ಈಗ ಪಾಶ್ಚಾತ್ಯ ಸಾಹಿತ್ಯದಿಂದ ನಾವು ಪ್ರಭಾವ ಪಡೆಯುವಂಥ ಒಂದು ಪರಿಪಾಠ ಅವಶ್ಯವಿದ್ದಾಗ, ನಮ್ಮಲ್ಲಿ ಹೆಚ್ಚಾಗಿ ಕಾಫ್ಕಾ ಮತ್ತೂ ಕಾಮೂನಂಥವರಿಂದ ಪ್ರೇರಣೆ ಪಡೆಯುವಂಥ ಲೇಖಕರಿದ್ದಾರೆ. ಆದರೆ ಈಗಿನ ನಮ್ಮ ಸಾಮಾಜಿಕ ಪರಿಸರ ನೋಡಿದರೆ ಆಫ್ರಿಕೆಯಲ್ಲಿ ಬರೆಯುವಂಥ ಸಾಹಿತ್ಯ— ಆಫ್ರಿಕನ್ ರೈಟರ್ಸ್—ಎನ್‌ಗೂಗಿ ಅಥವಾ ಚಿನುವಾ ಅಚೆಬೆ ಅಂತೇನೆಲ್ಲ—ಅವರ ಸಾಹಿತ್ಯ ನಮಗೆ ಹೆಚ್ಚು ಔಚಿತ್ಯಪೂರ್ಣವಾಗಿರುವದಿಲ್ಲದೆ ?

ಚಿತ್ತಾಲ— ಆಗಬಹುದು, ನಾನು ಹೇಳುತ್ತೇನಲ್ಲ, ಎಲ್ಲ ಪ್ರಭಾವಗಳು ಎಲ್ಲಿಂದಲೇ ಬರಲಿ, ಪ್ರೇರಣೆಗಳು ಎಲ್ಲಿಂದಲೇ ಬರಲಿ, ಅವುಗಳನ್ನು ನಮ್ಮ ಮನಸ್ಸಿಗೆ ಅರ್ಥಪೂರ್ಣವಾಗುವ ಹಾಗೆ, ನಾವು ಅದನ್ನು ಪರಿವರ್ತಿಸಬೇಕು, ನಮ್ಮದಾಗಿ ಮಾಡಿಕೊಳ್ಳಬೇಕು. ಇಷ್ಟೇ ನನ್ನ ಮೂಲ ಉದ್ದೇಶ.

ನಾಯ್ಕರ— ನೀವು ಸಣ್ಣಕಥೆ ಮತ್ತು ಕಾದಂಬರಿ ಎರಡೂ ಪ್ರಕಾರಗಳನ್ನು ಬರೆದಿದ್ದೀರಿ. ಇವೆರಡರಲ್ಲಿ ನಿಮಗೆ ಬರವಣಿಗೆಯ ದೃಷ್ಟಿಯಿಂದ ಏನಾದರೂ ಭಿನ್ನತೆ ಕಂಡು ಬರುತ್ತದೆಯೊ ಹೇಗೆ ? ಅಂದರೆ ಎರಡರಲ್ಲಿ ನಿಮಗೆ ಯಾವ ಸಾಹಿತ್ಯ ಪ್ರಕಾರ ಹೆಚ್ಚಿಗೆ ಅನುಕೂಲವಾಗಿರುತ್ತದೆ ?

ಚಿತ್ತಾಲ— ಈ ಪ್ರಶ್ನೆ ಕೇಳಬೇಕಾದರೆ ಒಂದನ್ನು ಅಲ್ಲಿ ನೀವು ಮರೆತಿರುತ್ತೀರಿ. ಚಿತ್ತಾಲರು ವೃತ್ತಿಯಿಂದ ಲೇಖಕರಲ್ಲ, ಅವರು ಜೀವನೋಪಾಯಕ್ಕಾಗಿ ತೊಡಗಿಸಿಕೊಂಡ ಒಂದು ನೌಕರಿ ಎನ್ನುವ ಕೆಲಸ ಇದೆ, ಆ ಕೆಲಸದಿಂದ ಬಿಡುವು ಸಿಕ್ಕಾಗ, ಬರೆಯಬೇಕೆಂಬುವ ಉತ್ಸಾಹ ಬಂದಾಗ, ನಾನು ಬರೆಯುತ್ತಾ ಇರುತ್ತೇನೆ. ನನಗೆ ಸಿಗುವ ವೇಳೆಯ ದೃಷ್ಟಿಯಿಂದ, ಸಾಲುವ ಶಕ್ತಿಯ ದೃಷ್ಟಿಯಿಂದ, ಕಾದಂಬರಿಗಿಂತ ಸಣ್ಣ ಕಥೆ ಹೆಚ್ಚು ಅನುಕೂಲವಾದ ಮಾಧ್ಯಮ ಎನ್ನಬಹುದು. ಆದರೆ ನಿಜಹೇಳಬೇಕೆಂದರೆ, ಅನೇಕ ಕಾರಣಗಳಿಗಾಗಿ ಸಣ್ಣ ಕಥೆಯೆ

ನನಗೆ ಅತ್ಯಂತ ಪ್ರಿಯವಾದ ಮಾಧ್ಯಮ. ಬದುಕನ್ನು ಅಳೆಯಲು, ನನ್ನ ಮನಸ್ಸು ಆಯ್ಕೆ ಮಾಡಿದ ಮಾಧ್ಯಮಗಳಲ್ಲಿ ಸಣ್ಣಕಥೆ ಪ್ರಮುಖವಾದ ಮಾಧ್ಯಮ. ಆದ್ದರಿಂದ ಪ್ರಿಯವಾದ ಮಾಧ್ಯಮ. ಈ ಕಾರಣಕ್ಕಾಗಿಯೆ, ಈ ಕೇಂದ್ರ ಸಾಹಿತ್ಯ ಅಕ್ಯಾಡೆಮಿಯ ಪ್ರಶಸ್ತಿ ನನ್ನ ಸಣ್ಣಕಥೆಗಳಿಗೆ ಬಂದದ್ದು, ನನಗೆ ತುಂಬ ಸುಖಸಮಾಧಾನ ಕೊಟ್ಟ ಸಂಗತಿಯಾಗಿದೆ. ವೈಯ್ಯುಕ್ತಿಕವಾಗಿ ಇನ್ನೊಂದು ಹೆಮ್ಮೆಗೆ ಕಾರಣವೆಂದರೆ ನನ್ನ ಸಾಹಿತ್ಯದ ಮೇಲೆ ಬಹುದೊಡ್ಡ ಪ್ರಭಾವವಾದ ಪೂಜ್ಯ ಮಾಸ್ತಿಯವರ ಕಥೆಗಳಿಗೆ ಸಿಕ್ಕನಂತರ—ನಿಮಗೆ ಗೊತ್ತಿರ ಬೇಕು, ಮಾಸ್ತಿಯವರ ಕಥೆಗಳಿಗೆ ಕೇಂದ್ರಸಾಹಿತ್ಯ ಅಕ್ಯಾಡೆಮಿಯ ಪ್ರಶಸ್ತಿ ಬಂದದ್ದು ೧೯೬೮ರಲ್ಲಿ, — ಮತ್ತೆ ಸಣ್ಣಕಥೆಗೆ ಈ ಪ್ರಶಸ್ತಿ ಬಂದದ್ದು ನನ್ನ ಕಥೆಗಳಿಗೆಯೆ. ಅಂತೂ ನಾನು ಸಣ್ಣಕಥೆಯ ಬಗೆಗೆ ತಳೆದ ಪ್ರೇಮಕ್ಕೆ ಈ ಪ್ರಶಸ್ತಿ ಬಂದಾಗ ಒಂದು ಬಗೆಯ ಧನ್ಯತೆ ಎನಿಸಿದ್ದುಂಟು.

ನಾಯ್ಕರ— ನಿಮ್ಮ ಕಥೆಗಳಲ್ಲಿ ಈ ಉತ್ತರ ಕನ್ನಡ ಜಿಲ್ಲೆಯ ಪ್ರಾದೇಶಿಕ ಅಂಶ ಹೆಚ್ಚಾಗಿ ಕಂಡುಬರುತ್ತದೆ. ಕೆಲವು ಶಬ್ದಗಳು ನಮಗೆ,—ಧಾರವಾಡ ಕಡೆಯ ವರಿಗೆ—ಅರ್ಥವೆ ಆಗುವದಿಲ್ಲ. ಇದಕ್ಕೆ ಕಾರಣ ಬಹುಶಃ ನೀವು ಮುಂಬಯಿಯಲ್ಲಿ ಇರುವುದರಿಂದ ಅದರ ಬಗೆಗೆ ಹೆಚ್ಚು conscious ಆಗಿ ಇರುತ್ತಿರೋ ಹೇಗೆ?

ಚಿತ್ತಾಲ— ಇದಕ್ಕೆ ನನ್ನ ಉತ್ತರ ಸ್ವಲ್ಪ ಮನೋವೈಜ್ಞಾನಿಕ ಆಗಬಹುದೇನೊ ಎನಿಸಲಿಕ್ಕೆ ಹತ್ತಿದೆ. ನಾನು ಬಹಳ ಸಲ ಹೇಳಿದ್ದೇನೆ ಇದನ್ನು. ನನ್ನ ಕಥೆಗಳಲ್ಲಿ, ಕಾದಂಬರಿಗಳಲ್ಲಿ, ಮತ್ತೆ ಮತ್ತೆ ಪ್ರಕಟವಾಗುವ ನನ್ನ ಹುಟ್ಟೂರಾದ ಹನೇಹಳ್ಳಿ, ಉತ್ತರ ಕನ್ನಡ ಜಿಲ್ಹೆ, ಹಾಗೂ ಅಲ್ಲಿಯ ಅನೇಕ ಪಾತ್ರಗಳ ಹೆಸರುಗಳು — ಬೊಮ್ಮಿ, ಉತ್ತಮಿ, ಗಿರಿಯಣ್ಣ, ಎಂಕು, ಮುರ್ಕುಂಡಿ—ಇವು ಬರಿ ಒಂದು ಪ್ರದೇಶದ ಹೆಸರಾಗಲಿ. ಅಥವಾ ಆ ಜನರ ಹೆಸರಾಗದೆ, ನನ್ನ ಮಾನಸಿಕ gestalt, ಅಂದರೆ ಭಾವಪ್ರತಿಮೆಗಳ ವಿನ್ಯಾಸ, ಇವನ್ನು ನಿಶ್ಚಯಿಸಿ, ಹಾಗೆಯೆ ನನ್ನ ಸಾಹಿತ್ಯದ ಸೃಷ್ಟಿಗೆ ಮೂಲಸೆಲೆಗಳಾದ ಜೀವಶಕ್ತಿಗಳೆಂದು ತಿಳಿಯುತ್ತೇನೆ. It is not just a geographical region; but it is a source of the energy which has created my literature. ಇಷ್ಟೊಂದು ಮೂಲಭೂತವಾದ improtance ನಾನು ಅದಕ್ಕೆ ಕೊಡುತ್ತಾ ಇದ್ದೇನೆ.

ನಾಯ್ಕರ— ಒಳ್ಳೆಯದು, ಚಿತ್ತಾಲ ಅವರೆ. ನೀವು ಇಷ್ಟು ಹೊತ್ತಿನವರೆಗೆ ಸಾಹಿತ್ಯವನ್ನು ಕುರಿತು ಒಂದು ಸಮಗ್ರವಾದ ಚಿತ್ರವನ್ನು ಕೊಟ್ಟಿದ್ದೀರಿ. ಬರು ತ್ತೇನೆ, ನಮಸ್ಕಾರ.

ಭಾರತೀಯ ಸಾಹಿತ್ಯಕ್ಕೆ ಕನ್ನಡದ ಕೊಡುಗೆ

● ಆರ್.ಪಿ. ಹೆಗಡೆ

ಭಾರತೀಯ ಭಾಷೆಗಳು ಮತ್ತು ಕನ್ನಡ

ಭಾರತ ಅನೇಕತೆಗಳ ನಡುವೆ ಏಕತೆಯನ್ನು ಸಾಧಿಸಿರುವ ರಾಷ್ಟ್ರ. ಭಿನ್ನ ಜಾತಿ, ಮತ, ಪಂಥ, ವರ್ಗ, ವರ್ಣಗಳು, ಭೌಗೋಲಿಕ ವ್ಯತ್ಯಾಸಗಳು ಮಾತ್ರ ವಲ್ಲ; ಭಾಷೆಗಳ ದೃಷ್ಟಿಯಿಂದಲೂ ಭಾರತ ವಿವಿಧತೆಗಳ ದೇಶ. ಸಂವಿಧಾನದಲ್ಲಿ ಸ್ವೀಕೃತವಾದ ಅಧಿಕೃತ ಭಾಷೆಗಳಲ್ಲದೇ, ವಿಪುಲ ಸಂಖ್ಯೆಯ ಅನೇಕ ಭಾಷೆ-ಉಪ ಭಾಷೆಗಳು ಭಾರತದುದ್ದಕ್ಕೂ ಹಂಚಿ-ಹರಡಿವೆ. ಭಾರತ ನಿಜವಾದ ಅರ್ಥದಲ್ಲಿ ಭಿನ್ನತೆಗಳ ಪ್ರಯೋಗಶಾಲೆ. ಭಾಷೆಯ ಆಧಾರದ ಮೇಲೆಯೇ ಪ್ರಾದೇಶಿಕ ವಿಭಾಗಗಳನ್ನು ಮಾಡಲಾಗಿದ್ದರೂ ಈ ಗಡಿಗಳನ್ನು ನಿಖರವಾಗಿ ಕೊರೆಯಲಾಗುವುದಿಲ್ಲ. ಗಡಿಪ್ರದೇಶದ ಜನತೆ ಸಾಮಾನ್ಯವಾಗಿ ಎರಡೂ ಭಾಷೆಗಳನ್ನು ಅರಿತಿರುವುದು ಸಹಜವೇ ಆಗಿದೆ. ಪರಮತ ಸಹಿಷ್ಣುತೆ ಮಾತ್ರವಲ್ಲ; ಪರಭಾಷಾ ಸಹಿಷ್ಣುತೆ ಕೂಡ ಇದರಿಂದ ಸ್ಪಷ್ಟ. ಇದರಿಂದಾಗಿಯೇ ಭಾರತೀಯ ಭಾಷೆಗಳಲ್ಲಿ ಪರಸ್ಪರ ಕೊಡುಕೊಳೆ ದಟ್ಟವಾಗಿದ್ದು.

ಇದಕ್ಕೆ ಇನ್ನೊಂದು ಮಹತ್ವದ ಕಾರಣವೆಂದರೆ— ಭಿನ್ನ ಧರ್ಮ-ಮತ-ಪಂಗಡಗಳು ಭಾರತದ ಉದ್ದಗಲಕ್ಕೂ ವ್ಯಾಪಿಸಿದ್ದರೂ, ಇವರೆಲ್ಲರನ್ನೂ ಏಕ ಸೂತ್ರದಲ್ಲಿ ಬಂಧಿಸಿದ್ದು ಇಲ್ಲಿನ ಸಂಸ್ಕೃತಿ. ಭಾರತೀಯ ಸಂಸ್ಕೃತಿಯ ವಿಶಿಷ್ಟ ಅಂಶಗಳು ಭಾಷೆ-ಪ್ರದೇಶಗಳ ವೈಷಮ್ಯವನ್ನು ಮೀರಿ, ಗೋಡೆಗಳನ್ನು ದಾಟಿ ಎಲ್ಲರನ್ನೂ ಒಂದುಗೂಡಿಸಲು ಕಾರಣವಾಗಿವೆ. ಪರಸ್ಪರ ಆದಾನ-ಪ್ರದಾನ ನಡೆಯಲು ಇದೂ ಒಂದು ಮುಖ್ಯ ಕಾರಣ. ಇದರಿಂದಾಗಿಯೇ ಭಾರತೀಯ ಭಾಷಾ ಸಾಹಿತ್ಯದಲ್ಲಿ ಅಂತರ್ಗತವಾದ ಮೂಲಸ್ರೋತ ಒಂದೇ ಆಗಿದ್ದು. ಸಮಾನ ಭಾವನೆ, ಸಮಾನ ಮನೋಧರ್ಮ, ಸಮಾನ ದೃಷ್ಟಿಕೋನಗಳಿಂದಾಗಿ ಇಲ್ಲಿನ ಜನರ ತುಡಿತ-ಮಿಡಿತಗಳು ಏಕರೂಪವಾದದ್ದು. ಈ ಮೂಲ ಸ್ವರೂಪದ ಮೌಲಿಕ ಅಂಶಗಳೇ ಭಾರತೀಯ ಭಾಷೆಗಳನ್ನು, ಅವುಗಳ ಸಾಹಿತ್ಯವನ್ನು, ಭಾಷಾವಾರು ಗಡಿಗಳನ್ನು ಮೀರಿ ಬೆಳೆಯುವಂತೆ, ಪರಸ್ಪರ ಪ್ರಭಾವಿತಗೊಳ್ಳುವಂತೆ, ಪರಸ್ಪರ ಕೊಡುಗೆ ಸಾಧ್ಯವಾಗುವಂತೆ ಮಾಡಿದ್ದು.

ಭಾಷೆ ವಿಚಾರ ಸಂವಹನದ ಬಹು ಮುಖ್ಯವಾದ ಅಂಗ. ಪ್ರಾದೇಶಿಕ ಸಂಸ್ಕೃತಿಯ ವಿಭಿನ್ನತೆ, ಧಾರ್ಮಿಕ, ಸಾಮಾಜಿಕ, ಭೌಗೋಲಿಕ ಹಾಗೂ

ರಾಜಕೀಯ ವ್ಯತ್ಯಾಸಗಳಿಂದಾಗಿ ಭಾಷೆಯಲ್ಲಿನ ಶಬ್ದಗಳು ಅತ್ಯಂತ ವಿಶಿಷ್ಟವಾಗಿರುತ್ತವೆ. ಬೆಳೆಯುತ್ತಿರುವ ಭಾಷೆ ತನ್ನೆಲ್ಲ ಸಾಧ್ಯತೆಗಳನ್ನೂ ಬಳಸಿಕೊಂಡು ಸಮೃದ್ಧಗೊಳ್ಳುವಾಗ ಬೇರೆ ಬೇರೆ ಭಾಷಾ ಮೂಲಗಳಿಂದ ಶಬ್ದಗಳನ್ನು ಸ್ವೀಕರಿಸಬೇಕಾಗುತ್ತದೆ. ಜಗತ್ತಿನ ಯಾವುದೇ ಸಮೃದ್ಧ ಭಾಷೆಗೂ ಈ ಕೊಡು-ಕೊಳೆ ಅನಿವಾರ್ಯ. ಒಂದು ಭಾಷೆಗೆ ಸೇರಿದ ಪ್ರದೇಶವು ಆಡಳಿತಾತ್ಮಕ ಕಾರಣಗಳಿಗಾಗಿ ಇನ್ನೊಂದು ಪ್ರದೇಶಕ್ಕೆ ಸೇರುವುದು. ಪರಸ್ಪರ ಭಾಷಾ ಸಾಹಿತ್ಯದ ಅನುವಾದ ಕಾರ್ಯ. ಪ್ರಯೋಗಶೀಲತೆಯ ಮನೋಭಾವ ಇತ್ಯಾದಿ ಅನೇಕ ಅಂಶಗಳು ಭಾಷಾ ಕೊಡುಕೊಳೆಗೆ ಮಹತ್ವದ ಕಾರಣಗಳಾಗಿವೆ.

ಉದಾಹರಣೆಗೆ ಸಂಸ್ಕೃತವನ್ನೇ ತೆಗೆದುಕೊಳ್ಳಬಹುದು. ಒಂದು ಕಾಲಕ್ಕೆ ಸಂಪರ್ಕದ ಹಾಗೂ ಸಾಹಿತ್ಯದ ಭಾಷೆಯಾಗಿದ್ದ ಸಂಸ್ಕೃತವೂ ಇತರ ಭಾಷೆಗಳಿಂದ ಎರವಲು ತೆಗೆದುಕೊಂಡಿದೆ. ಇಂದು ಸಂಸ್ಕೃತದಲ್ಲಿ ಬಳಕೆಯಲ್ಲಿರುವ ನೀರ್, ಮೀನ್, ಕುಂತಳ ಇಂತಹ ಹಲವು ಶಬ್ದಗಳು ಕನ್ನಡದಿಂದಲೇ ಸಂಸ್ಕೃತಕ್ಕೆ ಹೋಗಿರುವುದಾಗಿ ದೃಢಪಟ್ಟಿದೆ. ಕನ್ನಡದ ನೆಲೆಯ ಭಾಷೆಗಳಾದ, ಒಂದೇ ಮೂಲ ಭಾಷಾವರ್ಗಕ್ಕೆ ಸೇರಿದ ತಮಿಳು, ತೆಲುಗು ಹಾಗೂ ಮಲಯಾಳಿ ಭಾಷೆಯಯಲ್ಲಿಯೂ ಕನ್ನಡ ಪದಗಳು ಸಾಕಷ್ಟು ಪ್ರಮಾಣದಲ್ಲೆ ಸೇರಿರುವುದು ಅಧ್ಯಯನದ ಮೂಲಕ ದೃಢಪಟ್ಟಿದೆ. ಅಷ್ಟೇಕೆ; ಕರ್ನಾಟಕಕ್ಕೆ ವ್ಯಾಪಾರ, ಸಾಂಸ್ಕೃತಿಕ ವಿನಿಮಯ, ಸಾಮ್ರಾಜ್ಯ ವಿಸ್ತಾರ ಮುಂತಾದ ಅನೇಕ ಕಾರಣಗಳಿಂದಾಗಿ ಬೇರೆ ದೇಶ-ಪ್ರದೇಶಗಳಿಂದ ಪ್ರವೇಶಿಸಿದ ಇತರ ಭಾಷಿಕರ ಭಾಷೆಗಳ ಮೇಲೆ ಪ್ರಭಾವ ಆಗಿರುವುದೂ ಸ್ಪಷ್ಟ. ಗ್ರೀಕ್ ನಾಟಕಗಳಲ್ಲಿ ಕನ್ನಡ ಶಬ್ದಗಳ ಸೇರ್ಪಡೆಯನ್ನು ಶ್ರೀ ಮಂಜೇಶ್ವರ ಗೋವಿಂದ ಪೈ ಸಂಶೋಧಿಸಿರುವುದು ಇಂದು ಇತಿಹಾಸವಾಗಿದೆ.

ಮೂಲ ದ್ರಾವಿಡ ಭಾಷೆಯಿಂದ ಟಿಸಿಲೊಡೆದ ತಮಿಳು-ತೆಲುಗು - ಮಲಯಾಳಂ-ತುಳು ಮುಂತಾದ ಭಾಷೆಗಳ ಜೊತೆ ಕನ್ನಡದ ಸಂಬಂಧ ಗಾಢವಾದದ್ದು ನಿಜ ಕನ್ನಡ-ತಮಿಳು-ರಾಜಮನೆತನಗಳು, ಕನ್ನಡ-ತೆಲಗು ಅರಸರುಗಳು ಪರಸ್ಪರ ಹೋರಾಟ ನಡೆಸುತ್ತಿದ್ದಾಗ, ಒಮ್ಮೆ ಅವರ ಕೈ, ಒಮ್ಮೆ ಇವರ ಕೈ ಮೇಲಾಗುತ್ತ, ಆಡಳಿತ ಬದಲಾಗುತ್ತ ಹೋದದ್ದು ಒಂದು ಭಾಷೆ ಇನ್ನೊಂದು ಭಾಷೆಯ ಮೇಲೆ ಪ್ರಭಾವ ಬೀರಲು ಕಾರಣವಾಯಿತು. ಹೀಗೆ ಭಾಷೆಯ ದೃಷ್ಟಿಯಿಂದಷ್ಟೇ ಅಲ್ಲ; ಸಾಹಿತ್ಯದ ವಸ್ತು, ಅಭಿವ್ಯಕ್ತಿಯ ಸ್ವರೂಪಗಳ ಮೇಲೂ ಕನ್ನಡ ಪ್ರಭಾವ ಬೀರಲು ಕಾರಣವಾಯಿತು.

ಕನ್ನಡ-ತಮಿಳಿಗಿಂತ, ಕನ್ನಡ ತೆಲುಗು ಸಂಬಂಧ ಹೆಚ್ಚು ಗಾಢವಾದದ್ದು. ತೆಲುಗು ಲಿಪಿ ಸಹ ಕನ್ನಡ ಲಿಪಿಗೆ ಹತ್ತಿರವಾದದ್ದು. ತೆಲುಗು ಮಹಾಭಾರತ

ವನ್ನು ಬರೆದ ನನ್ನಯ ಕನ್ನಡದ ಪಂಪನನ್ನು ಸಂಪೂರ್ಣವಾಗಿ ಆಧರಿಸಿದ್ದು, ಅವನಿಗೆ ಮಾರ್ಗದರ್ಶಕನಾಗಿದ್ದ ನಾರಾಯಣ ಭಟ್ಟನೆಂಬವನು ಕನ್ನಡಿಗನಾಗಿದ್ದ ನೆಂಬುದು ಇಂದು ಸಿದ್ಧವಾಗಿದೆ. ಅನೇಕ ತೆಲುಗು ಕವಿಗಳು ಕರ್ನಾಟಕ-ಆಂಧ್ರ ಭಾಷೆಗಳಲ್ಲಿ ಪರಿಣತಿ ಪಡೆದಿದ್ದರು. ಇದರಿಂದಾಗಿಯೇ ಕನ್ನಡದಿಂದ ತೆಲುಗಿಗೆ, ತೆಲುಗಿನಿಂದ ಕನ್ನಡಕ್ಕೆ ಅನುವಾದ ಕಾರ್ಯ ನಡೆಯುವುದೂ ಸಾಧ್ಯವಾಯಿತು.

ಶ್ರೀ ವಿಜಯ ಕವಿಯ 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂಬ ಮಾತು ಸತ್ಯವೆಂಬುದು ಮರಾಠಿಯ ಮೇಲೆ ಕನ್ನಡದ ಪ್ರಭಾವದಿಂದ ದೃಢಪಡುತ್ತದೆ. ಅಷ್ಟೇಕೆ; ಬ್ರಿಟಿಷರ ಆಡಳಿತ ಕಾಲ ದಲ್ಲಿ ಮುಂಬಯಿ ಕರ್ನಾಟಕದ ಆಡಳಿತದಲ್ಲಿ ಕನ್ನಡವೇ ಅಧಿಕೃತ ಭಾಷೆಯಾಗಿತ್ತು.

ಶ್ರೀ ಪ್ರ. ಗೋ. ಕುಲಕರ್ಣಿ, ತಮ್ಮ 'ಕನ್ನಡ ಭಾಷೆಯ ಚರಿತ್ರೆ' ಎಂಬ ಗ್ರಂಥದಲ್ಲಿ 'ಮರಾಠಿ'ಯ ಬಗ್ಗೆ ಬರೆಯುತ್ತ ಹೇಳುತ್ತಾರೆ. —'ಹತ್ತನೆಯ ಶತಮಾನದಿಂದೀಚೆಗೆ ಅಪಭ್ರಂಶ-ಕನ್ನಡಗಳ ಸಂಗಮದಿಂದ ಮರಾಠಿ ಭಾಷೆ ಜನ್ಮತಾಳಿತೆಂಬುದು ಗಮನಾರ್ಹ ಸಂಗತಿ. ಇದರಿಂದಾಗಿ ಮರಾಠಿಯ ಮೇಲೆ ಕನ್ನಡದ ಪ್ರಭಾವ ದಟ್ಟವಾಗಿರುವುದು ಸ್ಪಷ್ಟ. ಮರಾಠಿಯಲ್ಲಿ ಉಪಲಬ್ಧವಾದ ಹಳೆಯ ಗ್ರಂಥ ಜ್ಞಾನೇಶ್ವರಿಯಲ್ಲಿನ ಕೆಲವು ಅಭಂಗಗಳು ಕನ್ನಡದಲ್ಲಿಯೇ ರಚಿತ ವಾದವುಗಳು.

ಪ್ರಾಚೀನ ಕರ್ನಾಟಕದ ದೊರೆಗಳು ಕರ್ನಾಟಕದ ಹೊರಗಡೆ ಗುಜರಾತ ಬಂಗಾಲ, ನೇಪಾಲಗಳಲ್ಲಿ ಸಹ ಆಳ್ವಿಕೆ ನಡೆಸಿದ್ದು ತಿಳಿದು ಬರುತ್ತದೆ. ಗುಜರಾತ ದಲ್ಲಿ ಆಳಿದ ಸೇಂದ್ರಕರು ಕನ್ನಡಿಗರೆಂದೂ, ಚಾಲುಕ್ಯ ದೊರೆಗಳು ಗುಜರಾತ ವನ್ನು ಆಳಿದ್ದರೆಂದೂ ನೇಪಾಳದ ರಾಜಮನೆತನ ಕರ್ನಾಟಕ ಮೂಲದ್ದೆಂದೂ, ಮಧ್ವಾಚಾರ್ಯರ ಪ್ರಭಾವ ಗುಜರಾತದ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಆಗಿ ತ್ತೆಂದೂ, ಇವೆಲ್ಲದರ ಕಾರಣವಾಗಿ ಕರ್ನಾಟಕದ ಸಾಹಿತ್ಯ-ಸಂಸ್ಕೃತಿಯ ಬೇರು ಅಲ್ಲೆಲ್ಲ ಹರಡಲು ಕಾರಣವಾಯಿತೆನ್ನಲಾಗಿದೆ.

ಭಾರತೀಯ ಭಾಷಾ ಸಾಹಿತ್ಯ-ಮತ್ತು ಕನ್ನಡ

ಭಾರತೀಯ ಭಾಷಾ ಸಾಹಿತ್ಯಗಳ ಪ್ರಾರಂಭಿಕ ರಚನೆಗಳನ್ನು ಗಮನಿಸಿದರೆ ಧಾರ್ಮಿಕ: ಆಧ್ಯಾತ್ಮಿಕ ವಿಚಾರ ನಿರೂಪಣೆಯೇ ಪ್ರಮುಖವಾಗಿರುವ ಈ ಸಾಹಿತ್ಯದ ಹಿಂದೆ ಮಹೋನ್ನತ ಉದ್ದೇಶ, ನೀತಿ ಚಿಂತನೆಯೇ ಪ್ರಧಾನವಾಗಿರುವುದು ಕಂಡು ಬರುತ್ತದೆ. ಸಾಂಪ್ರದಾಯಿಕ ವಸ್ತುಗಳನ್ನು ಹೊಂದಿದ ಈ ಭಾಷಾ ಸಾಹಿತ

ಗಳಲ್ಲಿ ಸೌಂದರ್ಯ ಪ್ರಜ್ಞೆಯನ್ನು ಗುರುತಿಸಬಹುದಾದರೂ ಮಾನವೀಯ ದೃಷ್ಟಿ ಕೋನಕ್ಕೆ ನೀಡಿದ ಒತ್ತು ಗಮನಾರ್ಹವಾಗಿದೆ.

ಭಾರತೀಯ ಭಾಷಾ ಸಾಹಿತ್ಯಗಳ ಪ್ರೇರಕ ಶಕ್ತಿಯಾದ ಧರ್ಮಕ್ಕೆ ಸಂಬಂಧಿಸಿದ ವೇದ-ಉಪನಿಷತ್ತುಗಳು ಸಂಸ್ಕೃತದಲ್ಲಿ ರಚನೆ ಆದವು. ಈ ಗ್ರಂಥಗಳನ್ನು ಓದಿ ಅರಗಿಸಿಕೊಳ್ಳುವುದು ಪಂಡಿತರಿಗೆ ಮಾತ್ರ ಸಾಧ್ಯವಾಗುತ್ತಿತ್ತು. ಸಾಮಾನ್ಯ ಜನರ ಪಾಲಿಗೆ ಸಂಸ್ಕೃತ ಕಬ್ಬಿಣದ ಕಡಲೆಯಾದ್ದರಿಂದ ಸಾಮಾನ್ಯರ ಸಲುವಾಗಿ ಬೌದ್ಧರು ಪಾಲಿ ಹಾಗೂ ಪ್ರಾಕೃತದಲ್ಲಿ ಸಾಹಿತ್ಯ ರಚನೆ ಪ್ರಾರಂಭಿಸಿದರು. ಕ್ರಿ. ಪೂ. ಮೂರನೆಯ ಶತಮಾನದಲ್ಲಿ ಜೈನಯತಿ ಭದ್ರಬಾಹು ಭಟ್ಟಾರಕರನ್ನು ಚಂದ್ರಗುಪ್ತ ಮೌರ್ಯನು ಕರ್ನಾಟಕಕ್ಕೆ ಕರೆತಂದಂದಿನಿಂದ ಕರ್ನಾಟಕದಲ್ಲಿ ಪ್ರಾಕೃತ ಹಾಗೂ ಅಪಭ್ರಂಶ ಸಾಹಿತ್ಯ ಪ್ರಾರಂಭವಾಯಿತು. ಅನಂತರ ಸಂಸ್ಕೃತದಲ್ಲಿನ ಈ ಸಾಹಿತ್ಯ ಕನ್ನಡದಲ್ಲಿಯೂ ಅವತರಿಸತೊಡಗಿತು. ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರದ ಅರಸುಗಳ ಕಾಲದಲ್ಲಿ ಕರ್ನಾಟಕದ ಸಂಸ್ಕೃತಿ ನಾಡಿನ ಗಡಿಯಾಚೆಗೂ ತನ್ನ ಕಂಪನ್ನು ಪಸರಿಸಿತು. ಆಶ್ರಯದಾತರಾದ ಈ ಅರಸುಮನೆತನಗಳ ಆಸರೆಯಲ್ಲಿ ಅನೇಕ ಮಂದಿ ಉಭಯ ಭಾಷಾ ಕವಿಗಳೂ, ಚತುರ್ಭಾಷಾ ಕವಿಗಳೂ, ಷಡ್ಭಾಷಾಕವಿಗಳೂ, ಅಷ್ಟಭಾಷಾ ಕವಿಗಳೂ ಇದ್ದರೆಂದು ತಿಳಿದು ಬರುತ್ತದೆ. ಅಷ್ಟೇ ಅಲ್ಲದೇ ಕನ್ನಡದ ವಿದ್ವಾಂಸರು, ಕಲಾವಿದರು ತಮ್ಮ ಪಾಂಡಿತ್ಯಕ್ಕೆ ತಕ್ಕ ಆಸರೆ ಬಯಸಿ ಬೇರೆ ಪ್ರದೇಶಗಳಿಗೆ ಹೋಗುತ್ತಿದ್ದರು. ರಾಜಾಶ್ರಯದಲ್ಲಿ ಅವರಿಗೆ ಸೂಕ್ತ ಸೌಲಭ್ಯ-ಅವಕಾಶಗಳು ದೊರೆಯುತ್ತಿದ್ದವಾದರೂ, ಬಹುಭಾಷೆಯನ್ನು ಬಲ್ಲ ಇಂಥ ವಿದ್ವಾಂಸರು ತಮ್ಮ ಆಶ್ರಯವನ್ನು ಆಗಾಗ ಬದಲಿಸುತ್ತಲೂ ಇದ್ದರು. ಕಾಶ್ಮೀರದ ಬಿಲ್ಹಣ ವಿಕ್ರಮಾದಿತ್ಯನ ಆಸ್ಥಾನವನ್ನು ಅರಸಿ ಬಂದುದು ಇದಕ್ಕೆ ಒಂದು ಉದಾಹರಣೆ. ಆಗಿನ ರಾಜಾ ಮಹಾರಾಜಗುರುಗಳು ಸಾಹಿತ್ಯಪ್ರಿಯರೂ, ವಿದ್ವತ್ತನ್ನು ಗೌರವಿಸುವವರೂ, ಪರಮತ ಸಹಿಷ್ಣುಗಳೂ ಆಗಿದ್ದರಿಂದ ಶ್ರೇಷ್ಠ ಕವಿಗಳು ಯಾವ ಭಾಷೆ, ಮತ, ಪ್ರದೇಶಗಳಿಗೆ ಸೇರಿದವರಾಗಿದ್ದರೂ ಅವರಿಗೆ ಆಶ್ರಯವಿತ್ತು ಕಾವ್ಯಕೃಷಿಗೆ ಅವಕಾಶವೀಯುತ್ತಿದ್ದರು. ಅವರ ಪ್ರತಿಭೆಯನ್ನು ಗೌರವಿಸುತ್ತಿದ್ದರು.

ಕನ್ನಡದ ಅನೇಕ ಪ್ರತಿಭಾವಂತರು ಸಂಸ್ಕೃತ, ತಮಿಳು, ತೆಲುಗು, ಪ್ರಾಕೃತ, ಅಪಭ್ರಂಶ ಮುಂತಾದ ಭಾಷೆಗಳಲ್ಲಿ ಕಾವ್ಯ ರಚನೆ ಮಾಡಿ ಅನ್ಯಭಾಷಾ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡುವ ಪ್ರಯತ್ನ ಮಾಡಿದೆ. ಈ ಪಟ್ಟಿಯೇನೂ ಪರಿಪೂರ್ಣ ಅಲ್ಲ. ಆದರೂ ಕನ್ನಡಿಗರು ಅನ್ಯ ಭಾರತೀಯ ಭಾಷಾ ಸಾಹಿತ್ಯಕ್ಕೆ ನೀಡಿದ ಕೊಡುಗೆಯ ಸಾಮಾನ್ಯ ಕಲ್ಪನೆ ಇದರಿಂದ ಬಾರದಿರದು.

ಅ. ಸಂ.	ಗ್ರಂಥಕಾರರ ಹೆಸರು	ಕಾಲ	ಗ್ರಂಥದ ಹೆಸರು	ಭಾಷೆ	ಸ್ವರೂಪ
೧.	ಸಮಂತಭದ್ರ	ಕ್ರಿ. ಶ. ೪೦೦	ಆಪ್ತಮೀಮಾಂಸಾ	ಸಂಸ್ಕೃತ	ನ್ಯಾಯಮೀಮಾಂಸ
			ಯುಕ್ತ್ಯನುಶಾಸನ	,,	
			ಸ್ವಯಂಭುಸ್ತೋತ್ರ	,,	
			ಜಿನಸ್ತುತಿಶತಕ	,,	ಸ್ತೋತ್ರ ಕಾವ್ಯ
			ರತ್ನಕರಂಡಕಶ್ರಾವಕಾಚಾರ	,,	ಶಾಸ್ತ್ರಗ್ರಂಥ
			ಜಿನಸಿದ್ಧ	,,	
			ತತ್ವಾನುಶಾಸನ	,,	
			ಪ್ರಾಕೃತ ವ್ಯಾಕರಣ	,,	ವ್ಯಾಕರಣ
			ಪ್ರಮಾಣ ಪದಾರ್ಥ	,,	
			ಕರ್ಮ ಪ್ರಾಭೃತ ಟೀಕಾ	,,	
			ಗಂಧಹಸ್ತಿ ಮಹಾಭಾಷ್ಯ	,,	
೨.	ಪೂಜ್ಯಪಾದ	೪೦೦ರಿಂದ	ಜೈನೇಂದ್ರ ವ್ಯಾಕರಣ	,,	ವ್ಯಾಕರಣ
		೬೦೦ರ ಬಳಿಗೆ	ಸರ್ವಾರ್ಥ ಸಿದ್ಧಿ	,,	ಸ್ತೋತ್ರ
			ಇಷ್ಟೋಪದೇಶ		ನೀತಿ
			ದಶಭಕ್ತಿ	,,	ಶಾಸ್ತ್ರ
೩.	ಶ್ರೀವರ್ದನದೇವ	೬೫೦	ಚೂಡಾಮಣಿ	ತಮಿಳು	

ಅ.ಸಂ.	ಗ್ರಂಥಕಾರರ ಹೆಸರು	ಕಾಲ	ಗ್ರಂಥಗಳ ಹೆಸರು	ಭಾಷೆ	ಸ್ವರೂಪ
೪.	ನಾಗಾರ್ಜುನ	—	ನಾಗಾರ್ಜುನ ರಕ್ಷಸಂಪುಟ	ಸಂಸ್ಕೃತ	
೫.	ದುರ್ವಿನೀತ	೬೦೦	ಬೃಹತ್ಕಥೆ	ಸಂಸ್ಕೃತ	
			ಶಬ್ದಾವತಾರ	ಸಂಸ್ಕೃತ	
೬.	ವಿಮಲ ಸೂರಿ	—	ಪಉಮಚರಿಯಂ	ಪ್ರಾಕೃತ	ಮಹಾಕಾವ್ಯ
೭.	ನೃಪತುಂಗ	೮೧೪-೮೭೭	ಪ್ರಶ್ನೋತ್ತರಮಾಲಾ	ಸಂಸ್ಕೃತ	
೮.	ಅಸಗ	೮೫೩	ವರ್ಧಮಾನ ಪುರಾಣ	ಸಂಸ್ಕೃತ	ಕಾವ್ಯ
			ಶಾಂತಿನಾಥ ಪುರಾಣ	,,	,,
೯.	ವೀರಸೇನ	೮೧೬	ಧವಲ	ಸಂಸ್ಕೃತ-ಪ್ರಾಕೃತ	ಶಾಸ್ತ್ರ
೧೦.	ಜಿನಸೇನ	೮೩೮	ಜಯಧವಲ	ಸಂಸ್ಕೃತ	ಶಾಸ್ತ್ರ
			ಪಾರ್ಶ್ವಾಭ್ಯುದಯ	,,	ಕಾವ್ಯ
			ಆದಿಪುರಾಣ	,,	,,
೧೧.	ಗುಣಭದ್ರಾಚಾರ್ಯ	೮೯೮	ಆತ್ಮಾನುಶಾಸನ	,,	ಅಧ್ಯಾತ್ಮ
			ಜಿನದತ್ತಚರಿತ್ರ	,,	
೧೨.	ಶಾಕಟಾಯನ	೯೦೦	ಶಬ್ದಾನುಶಾಸನ	,,	ವ್ಯಾಕರಣ
			ಅಮೋಘವೃತ್ತಿ	,,	ಟೀಕೆ

ಕ್ರ. ಸಂ.	ಗ್ರಂಥಕಾರರ ಹೆಸರು	ಕಾಲ	ಗ್ರಂಥಗಳ ಹೆಸರು	ಭಾಷೆ	ಸ್ವರೂಪ
೧೩.	ಕುಮುದೇಂದು	—	ಸಿರಿಭೂವಲಯ	ಸರ್ವಭಾಷಾಮಯಿ	
೧೪.	ಗುಣನಂದಿ	೯೦೦	ಪ್ರಕ್ರಿಯಾವತಾರ	ಸಂಸ್ಕೃತ	”
೧೫.	ತ್ರಿವಿಕ್ರಮ	೧೨ನೇ ಶತಮಾನ	ದಮಯಂತೀ ಕಥಾ	ಸಂಸ್ಕೃತ	ಕಾವ್ಯ
೧೬.	ಪಂಪ	೯೨೦	ಜಿನೇಂದ್ರ ಪುರಾಣಮು	ತೆಲುಗು	ಕಾವ್ಯ
೧೭.	ಪೊನ್ನ	೯೫೦	ಗತಪ್ರತ್ಯಾಗತ	ಸಂಸ್ಕೃತ	
೧೮.	ಗಜಾಂಕುಶ	೯೪೫	?	ತೆಲುಗು	
೧೯.	ನೇಮಿಚಂದ್ರಾಚಾರ್ಯ	೯೫೦	ಗೊಮ್ಮಟಸಾರ	ಸಂಸ್ಕೃತ	ತಾತ್ವಿಕ
			ತ್ರಿಲೋಕಸಾರ	”	
೨೦.	ಅಜಿತಸೇನ	”	ಶೃಂಗಾರ ಮಂಜರಿ	ಸಂಸ್ಕೃತ	
			ಅಲಂಕಾರ ಚೂಡಾಮಣಿ	”	ಅಲಂಕಾರ ಗ್ರಂಥ
೨೧.	ಸೋಮಸೇನ ಸೂರಿ	೯೫೯	ಯಶಸ್ತಿಲಕ ಚಂಪೂ	ಸಂಸ್ಕೃತ	
			ನೀತಿ ವಾಕ್ಯಾಮೃತ		
೨೨.	ಪುಷ್ಪದಂತ	೯೬೫	ತಿಸಟ್ಠಿ ಮಹಾಪುರಿಸ	ಪ್ರಾಕೃತ	ಕಾವ್ಯ
			ಗುಣಾಲಂಕಾರ	”	
			ಜಸಹರ ಚರಿಯು	”	”
			ಣಾಯಕುಮಾರ ಚರಿಯು	”	”

ಅ. ಸಂ.	ಗ್ರಂಥಕಾರರ ಹೆಸರು	ಕಾಲ	ಗ್ರಂಥಗಳ ಹೆಸರು	ಭಾಷೆ	ಸ್ವರೂಪ
೨೩.	ವಾದಿರಾಜ ಸೂರಿ	೧೦೨೫	ಪಾರ್ಶ್ವನಾಥ ಚರಿತ	ಸಂಸ್ಕೃತ	ಕಾವ್ಯ
			ಯಶೋಧರ ಚರಿತ	,,	,,
			ಏಕೀಭಾವ ಸ್ತೋತ್ರ	,,	,,
			ನ್ಯಾಯನಿಶ್ಚಯ ವಿವರಣ	ಶಾಸ್ತ್ರ	
			ತ್ರೈಲೋಕ್ಯದೀಪಿಕಾ	,,	ಕಾವ್ಯ
೨೪.	ಮಲ್ಲಿಸೇಣ ಸೂರಿ	೧೦೪೭	ಮಹಾಪುರಾಣ	ಸಂಸ್ಕೃತ	ಕಾವ್ಯ
			ಸರಸ್ವತೀ ಮಂತ್ರಕಲ್ಪ	,,	ಶಾಸ್ತ್ರ
			ಭಾವಿನಿಕಲ್ಪ	,,	
೨೫.	ವಿಜ್ಞಾನೇಶ್ವರ	೧೧೦೦	ಮಿತಾಕ್ಷರ	ಸಂಸ್ಕೃತ	ಶಾಸ್ತ್ರ
೨೬.	ಜಯಕೀರ್ತಿ	೧೧೦೦	ಛಂದೋನುಶಾಸನ	ಸಂಸ್ಕೃತ	ಛಂದೋಗ್ರಂಥ
೨೭.	ಮೂರನೆಯ ಸೋಮೇಶ್ವರ	೧೧೨೭–೧೧೩೮	ಮಾನಸೋಲ್ಲಾಸ	ಸಂಸ್ಕೃತ	ವಿಶ್ವಕೋಶ
೨೮.	ಮಲ್ಲಿಕಾರ್ಜುನ ಪಂಡಿತಾರಾಧ್ಯ	೧೧೬೦	ಗಣಸಹಸ್ರ ನಾಮ		ಸಂಸ್ಕೃತ
			ಇಷ್ಟಲಿಂಗ ಸ್ತೋತ್ರ		ಕನ್ನಡ
			ಬಸವಮಹಾತ್ಮ್ಯೆ		

ಅ. ಸಂ.	ಗ್ರಂಥಕಾರರು	ಕಾಲ	ಗ್ರಂಥಗಳ ಹೆಸರು	ಭಾಷೆ	ಸ್ವರೂಪ
			ಲಿಂಗೋದ್ಭವದೇವ ಗದ್ಯವು		
			ಶಿವತತ್ವಸಾರವು		ತೆಲುಗು
			ಅಮರೇಶ್ವರಾಷ್ಟಕವು		
			ರುದ್ರಮಹಿಮ		
೨೯.	ರುದ್ರಭಟ್ಟ	೧೧೮೦	ರಸಕಲಿಕಾ	ಸಂಸ್ಕೃತ	ಶಾಸ್ತ್ರ
೩೦.	ಪಾಲ್ಕುರಿಕೆ ಸೋಮನಾಥ	೧೧೯೫	ಅನುಭವ ಸಾರವು	ತೆಲುಗು	
			ಅಕ್ಷರಾಂಕ ಗದ್ಯ	,,	
			ಅಕ್ಷರಾಂಕ ಪದ್ಯಮುಲು	,,	
			ಅಷ್ಟೋತ್ತರ ಶತನಾಮಗದ್ಯ	,,	
			ಚತುರ್ವೇದ ಸಾರವು	,,	
			ಚನ್ನಬಸವ ರಗಡ	,,	
			ಚನ್ನಮಲ್ಲ ಸೀಸಮುಲು	,,	
			ನಮಸ್ಕಾರ ಗದ್ಯ	,,	
			ಪಂಚರತ್ನಮುಲು	,,	
			ಪಂಚಪ್ರಕಾರ ಗದ್ಯ	,,	

ಅ.ಸಂ.	ಗ್ರಂಥಕಾರರು	ಕಾಲ	ಗ್ರಂಥಗಳ ಹೆಸರು	ಭಾಷೆ	ಸ್ವರೂಪ
			ಪಂಡಿತನಾಥ ಚರಿತ	,,	
			ಬಸವ ಪುರಾಣ	,,	
			ಬಸವಾಷ್ಟಕವು	,,	
			ಬಸವೋದಾಹರಣವು	,,	
			ಶರಣಬಸವ ಗದ್ಯ	,,	
			ಮಲ್ಲಮದೇವೀ ಪುರಾಣ	ಸಂಸ್ಕೃತ	
			ರುದ್ರಭಾಷ್ಯ		
			ವೃಷಭಾಷ್ಟಕ		
೩೧.	ನೀಲಕಂಠ ನಾಗನಾಥಾಚಾರ್ಯ	೧೨೦೦	ವೀರಮಾಹೇಶ್ವರರಾಚಾರ ಸಂಗ್ರಹ	ಸಂಸ್ಕೃತ	ವೇದಾಂತ
೩೨.	ಲಕ್ಷ್ಮೀದೇವ		ಸಾರೋದ್ಧಾರ	,,	
೩೩.	ಜಗದಾರಾಧ್ಯನಾಗೇಶ		ಶಿವಜ್ಞಾನ ಸಮುಚ್ಚಯ	,,	
೩೪.	ಶಾಲ ಶಾರ್ಙ್ಗದೇವ		ಸಂಗೀತರತ್ನಾಕರ	ಸಂಸ್ಕೃತ	ಸಂಗೀತ
೩೫.	ಮಧ್ವಾಚಾರ್ಯ		ಅಣುಭಾಷ್ಯ	ಸಂಸ್ಕೃತ	ವೇದಾಂತ
			ಉಪನಿಷದ್ಭಾಷ್ಯ	,,	
			ಬ್ರಹ್ಮಸೂತ್ರಭಾಷ್ಯ	,,	

ಅ.ಸಂ.	ಗ್ರಂಥಕಾರರು	ಕಾಲ	ಗ್ರಂಥಗಳ ಹೆಸರು	ಭಾಷೆ	ಸ್ವರೂಪ
			–ಮುಂತಾದ ೩೭ ಗ್ರಂಥಗಳು		
೩೬.	ತ್ರಿವಿಕ್ರಮ		ಪ್ರಾಕೃತ ವ್ಯಾಕರಣ	ಪ್ರಾಕೃತ	
೩೭.	ಹೇಮಾದ್ರಿ	೧೨೭೮	ಚತುರ್ವರ್ಗ ಚಿಂತಾಮಣಿ	ಸಂಸ್ಕೃತ	ವೈದ್ಯಗ್ರಂಥ
			ಆಯುರ್ವೇದ ರಸಾಯನ	,,	
೩೮.	ಹಸ್ತಿಮಲ್ಲ		ವಿಕ್ರಾಂತ ಕದನ	ಸಂಸ್ಕೃತ	ಕಾವ್ಯ
			ಮೈಥಿಲಿ ಕಲ್ಯಾಣ	,,	
			ಅಂಜನಾ ಪವನಂಜಯ	,,	
			ಸುಭದ್ರಾಪಹರಣ	,,	
೩೯.	ನಿಜಗುಣ ಶಿವಯೋಗಿ		ತರ್ಕಚಿಂತಾಮಣಿ	,,	ವೇದಾಂತ
			ದರ್ಶನಸಾರ	,,	
೪೦.	ಅಮೃತ ನಂದಿ		ವೈದ್ಯ ನಿಘಂಟು	,,	ಕೋಶ
೪೧.	ಗುರುದೇವ	೧೩೫೦	ವೀರಶೈವಾಚಾರ ಪ್ರದೀಪಿಕೆ	,,	
೪೨.	ನೀಲಕಂಠ ಶಿವಾಚಾರ್ಯ	೧೪೦೦	ಕ್ರಿಯಾಸಾರ		

ಇವರುಗಳಲ್ಲದೆ ಶ್ರೀಧರದೇವ, ಸಾಳ್ವ ಚಕುಪಾಧ್ಯಾಯ, ವೀರರಾಜ, ನಂಜರಾಜ, ನೃಸಿಂಹಭಟ್ಟ ಮುಂತಾದವರು ಸ್ತ್ರೀವೈದ್ಯ, ಬಾಲವೈದ್ಯ, ವೃಣ ವೈದ್ಯಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಬರೆದಿದ್ದಾರೆಂದು ಗೊತ್ತಾಗುತ್ತದೆ. ಇದಲ್ಲದೆ ರನ್ನಕಂದ ನಿಘಂಟು, ಶಬ್ದಸಾರ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕರ್ನಾಟಕ ಶಬ್ದಮಂಜರಿ, ಕಬ್ಬಿಗರ ಕೈಪಿಡಿ, ಕವಿಕಂಠಹಾರ, ಕರ್ನಾಟಕ ಸಂಜೀವನ, ವ್ಯಂಗಾಭಿಧಾನ, ನಾನಾರ್ಥ ರತ್ನಾಕರ, ಸಂಸ್ಕೃತ ಪದಾವಲಿ– ಮುಂತಾದ ಕೋಶಗಳು ಕನ್ನಡದಲ್ಲಿ ರಚಿತವಾದವು. ಹಸ್ತಿವೈದ್ಯ ಗೋವೈದ್ಯ, ಶಕುನ ಪ್ರಸಂಗ, ಜಾತಕತಿಲಕ, ಅಶ್ವವೈದ್ಯ ಮುಂತಾದವನ್ನು ಕುರಿತು–ವೀರ ಭದ್ರ, ಚಾಲುಕ್ಯ, ಕೀರ್ತಿವರ್ಮ, ಶ್ರೀಧರಾಚಾರ್ಯ, ಚಂದ್ರರಾಜ, ಅಭಿನವ ಚಂದ್ರ, ಪದ್ಮಣ ಮುಂತಾದವರು ಗ್ರಂಥಗಳನ್ನು ಬರೆದಿದ್ದಾರಾಗಿ ತಿಳಿಯುತ್ತದೆ. ಕಾಮಶಾಸ್ತ್ರಕ್ಕೆ ಸಂಬಂಧಿಸಿದಂತೆ ಮದನತಿಲಕ, ಸ್ಮರತಂತ್ರ, ಮನ್ಮಥವಿಜಯ, ಜನವಶ್ಯ, ವಾತ್ಸಾಯನ ಕಾಮಸೂತ್ರ ಟೀಕೆ, ಕೋಕ್ಕನ ಕಾಮ ಶಾಸ್ತ್ರಕ್ಕೆ ಟೀಕೆಗಳು ಬರೆಯಲ್ಪಟ್ಟಿದ್ದವು ಎಂದು ತಿಳಿದುಬರುತ್ತದೆ.

ಭಾರತೀಯತೆ ಮತ್ತು ಕನ್ನಡ

ಭಾರತೀಯ ಸಾಹಿತ್ಯಕ್ಕೆ ಕನ್ನಡದ ಕೊಡುಗೆಯೇನೆಂದು ವಿವರಿಸುವ ಮುನ್ನ ಭಾರತೀಯ ಸಾಹಿತ್ಯ ಎಂದರೇನು ಎಂಬುದನ್ನು ವಿಚಾರಿಸುವುದು ಅಗತ್ಯ. ಭಾರತದಲ್ಲಿ ಅನೇಕ ಭಾಷೆ–ಉಪಭಾಷೆಗಳು ವಿಪುಲಸಾಹಿತ್ಯವನ್ನು ಹೊಂದಿವೆ. ಈ ಎಲ್ಲ ಭಾಷೆಗಳಿಗೆ ತಮ್ಮದೇ ಆದ ವೈಶಿಷ್ಟ್ಯವಿರುವುದರ ಜೊತೆಗೆ ಸಾಮಾನ್ಯ ಸ್ವರೂಪವಿದೆ. ಹಾಗೆಂದು ಈ ಭಾರತೀಯ ಭಾಷೆಗಳು ಭಿನ್ನ ಭಿನ್ನ ಅವಧಿಯಲ್ಲಿ ಹುಟ್ಟಿ ಸಾಹಿತ್ಯ ನಿರ್ಮಿತಿಯಲ್ಲಿ ತೊಡಗಿವೆ. ಆದರೂ ಈ ಭಾಷಾ ಸಾಹಿತ್ಯದಲ್ಲಿ ಭಾರತೀಯತೆಯ ಪ್ರವಾಹ ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲದೇ ಭಾಷೆ ಸಂಸ್ಕೃತಿಯ ವಾಹಕವಾಗಿರುವುದರಿಂದ, ಭಾರತದ ಸಾಂಸ್ಕೃತಿಕ ಏಕತೆಗೆ ಭಾಷೆಯೂ ಬಹುಮಟ್ಟಿಗೆ ಕಾರಣವಾಗಿದೆ.

ಇಷ್ಟಾದರೂ ಭಾರತೀಯ ಸಾಹಿತ್ಯದಲ್ಲಿನ ಏಕರೂಪತೆಯೇನು? ಯಾವ ಸಮಾನ ಅಂಶಗಳು ಈ ಎಲ್ಲ ಭಾಷೆಗಳಲ್ಲಿ ಸಮಾನವಾಗಿ ಸ್ಪಂದಿಸಿವೆ ಎಂಬುದನ್ನು ತಿಳಿಯುವುದು ಅಷ್ಟು ಸುಲಭವಲ್ಲ. ಈ ತೊಡಕಿನ ನಡುವೆಯೇ ಕೆಲವು ಸಮಾನ ಅಂಶಗಳನ್ನು ಗುರುತಿಸಬಹುದು.

ಭಾರತೀಯ ಭಾಷೆಗಳಲ್ಲಿ ಅತ್ಯಂತ ಪ್ರಾಚೀನತಮವಾದ ಸಂಸ್ಕೃತ ತನ್ನ ಸಮೃದ್ಧಿಯಿಂದಾಗಿ ಇತರ ಭಾರತೀಯ ಭಾಷೆಗಳಿಗೆ ಪ್ರೇರಣೆ ನೀಡಿದ್ದು ಸುಳ್ಳಲ್ಲ. ಕನ್ನಡದ ಮಟ್ಟಿಗೂ ಆ ಮಾತು ನಿಜ. ಅದರಲ್ಲೂ ರಾಮಾಯಣ, ಮಹಾಭಾರತ,

ಭಾಗವತ, ಭಗವದ್ಗೀತೆಯಂತಹ ಗ್ರಂಥಗಳು ಬಹುತೇಕ ಭಾರತೀಯ ಭಾಷೆಗಳ ಪ್ರಾರಂಭಿಕ ರಚನೆಗಳಿಗೆ ಪ್ರೇರಣೆ-ಒತ್ತಾಸೆಯನ್ನು ನೀಡಿರುವುದು ಸ್ಪಷ್ಟ. ವಸ್ತುವಷ್ಟೇ ಅಲ್ಲ, ಛಂದಸ್ಸು, ಕಥಾ ಸಂವಿಧಾನ, ನಿರೂಪಣಾ ವಿಧಾನ, ಅಗತ್ಯ ವಾದ ಶಬ್ದ ಸಂಗ್ರಹ-ಎಲ್ಲವೂ ಸಂಸ್ಕೃತದಿಂದ ಒದಗಿರುವುದು ನಿಜ. ಇದಲ್ಲದೇ ಭಾರತೀಯ ಸಾಹಿತ್ಯವನ್ನು ಅಲ್ಲಲ್ಲಿಯ ಮತ-ಧರ್ಮಗಳು ನಿಯಂತ್ರಿಸುತ್ತಿದ್ದವು. ವೈದಿಕ-ಅವೈದಿಕ ದರ್ಶನಗಳು ಎಲ್ಲ ಭಾರತೀಯ ಭಾಷೆಗಳ ಮೇಲೂ ಸಮಾನ ಪ್ರಭಾವ ಬೀರಿವೆ.

ಮತಧರ್ಮಗಳ ವೈವಿಧ್ಯತೆ, ಜಾನಾಂಗಿಕ ವೈವಿಧ್ಯತೆ ಕನ್ನಡನಾಡಿನಲ್ಲಿಯೂ ಸ್ಪಷ್ಟವಾಗಿ ಕಾಣುತ್ತದೆ. ದ್ವೈತ-ಅದ್ವೈತ ಸಿದ್ಧಾಂತಗಳು, ಅವೈದಿಕ ದರ್ಶನ ಗಳಾದ ಬೌದ್ಧ-ಜೈನ ದರ್ಶನಗಳೂ ಕನ್ನಡದ ಮೇಲೆ ಪರಿಣಾಮ ಬೀರಿವೆ. ಅವೈದಿಕವಾದ ವೀರಶೈವ ಪರಂಪರೆ ಕನ್ನಡಕ್ಕೆ ನೀಡಿದ ಕೊಡುಗೆ ಅಪೂರ್ವವಾ ದುದು. ಭಾರತದ ಇತರ ಕೆಲವು ಭಾಷೆಗಳಲ್ಲಿ ಜೈನರು ಪಾಲುಪಡೆದಿರುವರಾದರೂ ಕನ್ನಡದ ಸಂದರ್ಭದಲ್ಲಿ ಅವರು ಸೃಷ್ಟಿಸಿದ ಒಂದು ಸಾಹಿತ್ಯದ ಪರಂಪರೆ ಅನ್ಯತ್ರ ಇಲ್ಲವೆಂದೇ ಹೇಳಬೇಕು. ಅಲ್ಲದೇ ವೈದಿಕ – ಅವೈದಿಕ ದರ್ಶನಗಳೆರಡೂ ರಾಮಾಯಣ-ಮಹಾಭಾರತಗಳಂತಹ ಮಹಾಕಾವ್ಯಗಳನ್ನು ಬಳಸಿಕೊಂಡಿರು ವುದು ಒಂದು ವಿಶೇಷ.

ಭಾರತೀಯ ಸಾಹಿತ್ಯದಲ್ಲಿನ ಸಾಮಾನ್ಯ ಅಂಶಗಳನ್ನು ಈ ಮೂರು ವಿಧಗಳಲ್ಲಿ ಗುರುತಿಸಬಹುದೆಂದು ತೋರುತ್ತದೆ. ಮೊದಲನೆಯದು ವಸ್ತು: ಎರಡನೆಯದು ಅನುಭವ: ಮೂರನೆಯದು: ಬದುಕಿನ ದೃಷ್ಟಿಕೋನ. ಪೌರಾಣಿಕ ಕಥಾ ನಕಗಳು, ವಿವಿಧ ಮತ-ಧರ್ಮಗಳ ಹಿನ್ನೆಲೆಯುಳ್ಳ ಧಾರ್ಮಿಕ ಗ್ರಂಥಗಳು, ಅಲಂಕಾರ, ಛಂದಸ್ಸು, ಹಾಗೂ ವ್ಯಾಕರಣಗಳಿಗೆ ಸಂಬಂಧಿಸಿದ ಶಾಸ್ತ್ರಗ್ರಂಥಗಳು, ವೈದಿಕ-ಅವೈದಿಕ ದರ್ಶನಗಳಿಗೆ ಸಂಬಂಧಿಸಿದ ತಾತ್ವಿಕ ಗ್ರಂಥಗಳು, ಇವಲ್ಲದೇ ವೈದ್ಯಕೀಯ, ಜ್ಯೋತಿಷ, ಗಣಿತ, ಹಸ್ತಸಾಮುದ್ರಿಕೆ, ಪಶುವೈದ್ಯಶಾಸ್ತ್ರ, ಕಾಮಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥಗಳು-ಇತ್ಯಾದಿ. ಇವಲ್ಲದೇ, ಎಲ್ಲ ಭಾಷೆ ಗಳಲ್ಲಿಯೂ ಸಮಾನವಾಗಿ ಪ್ರವಹಿಸಿದ ಭಕ್ತಿಮಾರ್ಗ, ಗೀತಾತ್ಮಕವಾದ ಲಯ, ಅನುಭಾವಿ ದೃಷ್ಟಿಕೋನ, ಜೀವನ ಮೌಲ್ಯಗಳ ವಿವೇಚನೆ ಕನ್ನಡಕ್ಕೂ ಸಮಾನ ವಾಗಿದ್ದು, ಭಾರತೀಯ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದೆ. ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳ ಪ್ರಕಟಣೆಗೆ ಕನ್ನಡದ ಕೊಡುಗೆ ಕಡಿಮೆಯದೇನಲ್ಲ.

ಶ್ರೀ ರಂ.ಶ್ರೀ. ಮುಗಳಿ ಭಾರತೀಯವಾದ ಯಾವುದೇ ಸಾಹಿತ್ಯವನ್ನು ವಿಭಾಗಿಸುವ ಈ ಮೂರು ವಿಧಾನಗಳನ್ನು ಮುಂದಿಡುತ್ತಾರೆ. ಪ್ರೌಢ ಅಥವಾ

ಮಾರ್ಗನಿಷ್ಠ ವಾಙ್ಮಯ, ಸುಲಭ ಅಥವಾ ದೇಸಿ ಪ್ರಚುರ ವಾಙ್ಮಯ ಮೂರನೆಯದು: ಜನಪದ ಸಾಹಿತ್ಯ. ಪ್ರೌಢಕಾವ್ಯ ಅಥವಾ ಮಾರ್ಗಕಾವ್ಯ ಪರಂಪರೆಯೆಲ್ಲವೂ ಸಂಸ್ಕೃತ ಕವಿಗಳಿಂದ ಎತ್ತಿಕೊಂಡ ವಸ್ತು-ವಿನ್ಯಾಸಗಳನ್ನು, ಅಷ್ಟೇ ಹಾಗೆಯೇ ಲಲಿತ-ಮಧುರ ಪದಬಂಧಗಳು, ವಿಪುಲವಾದ ವರ್ಣನಾ ವೈಖರಿ, ಶಬ್ದ ಚಮತ್ಕಾರ, ಭಾವ-ರಸಗಳ ನಿರೂಪಣೆ, ಕಲ್ಪನಾವಿಲಾಸಗಳನ್ನು ಒಳಗೊಂಡಿದೆ. ಶ್ರೀ ಮುಗಳಿ ಹೇಳುವಂತೆ ಇದನ್ನು ಒಂದು ರೀತಿಯಲ್ಲಿ ವ್ಯಕ್ತಿನಿರಪೇಕ್ಷವಾದ ಸಾಹಿತ್ಯ, ಅಥವಾ ಶಿಷ್ಟಸಾಹಿತ್ಯ ಎಂದು ಕರೆಯಬಹುದು. ಹಾಗೆಯೇ ಶಿವಶರಣರ ವಚನಗಳಲ್ಲಿ, ದಾಸರ ಕೀರ್ತನೆಗಳಲ್ಲಿ ಭಜನೆಗಳಲ್ಲಿ ಭಕ್ತಿಯ ಪ್ರವಾಹ ಓತಪ್ರೋತವಾಗಿ ಹರಿದದ್ದನ್ನು ಕಾಣಬಹುದು. ಭಾರತೀಯ ಸಾಹಿತ್ಯಕ್ಕೆಲ್ಲ ಸಾಮಾನ್ಯವಾಗಿರುವ ಭಕ್ತಿಯ ತನ್ಮಯತೆ, ಸರ್ವ ಸಮರ್ಪಣಭಾವ, ಭಾವಪರವಶತೆ, ಅನನ್ಯತೆಗಳು ದೇಸಿಯಲ್ಲಿಯೇ ಪ್ರಚುರವಾಗಿರುವುದು ಸಾಮಾನ್ಯ ವೈಶಿಷ್ಟ್ಯವಾಗಿದ್ದು, ಕನ್ನಡಕ್ಕೂ ಇದು ಸಮಾನವಾಗಿದೆ. ಜನಪದ ಸಾಹಿತ್ಯ, ಲೋಕಗೀತೆ ಮುಂತಾದ ಹೆಸರಿನಿಂದ ಕರೆಯಲಾಗುವ ಸಾಮಾನ್ಯ ಜನತೆಯ ದನಿಯಾದ, ಹಾಗೂ ಸಾಮಾನ್ಯ ಗ್ರಾಮೀಣರ ಬದುಕಿನ ನೋವು-ನಲಿವಿನ ಸ್ಪಂದನವಾದ ಸಾಹಿತ್ಯ-ಗೀತೆ, ಕಥನಗೀತೆ ನೃತ್ಯಗೀತೆ, ಲಾವಣಿ, ಒಗಟು, ಗಾದೆಮಾತುಗಳನ್ನು ಒಳಗೊಂಡಿದ್ದು, ಭಾರತೀಯ ಸಾಹಿತ್ಯದಲ್ಲೆಲ್ಲ ಇದು ಸಮಾನವಾಗಿದೆ. ಹೀಗೆ ಪ್ರಮುಖವಾಗಿ ಮೂರು ಅಂಶಗಳಲ್ಲಿ ಸಮಾನವಾಗಿ ಭಾರತೀಯ ಸಾಹಿತ್ಯವನ್ನು ಸೂತ್ರೀಕರಿಸಬಹುದು. ಭಾರತೀಯ ಸಾಹಿತ್ಯದಲ್ಲಿ ಪ್ರಕಟವಾಗುವ ಈ ಮೂಲಭೂತ ಸಮಾನತೆ-ಜೀವನದ ದೃಷ್ಟಿಕೋನ, ತಾತ್ವಿಕ ವಿವೇಚನೆ, ಅಧ್ಯಾತ್ಮಿಕ ಮೌಲ್ಯ, ನೈತಿಕ ಪ್ರಜ್ಞೆ, ಸಾಂಸ್ಕೃತಿಕ ಸತ್ವ- ಈ ಹಲವು ಅಂಶಗಳ ಮೂಲಕ ಕನ್ನಡದಲ್ಲಿ ಪ್ರಕಟವಾಗಿದೆಯೆಂಬುದನ್ನು ವಿಶ್ಲೇಷಿಸುತ್ತ ಮತ್ತು ಈ ಮೂಲಕವೇ ಕನ್ನಡದ ಸಾಹಿತ್ಯಕ್ಕೆ ಮಹತ್ವವನ್ನು, ಆದರ ಗಮನಾರ್ಹ ಕೊಡುಗೆಯನ್ನೂ ಗುರುತಿಸುವುದು ಅಗತ್ಯವಾಗಿದೆ.

ಭಾರತೀಯ ಸಾಹಿತ್ಯಕ್ಕೆ ಕನ್ನಡದ ಕೊಡುಗೆ

ವಿಪುಲ ಸಂಖ್ಯೆಯಲ್ಲಿರುವ ಭಾರತೀಯ ಭಾಷೆಗಳಲ್ಲಿ ಸಂಸ್ಕೃತ ಮತ್ತು ತಮಿಳನ್ನು ಬಿಟ್ಟರೆ ಅತ್ಯಂತ ಪ್ರಾಚೀನತೆಯ ಪರಂಪರೆ ಹೊಂದಿದ ಕನ್ನಡ ತನ್ನ ಸತ್ವದ ಮೂಲಕ ಭಾರತೀಯ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದಿದೆಯಷ್ಟೇ ಅಲ್ಲ; ಭಾರತೀಯ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನೂ ನೀಡಿದೆ. ಇಷ್ಟೇ ಅಲ್ಲ; ವಿಶ್ವಸಾಹಿತ್ಯಕ್ಕೆ ಗಮನಾರ್ಹ ಕಾಣಿಕೆ ನೀಡಬಲ್ಲ ಶಕ್ತಿ ನಮ್ಮ ಕನ್ನಡಕ್ಕೆ ಇದೆ ಎಂದರೆ ಅದು ಆತ್ಮಪ್ರಶಂಸೆಯ ಮಾತಲ್ಲ. ಬಹುಶಃ ಈ ಮಾತಿನ ಸತ್ಯತೆ

ಯನ್ನು ವಿಶ್ವಸಾಹಿತ್ಯ ಹಾಗೂ ಕನ್ನಡ ಸಾಹಿತ್ಯವನ್ನು ಚೆನ್ನಾಗಿ ತಿಳಿದವರು ಮನಗಾಣುತ್ತಾರೆ. ವಿಭಿನ್ನತೆಗಳ ನಡುವೆಯೂ ಸಂಪೂರ್ಣ ಭಾರತೀಯ ಪರಂಪರೆಗೆ ಸೇರಿದ ಕನ್ನಡದಿಂದ ಭಾರತೀಯ ಸಾಹಿತ್ಯ ಸ್ಫೂರ್ತವಾಗಿದ್ದು, ಪ್ರೇರಣೆ ಪಡೆದದ್ದು ಮಹತ್ವದ ಕೊಡಗೆ ಸಂದದ್ದು ಇಂದು ಐತಿಹಾಸಿಕ ಸತ್ಯ. ಕನ್ನಡದ ಈ ಕೊಡುಗೆಯನ್ನು ಅನೇಕ ಭಾಷೆಗಳ ಕವಿಗಳು, ಲೇಖಕರು ಮೆಚ್ಚುಗೆಯಿಂದ, ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ. ಆದರೆ ಈವರೆಗೆ ಭಾರತೀಯ ಸಾಹಿತ್ಯಕ್ಕೆ ಕನ್ನಡದಿಂದ ಸಂದ ಕೊಡುಗೆಯನ್ನು ಗುರುತಿಸುವಲ್ಲಿ ಯಾವುದೇ ಸಂಶೋಧನಾತ್ಮಕ ಪ್ರಯತ್ನ ನಡೆಯದೇ ಇರುವುದರಿಂದ ಅದರ ಗಾತ್ರ–ಪಾತ್ರಗಳ ಸರಿಯಾದ ಕಲ್ಪನೆ ನಮಗೆ ಬಾರದೇ ಹೋಗಿದೆ. ಏಕೆಂದರೆ ಕನ್ನಡದ ಮೇಲೆ ಇತರ ಭಾಷೆಗಳ ಪ್ರಭಾವದ ಬಗೆಗೆ ನಾವು ಯೋಚಿಸಿದಷ್ಟು, ಕನ್ನಡ ಇತರ ಭಾಷೆಗಳಿಗ ನೀಡಿದ ಕಾಣಿಕೆಯೇನು ಎಂಬುದರ ಬಗೆಗೆ ಚಿಂತಿಸಿಲ್ಲ.

ಯಾವುದೇ ಒಂದು ಭಾಷೆಯು, ಅಥವಾ ಕವಿಯ ಎಲ್ಲ ಕೃತಿಗಳೂ ಮಹತ್ವದ ವಾಗಿರುತ್ತವೆಯೆಂಬುದಾಗಲೀ, ತೂಕದ್ದಾಗಿರುತ್ತವೆಯೆಂದಾಗಲೀ ಹೇಳಲಾಗುವು ದಿಲ್ಲ. ಸತ್ವಪೂರ್ಣವಾದ ಸಾಹಿತ್ಯ ಸೃಷ್ಟಿಯ ಜೊತೆಯಲ್ಲಿ ಸಾಮಾನ್ಯವಾದ ಸಾಹಿತ್ಯವೂ ಜನಿಸುವದು ಸಹಜ. ಬೆಳೆ ಇದ್ದಲ್ಲಿ ಕಳೆ ಇರುವುದು ಅನಿವಾರ್ಯ. ಆದರೆ ಇದರಿಂದ ಒಂದು ಸಾಹಿತ್ಯದ ಶ್ರೀಮಂತಿಕೆ ಕುಂದಿಲ್ಲ.

ಸಮೃದ್ಧ ಭಾಷೆಯಾದ ಕನ್ನಡಕ್ಕೆ ೧೫೦೦ ವರ್ಷಗಳಷ್ಟು ಹಳೆಯದಾದ ಸುದೀರ್ಘ ಸಾಹಿತ್ಯಕ ಪರಂಪರೆ ಇದೆ. ಈ ವಿಶಾಲವಾದ ಅವಧಿಯ ಹರಹಿನಲ್ಲಿ ವಿಪುಲ ಸಂಖ್ಯೆಯಲ್ಲಿ ನಿರ್ಮಾಣಗೊಂಡ ಸಾಹಿತ್ಯ ಕೃತಿಗಳ ಸಂಖ್ಯೆಯನ್ನು ಗುರುತಿ ಸುವುದೂ ಕಷ್ಟದ ಕೆಲಸ, ನಿಜ; ಹಳಮೆಯೊಂದೇ ಹಿರಿಮೆಯ ಅಳತೆಗೋಲಲ್ಲ. ಅಥವಾ ಕವಿಗಳ-ಕೃತಿಗಳ ಸಂಖ್ಯೆಯೊಂದೇ ಸಾಹಿತ್ಯದ ಶ್ರೇಷ್ಠತೆಯನ್ನು ಗುರುತಿ ಸುವ ಮಾನದಂಡವಲ್ಲ. ಆದರೆ ಸಂಖ್ಯೆಯ ದೃಷ್ಟಿಯಿಂದಷ್ಟೇ ಅಲ್ಲ. ಸತ್ವದ ದೃಷ್ಟಿಯಿಂದ ಕೂಡ ಕನ್ನಡ ಅನೇಕ ಅಮೂಲ್ಯ ಕೃತಿಗಳನ್ನು ನೀಡಿದೆ. ವಿಪುಲ ಸಂಖ್ಯೆಯ ಸಾಹಿತ್ಯ ಸೃಷ್ಟಿಯಲ್ಲಿ ಅನೇಕ ಅನರ್ಘ್ಯ ರತ್ನಗಳೂ ಪಡಿಮೂಡಿವೆ ಎಂಬುದೂ ಅಷ್ಟೇ ನಿಜ. ಯಾವುದೇ ಭಾಷೆಗಾದರೂ ಗೌರವ ತರಬಲ್ಲಂತಹ ಸಾಕಷ್ಟು ಕೃತಿಗಳನ್ನು ಕನ್ನಡ ಹೊಂದಿರುವುದು ಹೆಮ್ಮೆಯ ಸಂಗತಿಯಲ್ಲದೇ ಮತ್ತೇನು ?

'ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಗುರು, ಪೋಷಕ' — ಎಂಬ ಬಿ.ಎಂ. ಶ್ರೀ ಅವರ ಮಾತನ್ನು ಕನ್ನಡದ ಮೊದಲ ಗ್ರಂಥಗಳ ಸಂದರ್ಭದಲ್ಲಿ ಸ್ಮರಿಸಿಕೊಳ್ಳಲೇಬೇಕು. ಕನ್ನಡದ ಮೊದಲ ಉಪಲಬ್ಧಗ್ರಂಥ 'ಕವಿರಾಜಮಾರ್ಗ' ಒಂದು ಶಾಸ್ತ್ರಗ್ರಂಥವಾದರೂ ತನ್ನ ವೈಚಾರಿಕ ಪ್ರಖರತೆಯ ಮೂಲಕ ವಿಶಿಷ್ಟತೆ

ಯನ್ನು ಪ್ರಕಟಿಸುತ್ತದೆ. "ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರ ಮುಮಂ, ಪರಧರ್ಮಮುಮಂ" ಎಂಬ ಅಮೂಲ್ಯ ನೀತಿ ಪ್ರಕಟಿಸುವ ಈ ಕೃತಿ ಭಾರತೀಯನಾದ ಆರ್ಷೇಯ ದೃಷ್ಟಿಯನ್ನು ಸ್ಪಷ್ಟ ಮಾತುಗಳಲ್ಲಿ ಪ್ರಕಟಿಸುವ ಮಹತ್ವದ ಕೃತಿ.

ಆಧಿಕವಿ ಪಂಪನು ಲೌಕಿಕ-ಆಗಮಿಕ ಕಾವ್ಯಗಳೆರಡನ್ನೂ ಬರೆದ ಸವ್ಯಸಾಚಿ, ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಕೃತಿ ರಚನೆ ಮಾಡಿದವನು. 'ವಿಕ್ರಮಾರ್ಜುನ ವಿಜಯದಲ್ಲಿ' ಭಾರತದ ಮಹಾನ್ ವ್ಯಕ್ತಿಗಳನ್ನು ತನ್ನ ಸ್ವಂತಿಕೆಯಿಂದ ಅಪೂರ್ವ ಮೆರಗನ್ನಿತ್ತು ತಡೆದುನಿಲ್ಲಿಸಿದ್ದಾನೆ. ಪಂಪನ ಕರ್ಣ ಅಂತಹ ಅಪೂರ್ವ ಪಾತ್ರಗಳಲ್ಲಿ ಒಂದು. ವ್ಯಾಸಭಾರತದಲ್ಲಿ ಕಾಣದ ದುರಂತದೃಷ್ಟಿ ಜೀವ ಪಡೆಯುವುದು ಪಂಪನ ಕರ್ಣನಲ್ಲಿ. ಪಂಪಭಾರತದ ಪ್ರತಿಯೊಂದು ಪಾತ್ರವೂ ರಕ್ತ-ಮಾಂಸಗಳನ್ನು ತುಂಬಿ ಕೊಂಡು ಉಸಿರು ಪಡೆಯುತ್ತವೆ. ಅದು ಕೇವಲ ವ್ಯಾಸಭಾರತದ ಪಡಿನೆಳಲಲ್ಲ. ಮಹಾಕವಿಯೊಬ್ಬನ ಪ್ರತಿಭೆ ಸರ್ವಜ್ಞಾತವಾದ ವಸ್ತುವೊಂದನ್ನು ಎತ್ತಿಕೊಂಡೂ ಹೇಗೆ ಸ್ವಂತಿಕೆಯನ್ನು ಮೆರೆಯಬಲ್ಲುದೆಂಬುದಕ್ಕೆ ಉದಾಹರಣೆ. ಪಂಪನ ಆದಿ ಪುರಾಣ ಮಾನವ ಬದುಕಿನ ಆಧ್ಯಾತ್ಮಿಕ ಸಾಧನೆಯ ಹಂತಗಳನ್ನು ಆದಿತೀರ್ಥಂಕರನ ಜೀವನ ವಿಕಾಸದಲ್ಲಿ ಕಾಣುವ ಪ್ರಯತ್ನತ. ಧರ್ಮವನ್ನೂ ಕಾವ್ಯಧರ್ಮವನ್ನೂ ಸಂತುಲಿತವಾಗಿ ಒಂದು ಕಾವ್ಯದಲ್ಲಿ ಹೇಗೆ ದುಡಿಸಿಕೊಳ್ಳಬಹುದೆನ್ನಲು ಪಂಪನ ಆದಿಪುರಾಣ ಒಂದು ಉತ್ತಮ ಸಾಕ್ಷ್ಯ. ಆದರಿಂದಾಗಿಯೇ ಪಂಪ ಕನ್ನಡದ ಕಾಳಿದಾಸ ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ.

ಶಕ್ತಿಶಾಲಿ ಕಾವ್ಯವೊಂದನ್ನು ನೀಡುವುದರ ಮೂಲಕ ಭಾರತೀಯ ಸಾಹಿತ್ಯದ ಘನತೆಯನ್ನು ಹೆಚ್ಚಿಸಿದವನು ರನ್ನ. 'ಕವಿರತ್ನ' ನೆಂದು ಹೇಳಿಕೊಂಡ ರನ್ನ 'ತನ್ನ ಕೃತಿರತ್ನವನ್ನು ಪರೀಕ್ಷಿಸಲು ಎಂಟೆದೆ ಬೇಕು' ಎಂಬ ಆತ್ಮಪ್ರತ್ಯಯದ ಮಾತುಗಳನ್ನಾಡಿದ ಉಜ್ವಲ ಕವಿ. ಇವನ "ಗದಾಯುದ್ಧ" ಭಾರತೀಯ ಸಾಹಿತ್ಯ ದಲ್ಲೇ ಒಂದು ಅಪೂರ್ವ ಕೃತಿ. ಯಾವುದೇ ಭಾರತೀಯ ಭಾಷೆಯಲ್ಲಿಯೂ ಇಂತಹ ಕೃತಿ ವಿರಳವಾಗಿಯೇ ಸಿಗಬಲ್ಲದು. ಅದ್ಭುತವಾದ ನಾಟ್ಯ ಶಕ್ತಿ, ಅಷ್ಟೇ ಅದ್ಭುತವಾದ ಪಾತ್ರ ಸೃಷ್ಟಿ ಹಾಗೂ ಕನ್ನಡಕ್ಕೆ ಅಪೂರ್ವವಾದ ದುರಂತ ದೃಷ್ಟಿಯ ಮೂಲಕ ಸರ್ಸ್ವತಿಯ ಭಂಡಾರದ ಮುದ್ರೆಯನ್ನೊಡೆದ ರನ್ನನ ಕವಿತಾ ಶಕ್ತಿಗೆ ಮಾರುಹೋಗದ ಸಹೃದಯರಿಲ್ಲ. ರನ್ನನ ಈ ಕೃತಿರತ್ನ ಭಾರತೀಯ ಸಾಹಿತ್ಯಕ್ಕೆ ಅಷ್ಟೇ ಅಲ್ಲ; ವಿಶ್ವಸಾಹಿತ್ಯಕ್ಕೂ ಮಹತ್ವದ ಕೊಡುಗೆಯಾಗುವಲ್ಲಿ ಯಾವ ಸಂದೇಹವೂ ಇಲ್ಲ.

ಈ ದೇಶದ ನಡಿಯಾಚೆಗೂ, ತನ್ನ ಸತ್ವದ ಮೂಲಕ ಅಸ್ತಿತ್ವವನ್ನು ಪ್ರಕಟಿ ಸುವ ಬೆಲೆಯುಳ್ಳ ಕಾಣಿಕೆಗಳನ್ನು ಕೊಟ್ಟ ವೀರಶೈವ-ಮಾಧ್ವದರ್ಶನಗಳನ್ನು,

ಹೊರಗಿನಿಂದ ಕನ್ನಡನಾಡಿಗೆ ಬಂದು ಕನ್ನಡದ ಮೂಲಕವೇ ಗಡಿಯಾಚೆಗೆ ಚಿಮ್ಮಿದ ಜೈನ, ಶಾಂಕರ, ವೈಷ್ಣವ ದರ್ಶನಗಳ ಕೊಡುಗೆಯನ್ನು ಇತಿಹಾಸ ಅಚ್ಚಳಿಯದೆ ದಾಖಲಿಸಿದೆ.

"ಹನ್ನೆರಡನೆಯ ಶತಮಾನದ ಶಿವಶರಣರ ಅನುಭಾವ ಸಾಹಿತ್ಯದಿಂದ ಭಾರತೀಯ ಸಾಹಿತ್ಯದಲ್ಲೇ ಒಂದು ಹೊಸ ಯುದ್ಧ ನಿರ್ಮಾಣ. ವೈದಿಕ ಪರಂಪರೆಯ ಪ್ರತಿಭಟನೆಯಾಗಿ ಮೂಡಿಬಂದ ದರ್ಶನ ಸಹಬಾಳ್ವೆ, ಸಮಾನತೆ. ಸಜ್ಜನಿಕೆ, ವಿಶ್ವ ಮಾನವತೆಗಳ ಅಡಿಗಲ್ಲಾಗಿ ನಿಂತು ಸತ್ವಪೂರ್ಣ ಸಾಹಿತ್ಯ ಸೃಷ್ಟಿಸಿತು ಅನುಭಾವದ ಮಹಾಪ್ರಭು ಅಲ್ಲಮ, ಅನನ್ಯ ಸಾಧಕಿ: ಅಕ್ಕಮಹಾದೇವಿ, ಮಹಾನುಭಾವ ಬಸವಣ್ಣ, ಕರ್ಮಯೋಗಿ ಸಿದ್ಧರಾಮ ಮುಂತಾದ ಅನೇಕ ಶಿವಶರಣರು ಬಿತ್ತರಿಸಿದ ಅನುಭಾವದ ದಿವ್ಯ ಮನುಜ ಮತ ವಿಶ್ವಪಥಕ್ಕೆ ಹಗಲುಬೆಳಕಾಯಿತು. ಮಾತಿಗೆ ಮೀರಿದ ದಿವ್ಯ ಅನುಭಾವದ ಅನುಭವವನ್ನು ಮಾತಿನ ಮೂಲಕವೇ ಕಟ್ಟಿಕೊಡುವ ಭಾವಗೀತಾತ್ಮಕ ಗದ್ಯಸೃಷ್ಟಿ ವಿಶ್ವ ಸಾಹಿತ್ಯಕ್ಕೆ ಕನ್ನಡದ ಬೆಲೆಯುಳ್ಳ ಕಾಣಿಕೆ, ಆಳವಾದ ಜೀವನಾನುಭವ, ನಿಷ್ಠುರವಾದ ಆತ್ಮನಿರೀಕ್ಷಣ, ಅಹಂಕಾರ–ಮಮಕಾರಗಳ ಕಟುವಿಂಡಬನೆ, ಭಕ್ತಿ–ಜ್ಞಾನ ವಿರಕ್ತಿಗಳ ಸಂಗಮವಾಗಿ ರೂಪುತಳೆದ ಶರಣರ ಒಂದೊಂದು ನುಡಿಯೂ ಒಂದೊಂದು ರತ್ನ. ವಿಶ್ವಧರ್ಮದ ಕೈಗನ್ನಡಿ. ಉದಾಹರಣೆಗಾಗಿ ಕೆಲವು ಸೂಳ್ನುಡಿಗಳನ್ನು ಪರೀಕ್ಷಿಸಬಹುದು.

"ಜ್ಯೋತಿ ಮುಟ್ಟಿದುದೆಲ್ಲ ಜ್ಯೋತಿಯೇ ಅಪ್ಪುದಯ್ಯ" ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ" 'ಲೋಕದ ಡೊಂಕು ನೀವೇಕೆ ತಿದ್ದುವಿರಿ', "ನಿಮ್ಮ ತನುವ ನೀವು ಸಂತೈಸಿಕೊಳ್ಳಿ" 'ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೊ, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೆ ಮರ್ತ್ಯಲೋಕ' 'ಒಳಗೆ ತೊಳೆಯಲರಿಯದೆ ಹೊರಗೆ ತೊಳೆದು ಕುಡಿವುತ್ತಿದ್ದರಯ್ಯಾ ಪಾದೋದಕ ಪ್ರಸಾದವ" 'ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಮೀಸೆ ಮೂಡಿ ಬಂದರೆ ಗಂಡೆಂಬರು, ಒಳಗಿನ ಆತ್ಮ ಗಂಡೂ ಅಲ್ಲ; ಹೆಣ್ಣೂ ಅಲ್ಲ ಕಾಣಾ" 'ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ" 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ.' 'ಕೊಲ್ಲುವವನೆ ಮಾದಿಗ. ಹೊಲಸು ತಿಂಬುವವನೆ ಹೊಲೆಯ" 'ಆಚಾರವೇ ಸ್ವರ್ಗ; ಅನಾಚಾರವೆ ನರಕ" 'ದಯವಿಲ್ಲದ ಧರ್ಮವಾವುದಯ್ಯಾ, ದಯೆಯೆ ಬೇಕು ಸಕಲ ಪ್ರಾಣಿಗಳಲ್ಲಿ' 'ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಗಳಿಗೆ ಅಂಜಿದಡೆಂತಯ್ಯ'— ಇಂತಹ ಸೂಳ್ನುಡಿಗಳ ಸಂತೆಯೇ ನೆರೆಯುತ್ತದೆ. ವಚನೋದ್ಯಾನದಲ್ಲಿ ಶ್ರೀ ಎಂ. ಆರ್. ಶ್ರೀ ಅವರು ಹೇಳುವಂತೆ — "ವಚನಗಳು

ನಮ್ಮ ಕನ್ನಡ ಸಾಹಿತ್ಯದ ಉಪನಿಷತ್ತುಗಳು, ಆ ಕವಿಗಳು ನಮ್ಮ ನಾಡಿನ ರಸಋಷಿಗಳ ಉಪದೇಶ ಸಾರವಾದ ಸಾಹಿತ್ಯವೇ ದರ್ಶನ".

'ಸತ್ಯವೆಂಬುದೆ ಹರನು; ಹರನೆಂಬುದೆ ಸತ್ಯ' ಎಂಬ ಅಮರ ಉಕ್ತಿಯನ್ನು ಸಾರಿದ ರಾಘವಾಂಕನ ಹರಿಶ್ಚಂದ್ರ ಕಾವ್ಯ ಕವಿಯೊಬ್ಬನ ಕಾವ್ಯಸಿದ್ಧಿಯ ರಸ ಘಟ್ಟ. ಹಳೆಯದಾದ ಕಥಾಬೀಜವನ್ನು ತನ್ನ ಪ್ರತಿಭೆಯ ಕುಲುಮೆಯಲ್ಲಿ ಕರಗಿಸಿ, ಭಟ್ಟಿಯಿಳಿಸಿ ಒಪ್ಪಹಾಕಿ ವಿನೂತನ ರೂಪ ನೀಡಿದ ರಾಘವಾಂಕ ಭಾರತೀಯ ಸಾಹಿತ್ಯಕ್ಕೆ ಕೊಡುಗೆ ನೀಡಿದ ಇನ್ನೊಬ್ಬ ಕವಿ. ಸುಂದರವೂ, ಬಂಧುರವೂ ಆದ ತನ್ನ 'ಹರಿಶ್ಚಂದ್ರ ಕಾವ್ಯ'ದಲ್ಲಿ ನೂತನವೆನಿಸುವ ನಾಟಕೀಯ ಸಂವಿಧಾನ, ರಸದೃಷ್ಟಿಯ ನವ್ಯಸೃಷ್ಟಿ, ಕಾವ್ಯಾತ್ಮಕ ನಿರೂಪಣೆಯ ಮೂಲಕ ಸಾರ್ವಕಾಲಿಕ ಸತ್ಯವನ್ನು ಪ್ರಕಟಿಸಿದ ಅಮರಕೃತಿಯನ್ನು ನಿರ್ಮಿಸಿದ್ದಾನೆ.

ರಗಳೆಯ ಕವಿಯೆಂದೇ ಹೆಸರಾದ ಹರಿಹರ ಶಿವಶರಣರ ಬದುಕಿನ ಪುಣ್ಯ ಕಥೆಯನ್ನು, ಅನನ್ಯ ಭಕ್ತಿ ನಿರ್ಭರವಾಗಿ ವರ್ಣಿಸಿದ್ದಾನೆ. ಆವೇಶಪೂರ್ಣ ಭಕ್ತಿಯ ನಿರ್ಝರಣಿಯಲ್ಲಿ ಅಲ್ಲಿನ ಪಾತ್ರಗಳನ್ನು ತೇಲಾಡಿಸಿದ್ದಾನೆ. ಕವಿಕರ್ಮ ಕೌಶಲದ ಪರಿಪಾಕವಾಗಿ, ಅಪೂರ್ವ ಪ್ರತಿಭೆಯ ಪತಾಕವಾಗಿವೆ. ಹರಿಹರ ತನ್ನದೇ ಒಂದು ಹೊಸಮಾರ್ಗವನ್ನು ಸೃಷ್ಟಿಸಿದ ಪ್ರವರ್ತಕ ಕವಿ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಯುಗಮಾನವನ್ನೇ ಸೃಷ್ಟಿಸಿದ ಕೀರ್ತಿವಂತ ಕುಮಾರವ್ಯಾಸ. ಯಾವುದೇ ಸಾಹಿತ್ಯದ ಕವಿಯೊಬ್ಬನ ಕಾವ್ಯ ಕೌಶಲಕ್ಕೂ, ಪಾಂಡಿತ್ಯಕ್ಕೂ ನಿಕಷವಾಗಿರುವ 'ಕರ್ಣಾಟಕ ಭಾರತ ಕಥಾ ಮಂಜರಿ' ಮೇರುಕೃತಿ. ಅಪಾರ ಜೀವನಾನುಭವ, ಅಪೂರ್ವ ಸಂವಿಧಾನ ಕೌಶಲ, ಸಂವಾದದ ಸ್ವಾರಸ್ಯ, ಜೀವಂತಿಕೆ ತುಂಬಿ ತುಳುಕುವ ಪಾತ್ರ ಸೃಷ್ಟಿ, ವಿವಿಧ ರಸಗಳ ಉತ್ಕಟ ನಿರೂಪಣೆ, ಬೆರಗು ಹುಟ್ಟಿಸುವ ಸನ್ನಿವೇಶ ನಿರ್ಮಾಣ, ದೇಶ-ಕಾಲಗಳನ್ನು ಮೀರಿ ನಿಲ್ಲುವ ಅಂತರ್‌ದೃಷ್ಟಿ-ಯಾವ ರೀತಿಯಿಂದ ನೋಡಿ ದರೂ ಕುಮಾರವ್ಯಾಸನ ಭಾರತ ಭಾರತೀಯ ಸಾಹಿತ್ಯದ ಭಾರತಗಳ ಮಾಲಿಕೆ ಯಲ್ಲಿ ಒಂದು ಮಹೋನ್ನತ ಕೃತಿರತ್ನ. ಅದ್ಭುತ ಕಲ್ಪನಾಶಕ್ತಿ, ಅಪೂರ್ವ ರೂಪಕಗಳ ನಿರ್ಮಾಣ ಕೌಶಲಗಳನ್ನು ಗಮನಿಸಿದರೆ ಇದು ಕವಿಯೊಬ್ಬನ ಜೀವ ಮಾನದ ಸುದೀರ್ಘ ತಪಸ್ಸಿನಿಂದ ಕಡೆದು ನಿಲ್ಲಿಸಿದ ಮಹಾಕೃತಿ ಎನ್ನುವಲ್ಲಿ ಸಂದೇಹವೂ ಕಾಣಿಸದು.

ಭಾರತೀಯ ದಾಸವಾಙ್ಮಯಕ್ಕೆ, ಕರ್ನಾಟಕ ಸಂಗೀತ ಪರಂಪರೆಗೆ ಬೆಲೆ ಯುಳ್ಳ ಕೊಡುಗೆಯಿತ್ತ ಪುರಂದರದಾಸರು-ಕನಕದಾಸರು ಕನ್ನಡದ ದಾಸ

ರೇಣ್ಯರು. ಸಂಗೀತ-ಸಾಹಿತ್ಯಗಳೆರಡಕ್ಕೂ ಮಹತ್ವದ ಕಾಣಿಕೆ ನೀಡಿದ ದಾಸರ ಕೀರ್ತನೆಗಳು ಭಕ್ತಿ-ಭಾವ ನಿರ್ಭರತೆಯ ಜೊತೆಗೆ ಮಾನವ ಹೃದಯದ ಸೂಕ್ಷ್ಮ ನಿರೀಕ್ಷಣ ಶಕ್ತಿ, ಪರಿಪಾಕಗೊಂಡ ಸಮೃದ್ಧ ಜೀವನಾನುಭವ, ಉನ್ನತ ಸಂಸ್ಕಾರ, ಸಮಾಜವಿಮರ್ಶೆಗಳನ್ನೊಳಗೊಂಡು ಭಾರತೀಯ ಸಾಹಿತ್ಯಕ್ಕೆ ತಮ್ಮ ಪಾಲು ಸಲ್ಲಿಸಿವೆ. ಮಹಾಮಹಿಮ ತ್ಯಾಗರಾಜರ ಕೀರ್ತನೆಗಳ ಮೇಲೆ ಆಳವಾದ ಪ್ರಭಾವ ಬೀರಿದ ಈ ದಾಸ ಸಾಹಿತ್ಯದ ಮಹತ್ವವನ್ನು ಭಾರತೀಯ ಸಾಹಿತ್ಯ ಗುರುತಿಸದೇ ಇರಲಾರದು.

ಕನ್ನಡದ ಕೀರ್ತಿ ಪತಾಕೆಯನ್ನು ಮುಗಿಲೆತ್ತರಕ್ಕೆ ಹಾರಿಸಿದ ಕೆಲವೇ ಕವಿಗಳಲ್ಲಿ 'ರತ್ನಾಕರವರ್ಣಿ' ಕೂಡ ಒಬ್ಬ; ಭೋಗ-ಯೋಗಗಳಲ್ಲಿ ಸಮನ್ವಯವನ್ನು ಪಡೆದ ಭರತೇಶನ ದಿವ್ಯ ಕಥಾನಕವನ್ನು 'ಭರತೇಶ ವೈಭವದಲ್ಲಿ' ಕಂಡರಿಸಿದ ಕವಿ, ತನ್ನ ಕಾವ್ಯದಲ್ಲಿ ಭಕ್ತಿ-ಜ್ಞಾನ-ವಿರಕ್ತಿ-ಶೃಂಗಾರ ಈ ಎಲ್ಲವುಗಳನ್ನು ಆರೋಗ್ಯಪೂರ್ಣವಾಗಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದಕ್ಕೆ ಉದಾಹರಣೆಯನ್ನು ಭರತೇಶನ ಬದುಕಿನಿಂದಲೇ ನೀಡುತ್ತಾನೆ. ಭರತೇಶನ ಭವ್ಯ-ದಿವ್ಯ ವ್ಯಕ್ತಿತ್ವದ ಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಕವಿ ತೋರಿದ ಜಾಣ್ಮೆ ಮೆಚ್ಚುವಂತಹದು. ಬೃಹತ್ತಿನಲ್ಲಿಯೂ ಮಹತ್ತಿನಲ್ಲಿಯೂ 'ಭರತೇಶವೈಭವ'ದಂತಹ ಕಾವ್ಯಗಳು ವಿರಳವಾಗಿಯೇ ದೊರೆಯುತ್ತವೆ. ಭಾರತೀಯ ಆದರ್ಶಗಳ ಕನಸುಗಾರಿಕೆಯನ್ನೆಲ್ಲ ಈ ಕಾವ್ಯದ ನಾಯಕ ಭರತನಲ್ಲಿ ಸಾಕಾರಗೊಳ್ಳುವುದನ್ನು ನೋಡಬಹುದು. ಉಂಡು 'ಉಪವಾಸಿ. ಬಳಸಿ ಬ್ರಹ್ಮಚಾರಿ' ಯಾಗಿರುವ ಭರತನ ಪಾತ್ರ ಸೃಷ್ಟಿ ಭಾರತೀಯ ಸಾಹಿತ್ಯದಲ್ಲೇ ಅತ್ಯಂತ ಅಪೂರ್ವ. ಕವಿ ಪ್ರತಿಭೆಯೊಂದು ಮಹಾಕಾವ್ಯ ಸೃಷ್ಟಿಯಲ್ಲಿ ಹೇಗೆ ಮಿಂಚಬಹುದು ಎಂಬುದಕ್ಕೆ 'ಭರತೇಶ ವೈಭವ' ಒಂದು ಉತ್ತಮ ಮಾದರಿಯಾಗಿದೆ.

—ಹೀಗೆ ಕನ್ನಡದ ಆಧುನಿಕ ಕಾಲಕ್ಕೆ ಮುಂಚಿನ ಕೆಲವೇ ಕೆಲವು ಕವಿಗಳ-ಕೃತಿಗಳ ಮಹತ್ವ, ಭಾರತೀಯ ಸಾಹಿತ್ಯಕ್ಕೆ ಸಂದ ಕೊಡುಗೆಯನ್ನು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಿಸುತ್ತಿದ್ದೇನೆ. ಇಂತಹ ಮಟ್ಟವನ್ನು ತಲುಪದಿದ್ದರೂ ಕನ್ನಡದಲ್ಲಿ ಇನ್ನೂ ಅನೇಕರು ಭಾರತೀಯ ಸಾಹಿತ್ಯಕ್ಕೆ ಕೊಡುಗೆ ನೀಡಿದವರಿದ್ದಾರೆ. 'ಕನ್ನಡದಲ್ಲೇನಿದೆ ?' ಎಂದು ಮೂಗುಮುರಿಯದೆ, ಅದರ ಸಾಹಿತ್ಯಕ ಸತ್ವವನ್ನು ಮಹತ್ವವನ್ನು ಭಾರತೀಯ ಸಾಹಿತ್ಯದ ಹಿನ್ನೆಲೆಯಲ್ಲಿ ಯಾವ ಪೂರ್ವಾಗ್ರಹವಿಲ್ಲದೆ ಯೋಚಿಸಲು ಸಾಧ್ಯವಾದರೆ ಕನ್ನಡದ ಕೊಡುಗೆಯೇನು ಎಂಬುದು ಮನದಟ್ಟಾಗುತ್ತದೆ. ದುರಭಿಮಾನ ಸಲ್ಲದು ನಿಜ; ಆದರೆ ಅಭಿಮಾನ ಪಡುವುದು ತಪ್ಪಲ್ಲ.

ಗ್ರಂಥಋಣ

೧) ಬೆಂಗಳೂರು ವಿ. ವಿ. ನಿಲಯದ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ೧-೨-೩

೨) ಕನ್ನಡ ಸಾಹಿತ್ಯ ಚರಿತ್ರೆ—ರಂ. ಶ್ರೀ. ಮುಗಳಿ

೩) ಕನ್ನಡ ಸಾಹಿತ್ಯದ ಇತಿಹಾಸ—ರಂ. ಶ್ರೀ. ಮುಗಳಿ

೪) ವಿಮರ್ಶೆಯ ವ್ರತ—ರಂ. ಶ್ರೀ. ಮುಗಳಿ

೫) ಕನ್ನಡ ಭಾಷೆಯ ಚರಿತ್ರೆ—ಪ್ರ. ಗೋ. ಕುಲಕರ್ಣಿ

೬) ವಚನಧರ್ಮ ಸಾರ—ಎಂ. ಆರ್. ಶ್ರೀ

ದಿವ್ಯ ಪದ್ಧತಿ ಮತ್ತು ವೀರಶೈವ ಪುರಾಣಗಳಲ್ಲಿ ದಿವ್ಯದ ಕಥೆಗಳು

● ವ್ಹಿ. ಜಿ. ಪೂಜಾರ

ದೇವರು, ಧರ್ಮವೆಂಬೆರಡು ಶಕ್ತಿಗಳು ಪುರಾತನಕಾಲದಿಂದಲೂ ಮಾನವ ಕುಲವನ್ನು ಒಂದಿಲ್ಲೊಂದು ದೃಷ್ಟಿಯಿಂದ ಆಳುತ್ತಲೇ ಬಂದಿವೆ. ಇವು ಮಾನವನ ಮೇಲೆ ಪ್ರಭುತ್ವವನ್ನು ಸ್ಥಾಪಿಸಿದಷ್ಟು ಇನ್ನಾವ ಶಕ್ತಿಗಳೂ ಸ್ಥಾಪಿಸಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ. ಇವು ಆತನ ಜೀವನಕ್ಕೊಂದು ಅರ್ಥಕಲ್ಪಿಸಿ ಸುನಿಶ್ಚಿತ ರೂಪಕೊಡುವಲ್ಲಿ ಪ್ರಮುಖ ಪಾತ್ರವಹಿಸುವವು. ಇದರಿಂದಲೋ ಏನೋ ಆತನು ದೈವೀ ಶಕ್ತಿಯ ಬಗೆಗೆ ಬಹು ಹಿಂದಿನಿಂದಲೂ ಭಯ ಭಕ್ತಿಯನ್ನು ತಾಳಿ ನಾನಾ ವಿಧವಾಗಿ ಆರಾಧಿಸುತ್ತ ಬಂದಿದ್ದಾನೆ. ಇದು ತನ್ನ ಜೀವನವನ್ನು ನಿಯಂತ್ರಿಸುವ ಕೇಂದ್ರ ಶಕ್ತಿಯೆಂದೂ ಆತನ ನಂಬುಗೆ. ಆತನು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದಾಗ, ಮಾನಸಿಕವಾಗಿ ಅಧೀರನಾದಾಗ ಈ ಶಕ್ತಿ ತನಗೆ ಧೈರ್ಯ ನೀಡಿ ಮುನ್ನಡೆಸುವ ಸಾಧನವೂ ಆಗಬಲ್ಲುದೆಂದು ಆತನ ಭಾವನೆ. ಇಕ್ಕಟ್ಟಿನ ಸಂದರ್ಭದಲ್ಲಿ ಸಿಲುಕಿ ಪೇಚಾಡುತ್ತಿದ್ದ ಎಷ್ಟೋ ಜನ ದೇವರ ಮೇಲೆ ಭಾರಹಾಕಿ ತಮ್ಮ ಆತ್ಮಸಾಕ್ಷಿಗೆ ಹೊಳೆದಂತೆ ನಿರ್ಣಯ ಕೈಕೊಳ್ಳುವುದುಂಟು. ಇದಲ್ಲದೆ ಅವರು ತಂತಮ್ಮಲ್ಲಿ ಏನಾದರೂ ವಾದ-ವಿವಾದ, ಕಲಹಗಳುಂಟಾದರೂ ಅವುಗಳನ್ನು ದೇವರ ಸಮ್ಮುಖದಲ್ಲಿ ನಿರ್ಣಯಿಸಿಕೊಳ್ಳುತ್ತಿದ್ದರೆಂಬುದು ತಿಳಿದು ಬರುತ್ತದೆ. ತಪ್ಪಿತಸ್ಥರು ದೇವರೆದುರು ಸುಳ್ಳಾಡಲು ಹೆದರುತ್ತಿದ್ದುದೇ ಇದಕ್ಕೆ ಕಾರಣವಿರಬೇಕು. ಕಳವಿನ ಅಪವಾದಕ್ಕೊಳಗಾದ ವ್ಯಕ್ತಿಗೆ ಈಗಲೂ ಕೆಲವೆಡೆ ಜನ 'ದೇವಾಲಯಕ್ಕೆ ನಡೆ, ಅಲ್ಲಿ ದೇವರೆದುರು ನಾನು ಕಳವು ಮಾಡಿಲ್ಲವೆಂದು ಪ್ರಸಾದ ಹಿಡಿದು ಪ್ರಮಾಣ ಮಾಡಿ ಹೇಳು' ಎನ್ನುವುದುಂಟು. ಆತ ಕಳವು ಮಾಡಿದ್ದೇ ಆದರೆ ದೈವೀಶಕ್ತಿ ತನಗೇನಾದರೂ ತೊಂದರೆ ಕೊಟ್ಟೀತೆಂದು ಹೆದರಿ ತಪ್ಪೊಪ್ಪಿಕೊಳ್ಳುವನು. ಕಳವು ಮಾಡಿರದ ವ್ಯಕ್ತಿ ನಿರ್ಭೀತಿಯಿಂದ ದೇವಾಲಯಕ್ಕೆ ಹೋಗಿ ಪ್ರಸಾದ ಮುಟ್ಟಿ ಹಿಂದೆ ಮುಂದೆ ನೋಡದೆ ಪ್ರಮಾಣ ಮಾಡಿ ಹೇಳುವನು, ಅಪವಾದಕ್ಕೊಳಗಾದ ವ್ಯಕ್ತಿ ತಾನು ನಿರ್ದೋಷಿಯೆಂಬುದನ್ನು ಸಾರ್ವಜನಿಕವಾಗಿ ಪ್ರಕಟಿಸುವ ಇಂಥ ಪದ್ಧತಿ ಬಹುಹಿಂದಿನಿಂದಲೂ ನಡೆದುಕೊಂಡು ಬಂದಂತಿದೆ.

ಪರಸ್ಪರರಲ್ಲಿ ಎದ್ದ, ವಾದ, ಕಲಹಗಳನ್ನು ನಿರ್ಣಯಿಸಲು ನಮ್ಮ ಪೂರ್ವಜರು ಅನುಸರಿಸಿಕೊಂಡು ಬಂದ ವಿಧಾನಗಳೆಂದರೆ, ಪ್ರತ್ಯಕ್ಷ ಕಂಡ ಪ್ರಮಾಣಗಳೇನಾದರೂ ಇವೆಯೋ ಎಂದು ಹುಡುಕುವುದು. ಇವಿರದಿದ್ದರೆ ಸಾಕ್ಷಿಗಳೇನಾದರೂ ಇವೆಯೋ ಎಂದು ವಿಚಾರಿಸುವುದು. ಇವೂ ಇರದಿದ್ದರೆ ಶಾಬ್ದಿಕ ದಾಖಲೆಗಳನ್ನು ನೋಡುವುದು. ಈ ಯಾವ ಮಾನುಷ ಅಥವಾ ಲೌಕಿಕ ಪುರಾವೆ, ಸಾಕ್ಷಿಗಳಿರದಿದ್ದರೆ ಕೊನೆಗೆ ಅವರು ದೈವದ ಸಹಾಯದಿಂದ ನ್ಯಾಯ ನಿರ್ಣಯಿಸುತ್ತಿದ್ದರೆಂದು ವಿದಿತವಾಗುವುದು. ತಮಿಳು ನಾಡಿನ ಶಿವಭಕ್ತರಲ್ಲೊಬ್ಬನಾದ ತಿರುನೀಲಕಂಠನ ಜೀವನದಲ್ಲಿ ನಡೆಯಿತೆಂದು ವರ್ಣಿಸಲಾದ ಘಟನೆಯೊಂದನ್ನಿಲ್ಲಿ ಉದಾಹರಿಸಬಹುದು. ಶಿವ ಭಿಕ್ಷುಕ–ವೇಷದಲ್ಲಿ ತಿರುನೀಲಕಂಠನ ಮನೆಗೆ ಬಂದು ಪಾತ್ರೆಯೊಂದನ್ನಿಟ್ಟು ಅದನ್ನು ತಾನು ಬೇಡಿದಾಗ ಕೊಡಬೇಕೆಂದು ಹೇಳಿ ಹೋಗುವನು. ಅನಂತರ ಅದು ಮಾಯವಾಗುವಂತೆ ಮಾಡಿ, ಪುನಃ ಆತನ ಬಳಿ ಬಂದು ಅದನ್ನು ಕೊಡೆಂದು ಪೀಡಿಸುವನು. ಆಗ ಆ ಭಕ್ತ ನಿರುತ್ತರನಾಗಲು ಆತನ ಮೇಲೆ ಕಳ್ಳತನದ ಅಪವಾದ ಹೊರಿಸಿ ಆತನನ್ನು ನ್ಯಾಯ ನಿರ್ಣಾಯಕರೆದುರು ತರುವನು. ಅವರು ಪ್ರತ್ಯಕ್ಷ ಪ್ರಮಾಣ, ಸಾಕ್ಷಿ ಪುರಾವೆಗಳನ್ನೆಲ್ಲ ಅನುಸರಿಸಿದರೂ ಅವರಿಂದ ನ್ಯಾಯವನ್ನು ನಿರ್ಣಯಿಸುವುದಾಗಲಿಲ್ಲ. ಇದು ತಮ್ಮ ಬುದ್ಧಿಶಕ್ತಿಗೆ ಮೀರಿದ್ದು, ಇದರ ನಿರ್ಣಯ ಶಿವನಿಂದಲೇ ಸಾಧ್ಯವೆನ್ನುವರು. ಕೊನೆಗೆ ಶಿವನೇ ಪ್ರತ್ಯಕ್ಷನಾಗಿ ಅಪವಾದಕ್ಕೊಳಗಾದ ತಿರುನೀಲಕಂಠನು ನಿರ್ದೋಷಿಯೆಂಬುದನ್ನು ಜನತೆಯೆದುರು ಸಾರುವನು.[1] ಇದು ದೇವರ ನಿರ್ಣಯ. ಇದನ್ನಾರೂ ಪ್ರಶ್ನಿಸುವಂತಿಲ್ಲ. ಸತ್ಯಪರಿಪಾಲನೆಗಾಗಿ ಹರಿಶ್ಚಂದ್ರನು, ವಿಶ್ವಾಮಿತ್ರನು ಕೊಟ್ಟ ತೊಂದರೆಗಳನ್ನೆಲ್ಲ ಮೌನವಾಗಿ ಸಹಿಸುವನು. ಶ್ವಪಚನ ಆಳಾಗಿಯೂ ದುಡಿಯುವನು. ಕೊನೆಗೆ ತನ್ನಿಂದಲೇ ತನ್ನ ಹೆಂಡತಿಯನ್ನೇ ತುಂಡರಿಸುವ ಪ್ರಸಂಗ ಬಂದಾಗ ಶಿವ ಪ್ರತ್ಯಕ್ಷನಾಗಿ ಪರಿಹಾರ ಸೂಚಿಸುವನು.[2] ಕೊನೆಗೆ ಸತ್ಯವೇ ಶಿವನರೂಪದಲ್ಲಿ ಪ್ರಕಟಗೊಂಡಿತೆಂಬುದು ಇಲ್ಲಿನ ಅರ್ಥ. 'God is ultimate truth ಎನ್ನುವಂತೆ – ಸತ್ಯವೆಂದರೆ ಶಿವನೇ ಎಂಬುದು ಜನತೆಯ ನಂಬುಗೆ.

ನ್ಯಾಯವನ್ನು ನಿರ್ಣಯಿಸುವುದು, ಅದಕ್ಕೊಂದು ಪರಿಹಾರ ರೂಪದ ತೆರೆ ಎಳೆಯುವುದು ಮನುಷ್ಯನ ಬುದ್ಧಿಶಕ್ತಿ, ತರ್ಕ ಮತ್ತು ಲೌಕಿಕ ಸಾಕ್ಷಿಗಳಿಂದ ಆಗದಿದ್ದರೆ ಮೇಲಿನ ಉದಾಹರಣೆಗಳಂತೆ ದೈವಕ್ಕೇ ಮೊರೆಹೋಗಬೇಕಾಗುವುದು.

---

1. ಹಿರೇಮಠ ಆರ್. ಸಿ. (ಸಂ) : ಮಹಾಕವಿ ಹರಿಹರನ ಪುರಾತನರ ರಗಳೆಗಳು. 'ತಿರುನೀಲಕಂಠರ ರಗಳೆ'

2. ಹರಿಶ್ಚಂದ್ರ ಕಾವ್ಯ.–

ಹೀಗೆ ದೈವದ ಸಹಾಯದಿಂದ ಜನಸಮ್ಮುಖದಲ್ಲಿ ನ್ಯಾಯವನ್ನು ನಿರ್ಣಯಿಸುವ ವಿಧಾನವೇ ದಿವ್ಯ. ದೈವಕ್ಕೇ ಸಂಬಂಧಿಸಿದ ಇದನ್ನು 'ಬೆಂಕಿ ಮೊದಲಾದ ಪ್ರಮಾಣ ವಸ್ತುಗಳನ್ನು ಮುಟ್ಟಿ ಪ್ರಮಾಣಿಸ ಬೇಕಾದ ಉಗ್ರ ಪರೀಕ್ಷೆ. ನಿಶ್ಚಿತವಾದ ಸಾಕ್ಷಿ ಆಧಾರಗಳಿಲ್ಲದಾಗ ಅಪರಾಧವನ್ನು ನಿರ್ಣಯಿಸಲು ಮಾಡುವ ಉಗ್ರ ಪರೀಕ್ಷೆ' [3] ಯೆಂದೂ ಅರ್ಥಯಿಸಲಾಗಿದೆ. ಆಂಗ್ಲ ಭಾಷೆಯಲ್ಲಿ ಇದಕ್ಕೆ 'Ordeal' ಎನ್ನುತ್ತಾರೆ. 'ದೇವರ ತೀರ್ಪು' [4] ಎಂದು ಇದರರ್ಥ. ತನ್ನ ಪರಿಶುದ್ಧವಾದ ವ್ಯಕ್ತಿತ್ವ ಹಾಗೂ ಧರ್ಮನಿಷ್ಠೆಯನ್ನು ಸಂಶಯಿಸಿ ತನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ ಜನರ ಎದುರಿನಲ್ಲಿ ವಿವಾದಕ್ಕೊಳಗಾದ ವ್ಯಕ್ತಿಯು ತಾನು ನಿರ್ದೋಷಿಯೆಂಬುದನ್ನೂ, ತಾನು ಸಾರಿದ ತತ್ವಗಳು ಶ್ರೇಷ್ಠವಾದುವೆಂಬುದನ್ನೂ ಪ್ರಕಟಿಸಲು ದೇವರ ಇಲ್ಲವೆ ಧರ್ಮದ ಸಾಕ್ಷಿಯಾಗಿ ಕಾಯಿಸಿದ ಲೋಹದ ಗುಂಡನ್ನು ಎತ್ತಿ ಹಿಡಿದೋ, ವಿಷವನ್ನು ಸೇವಿಸಿಯೋ ಇಲ್ಲವೆ ಭಾರವಾದ ಕಲ್ಲೊಂದನ್ನು ಕಟ್ಟಿಕೊಂಡು ನದಿಯಲ್ಲಿ ಹಾರಿಯೋ — ಹೀಗೆ ಅದ್ಭುತವಾದ ರೀತಿಯಲ್ಲಿ ಪ್ರಮಾಣ ಮಾಡುವುದು ಎಂದೂ ದಿವ್ಯವನ್ನು ವರ್ಣಿಸಬಹುದು. ಒಂದು ವೇಳೆ ಆತ ಅಪ್ರಾಮಾಣಿಕ ದೋಷಪೂರ್ಣ ವ್ಯಕ್ತಿಯಾಗಿದ್ದರೆ ದಿವ್ಯವು ಆತನಿಗೆ ಮಾರಕವಾಗುತ್ತದೆ, ಪ್ರಾಮಾಣಿಕ ಮತ್ತು ಧರ್ಮನಿಷ್ಠನಾಗಿದ್ದರೆ ಆತನಿಗೆ ಅದರಿಂದೇನೂ ಬಾಧಕವಾಗುವುದಿಲ್ಲವೆಂದೂ, ಆತನು ಇಂತಹ ಅನೇಕ ಗಂಡಾಂತರ ಪ್ರಸಂಗಗಳಿಗೊಳಪಡಿಸುವ ದಿವ್ಯಗಳಿಂದ ಸರಾಗವಾಗಿ ಪಾರಾಗುವನೆಂದೂ ಜನತೆಯ ನಂಬುಗೆ. 'The method of trying an accused or Suspected person by Subjecting him to a 'Physical test fraught with danger, such as the plunging of the hand in boiling water, the carrying of hot iron Walking bare foot, and blind fold between red-hot, plough Shares', and the like, the result in injury, more or less none, being 'regarded as the immediate judgement of the deity', has been practically universal during a long period of Social evolution' [5] ಇದರಿಂದ ನಾನಾವಿಧದ ಕಠಿಣ ಪರೀಕ್ಷೆಗೊಳಗಾದ

---

3. ಕನ್ನಡ ನಿಘಂಟು-ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
4. Encyclopaedia of Religion and Ethics Vol-9, Page-5I9. 'Judgement of god'
5. Encyclopaedia of Religion and Ethics, Vol_9, Page-524.

ಮೇಲೆ ನ್ಯಾಯ ನಿರ್ಣಯುಗೊಳ್ಳುವ ಪದ್ಧತಿಯು ಬಹು ಹಿಂದಿನಿಂದಲೂ ನಡೆದು ಕೊಂಡು ಬಂದುದು ವಿದಿತವಾಗುವುದು.

ದಿವ್ಯಗಳಲ್ಲಿ ತುಲಾ, ಅಗ್ನಿ, ಅಪ್ (ನೀರು) ವಿಷ, ಕೋಶ, ಎಂದೈದು ವಿಧನೆಂದು ನಾರದ ಯಾಜ್ಞವಲ್ಕ್ಯರ ಮತ. ಘಟ, ಅಗ್ನಿ ಉದಕ, ವಿಷ, ಕೋಶ, ತಂಡುಲ, ತಪ್ತಮಾಷಕ, ಫಾಲ, ಧರ್ಮಜ ಎಂದು ಒಂಬತ್ತು ವಿಧಗಳೆಂದು ಬೃಹಸ್ಪತಿಯ ಮತ.[6] ದಿವ್ಯಪದ್ಧತಿ ಭಾರತೀಯರಲ್ಲಷ್ಟೇ ಇರದೆ ಗ್ರೀಕ, ಹಿಬ್ರು, ರೋಮನ್, ಬೆಬಿಲೋನಿಯಾ ಕ್ರೈಸ್ತ ಮತ್ತು ಮುಸ್ಲಿಂ ಮುಂತಾದ ಜಗತ್ತಿನ ಬಹುಭಾಗದ ಜನರಲ್ಲಿ ಸಾವಿರಾರು ವರ್ಷಗಳಿಂದಲೂ ಆಚರಣೆಯಲ್ಲಿದ್ದುದು ತಿಳಿದು ಬರುವುದು. ಇವರೆಲ್ಲರೂ ಪ್ರಮುಖವಾಗಿ ವಿಷ, ಜಲ, ಕಾಯ್ದ ದ್ರವ, ಕಾಯ್ದ ಕಬ್ಬಿಣ, ಅಗ್ನಿ, ಹೋರಾಟ, ಸಮ್ಮಿಶ್ರ ಮತ್ತು ವಿಧಿ—ಈ ಎಂಟು ಪ್ರಕಾರದ ದಿವ್ಯಗಳನ್ನು ನಡೆಸುತ್ತಿದ್ದುದು ತಿಳಿದು ಬರುತ್ತದೆ.[7]

ಕರ್ನಾಟಕದಲ್ಲಿಯೂ ಇವುಗಳನ್ನು ನಡೆಸುತ್ತಿದ್ದುದಕ್ಕೆ ಶಾಸನಾಧಾರಗಳಿವೆ[8] ದಿವ್ಯ ಪದ ಮತ್ತು ಅದರ ಸ್ವರೂಪ ಅನೇಕ ಕನ್ನಡ ಕಾವ್ಯಗಳಲ್ಲಿ ಉಲ್ಲೇಖವಾಗಿದೆ. ಆದರೆ ಅದು ಎಲ್ಲ ಕಡೆಗೂ ಪದ್ಧತಿಯೊಂಬರ್ಥವನ್ನು ಸೂಚಿಸದು. ಪಂಪ ಭಾರತ (ಆ–೧, ಪ–೨೦)ದಲ್ಲಿ ಉಲ್ಲೇಖವಾದ 'ನಲ್ಮೆಗೆ ದಿಬ್ಯಂಬಿಡಿದಂತೆವೋಲ್' ಎಂಬಲ್ಲಿ ದಿಬ್ಯಪದ ಪದ್ಧತಿ ಸೂಚಕವಾಗಿರದೆ ಅನಿಷ್ಟ ಸೂಚಕ ಧೂಮಕೇತು ಸೂಚಕವಾಗಿದೆ.[9] ಮತ್ತು ಬಸವಣ್ಣನವರ ಕೆಲ ವಚನಗಳಲ್ಲಿ ಉಕ್ತವಾದ ಈ

---

6 ನರಸಿಂಹಾಚಾರ್ ಡಿ. ಎಲ್. : ಪಂಪ ಭಾರತ ದೀಪಿಕೆ ಆ–೧, ಪ–೭೦,

7. Encyclopaedia of Religion and Ethics, Vol-9, Page 507-511, i) The poison ordeal, ii) Water ordeal, iii) Boiling liquid ordeal. iv- Hot iron ordeal, v) Fire ordeal, vi) ordeal by Combat, vii) Miscellaneous ordeal, viii) ordeal by lot.

8. ಚಿದಾನಂದ ಮೂರ್ತಿ ಎಂ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ-೧೦೯

9. ನೋಡಿ : ಪ್ರಬುದ್ಧ ಕರ್ನಾಟಕ (ಸಂಪುಟ–೬೮, ಸಂಚಿಕೆ-೧)
'ದಿಬ್ಯಂಬಿಡಿವಂತೆವೋಲ್ ಪಿಡಿದು' ಎಂಬ ತಮ್ಮ ಲೇಖನದಲ್ಲಿ ಜಿ. ವೀರಭದ್ರಪ್ಪ ಅವರು ದಿಬ್ಯಂ ಇದು ಪಂಪಭಾರತದಲ್ಲಿ ಒಂದು ಪದ್ಧತಿಯನ್ನು ಸೂಚಿಸದೆ ಅನಿಷ್ಟ ಸೂಚಕ ಅಂತರಿಕ್ಷ ಧೂಮಕೇತುವನ್ನು ಸೂಚಿಸುತ್ತದೆಯೆಂದು ಹೇಳುತ್ತಾರೆ. ಮತ್ತು ಇದನ್ನು ಈ ಮೊದಲು ಡಾ. ಎಂ. ಚಿದಾನಂದ ಮೂರ್ತಿ, ಡಾ. ಡಿ. ಎಲ್. ಎನ್. ಮತ್ತು ಶ್ರೀ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರು ದಿಬ್ಯವು ಪ್ರಾಚೀನ ಕರ್ನಾಟಕದಲ್ಲಿ ಆಚರಿಸುತ್ತಿದ್ದ ದಿವ್ಯ ಪದ್ಧತಿಯನ್ನು ಸೂಚಿಸುತ್ತದೆಂದು ಅರ್ಥಯಿಸಿ ದುದು ತಪ್ಪಾದುದೆಂದು ಅವರು ಸಾಧಾರ ಪೂರ್ವಕ ವಿವೇಚಿಸಿದ್ದಾರೆ.

ಪದಕ್ಕೆ ಪ್ರಮಾಣವೆಂಬರ್ಥವಿದೆಯೇ ಹೊರತು ದಿವ್ಯಪದ್ಧತಿಯೆಂಬರ್ಥವಾಗದು. ಇವನ್ನು ಬಿಟ್ಟು ಪದ್ಧತಿಯನ್ನು ಸೂಚಿಸುವ ದಿವ್ಯಪದ ಹಲವು ಕಾವ್ಯಗಳಲ್ಲಿ ಬಂದಿದೆ. ಅವುಗಳಲ್ಲಿ ಕೆಲವನ್ನಿಲ್ಲಿ ನೋಡಬಹುದು —

'ದೋಸಿಪಿಡಿವಂತೆ ದಿವ್ಯದ ಕಾಸಿದಂ ಕುಮಿವಂ ಕಡಂಗಿಕಾಳೋರಗನಂ |
ಕೂಸು ಪಿಡಿವಂತೆ ಪಿಡಿದಂ ಸಾಸಿಗನ ವಿವೇಕಿ, ಸೀತೆಯಂದಶಕಂಠಂ॥'[10]

'ಕೆಲರ್ ನೆತ್ತರೊಳ್ ಮಿಂದು ತಮಗೆ ದೋಷಮಿಲ್ಲೆಂದದರ್ಕೆ ದಿವ್ಯಜಿಡಿವಂತೆ ನಂಬಿಸಲ್ ಚಲಂಬಿಡಿದು ನಿಂದಾಂತರ್'[11]॥ ಉರಿಯು ಹಾಳಾಹಳದ ದಿವ್ಯಮಂಗೆಲಿದನು'.[12] ಕೆಲ ಕಾವ್ಯ ಪುರಾಣಗಳಲ್ಲಿ ಇವು ವರ್ಣಿತವಾದುದನ್ನೂ ಕಾಣಬಹುದು. ವೀರಶೈವ ಪುರಾಣಗಳಲ್ಲಿ ಪ್ರಮುಖವಾಗಿ ಘಟ, ಜಲ, ಅಗ್ನಿ ಮತ್ತು ವಿಷ ಈ ನಾಲ್ಕು ಪ್ರಕಾರದ ದಿವ್ಯಗಳು ಕಥೆಗಳ ರೂಪದಲ್ಲಿ ವರ್ಣಿತವಾಗಿವೆ ಅವುಗಳನ್ನಿಲ್ಲಿ ನೋಡಬಹುದು.

ವೀರಶೈವ ಧರ್ಮ ಕರ್ನಾಟಕದಲ್ಲಿ ಬಸವಾದಿ ಶರಣರಿಂದ ೧೨ನೆಯ ಶತಮಾನದಲ್ಲಿ ಪುನರುಜ್ಜೀವನ ಪಡೆದುಕೊಂಡು ಸರ್ವತ್ರವಾಗಿ ಪ್ರಚಾರಗೊಳ್ಳಲು ಯತ್ನಿಸುತ್ತಿದ್ದಿತು. ಇಲ್ಲಿ ಆಗಲೇ ವೈದಿಕ ಹಾಗೂ ಜೈನ ಧರ್ಮಗಳು ಬಲವಾಗಿ ಬೇರು ಬಿಟ್ಟಿದ್ದುವು. ಇವುಗಳ ಜೊತೆಗೆ ಅದು ಹೆಗಲೆಣೆಯಾಗಿ ನಿಂತುಕೊಂಡು ತನ್ನ ಅಸ್ತಿತ್ವವನ್ನುಳಿಸಿಕೊಳ್ಳಲು ಬಹಳ ಹೋರಾಡಬೇಕಾಗಿದ್ದಿತು. ೧೦–೧೧ನೆಯ ಶತಮಾನಗಳಲ್ಲಿ ಜೈನ ಧರ್ಮವು ಕರ್ನಾಟಕದಲ್ಲಿ ಅತ್ಯಂತ ಉಛ್ರಾಯ ಸ್ಥಾನ ಹೊಂದಿ ಮುಂದೆ ಅದು ಕ್ರಮೇಣ ಇಳಿಮುಖವಾಗುತ್ತ ಬಂದಿತು. ಆಗ ಇದೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಹೆಣಗಬೇಕಾಯಿತು ಈ ಮೊದಲಿನಂತೆ ೧೨ನೆಯ ಶತಮಾನದಲ್ಲಿ ಜೈನಕವಿಗಳು ಮತ್ತು ೧೨ನೆಯ ಶತಮಾನದ ಅನಂತರ ವೀರಶೈವ ಕವಿಗಳು ತಂತಮ್ಮ ಧರ್ಮದ ತತ್ವಗಳ ಘನತೆಯನ್ನು, ಧಾರ್ಮಿಕ ಮಹಾಪುರುಷರ ಮಹಿಮೆಯನ್ನು ಕಾವ್ಯ, ಪುರಾಣಗಳ ಮುಖಾಂತರ ಜನ ಸಾಮಾನ್ಯರಿಗೆ ತಿಳಿಸಿ ಅವರನ್ನು ತಂತಮ್ಮ ಧರ್ಮಗಳತ್ತ ಆಕರ್ಷಿಸಿಕೊಳ್ಳಲು ಯತ್ನಿಸಿದಂತೆ ತಿಳಿಯುತ್ತದೆ. ಈ ಪೈಪೋಟಿಯ ಪ್ರವೃತ್ತಿ ಕೊಂಚ ಅತಿಯಾಯಿತೆಂಬುದು ಮತ್ತು ಜೈನ ಹಾಗೂ ವೀರಶೈವ ಮತಗಳ ಜನತೆಯ ಮಧ್ಯೆ ಆಗಾಗ ವಾದ–ವಿವಾದ, ಕಲಹಗಳಾಗುತ್ತಿದ್ದುವೆಂಬುದು ಧಾರ್ಮಿಕ ಇತಿಹಾಸದಿಂದ

10. ಪಂಪರಾಮಾಯಣ ಸಂಗ್ರಹ ಆ-೪, ಪ-೬೨,
11. ಶಾಂತಿಪುರಾಣ, ೪-೧೦,
12. ಸಿದ್ಧರಾಮಚಾರಿತ್ರ ಸಂ-೧, ಪ-೯೦.

ತಿಳಿಯುವುದು. ಏಕಾಂತ ರಾಮಯ್ಯ, ಜೇಡರದಾಸಿಮಯ್ಯ ವೈಜಕವ್ವೆ ಮತ್ತು ಆದಯ್ಯ ಮುಂತಾದ ಶರಣ-ಶರಣೆಯರು ವೀರಶೈವ ಮತ ಪ್ರಸಾರಕ್ಕಾಗಿ ಅಂದು ಜೈನಧರ್ಮದ ವಿರುದ್ಧ ಹೋರಾಡಿದುದು ಮತ್ತು ತಮ್ಮ ಮಾಹೇಶ್ವರನಿಷ್ಠೆಯಿಂದ ಜೈನರನ್ನು ಅವರ ದೈವಗಳನ್ನು ಸೋಲಿಸಿದ ಉದಾಹರಣೆಗಳು 'ಸೋಮನಾಥ ಚಾರಿತ್ರ' 'ಬಸವಪುರಾಣ' ಮತ್ತು 'ಪದ್ಮರಾಜಪುರಾಣ'— ಮುಂತಾದ ವೀರ ಶೈವ ಕೃತಿಗಳಲ್ಲಿ ವರ್ಣಿತವಾಗಿವೆ. ಜೈನಕವಿಗಳು ವೀರಶೈವರನ್ನೂ, ಅವರ ಧರ್ಮತತ್ವಗಳನ್ನೂ ಖಂಡಿಸಿ, ತಮ್ಮ ಧರ್ಮದ ತತ್ವಗಳೇ ಶ್ರೇಷ್ಠವಾದುವೆಂದು ಶ್ರೀ ಸಾಮಾನ್ಯರಿಗೆ ತಿಳಿಸಿ, ಅವರು ಜೈನಧರ್ಮವನ್ನು ಸ್ವೀಕರಿಸುವಂತೆ ಯತ್ನಿಸಿ ದುದನ್ನು 'ಧರ್ಮಾಮೃತ' 'ಸಮಯ ಪರೀಕ್ಷೆ' ಮತ್ತು 'ಧರ್ಮಪರೀಕ್ಷೆ'—ಈ ಕೃತಿಗಳಲ್ಲಿ ಕಾಣುವೆವು.

ಜೈನ ಮತ್ತು ವೀರಶೈವರ ನಡುವೆ ಅಂದು ನಡೆದಿರಬಹುದಾದ ಮತೀಯ ಕಲಹ ಸಂಘರ್ಷಗಳನ್ನು ಕೆಲ ದಿವ್ಯಗಳು ವರ್ಣಿಸುತ್ತವೆ.[13] ಅವುಗಳಲ್ಲಿ ಘಟದಿವ್ಯ, ಜಲದಿವ್ಯಗಳು ಮುಖ್ಯವಾದುವು. ಇವುಗಳನ್ನು ಕೆಲ ವೀರಶೈವ ಪುರಾಣಕಾರರು ತಮ್ಮ ಕೃತಿಗಳಲ್ಲಿ ಕಥೆಗಳ ರೂಪದಲ್ಲಿ ವರ್ಣಿಸಿರುವರು. ಇನ್ನು ಕೆಲವರು ಅನ್ಯ ಮತೀಯರು ಶರಣರನ್ನು, ಅವರ ಧರ್ಮಗ್ರಂಥಗಳನ್ನು ಮತ್ತು ಧರ್ಮದ ತತ್ವ ಗಳನ್ನು ಹೀಯಾಳಿಸಿ ಲಘುವಾಗಿ ಗಣಿಸಿ ಸಂಶಯ ದೃಷ್ಟಿಯಿಂದ ಕಾಣತೊಡಗಿದಾಗ ಅವರ ಸಂಶಯವನ್ನು ನಿವಾರಿಸಿ, ಅವು ಶ್ರೇಷ್ಠವಾದುವು, ಶರಣರು ಮಹಿಮಾ ಶಾಲಿಗಳು ಎಂಬುದನ್ನು ಸಿದ್ಧಪಡಿಸಲು ಅಗ್ನಿ ಹಾಗೂ ವಿಷದಿವ್ಯಗಳನ್ನು ಬಣ್ಣಿಸಿ ರುವರು. ಅವುಗಳಲ್ಲಿ ಕೆಲವನ್ನು ನೋಡಬಹುದು.

ಘಟದಿವ್ಯ : ಹೊಟಲ ಕೆರೆಯ ಅರಸು ದೇಸಿಂಗರಾಯ (ಜಯಸಿಂಹ)ನು ಜೈನ. ಆತನ ಪತ್ನಿ ಸುಗ್ಗಲವ್ವೆ ಶಿವಭಕ್ತೆ, ಜೇಡರ ದಾಸಿಮಯ್ಯನ ಶಿಷ್ಯೆ ಸುಗ್ಗಲವ್ವೆಯು ಒಮ್ಮೆ ತನ್ನ ಗುರು ದಾಸಿಮಯ್ಯನನ್ನು ಒಮ್ಮೆ ಹೊಟಲಕೆರೆಗೆ ಬರಮಾಡಿಕೊಳ್ಳು ವಳು. ಆಗ ದೇಸಿಂಗರಾಯನು, 'ಇದೇನು ತಿಳಿಗೇಡಿಯಂತೆ ವರ್ತಿಸುವೆ ? ಗಂಡ ನಿಗೂ ಹೆಂಡತಿಗೂ ಬೇರೆ ಬೇರೆ ಗತಿಗಳವೆಯೆ ? ಸತಿಗೆ ಪತಿಯೇ ಗುರುವಲ್ಲವೇ ? ಈತನನ್ನು ಕಳಿಸಿಬಿಡು, ಜನಮತಿಗಳಿಗೆ ಇದು ತಿಳಿದರೆ ವಿಪರೀತವಾದೀತು' ಎಂದು ಎಚ್ಚರಿಸುವನು. ಅದಕ್ಕವಳು 'ಶಿವನೇ ಗುರುವಿನ ರೂಪದಲ್ಲಿ ಬಂದಿರುವನು.

---

13. 'In all cases the ordeals are essentially religious in nature, and certain features, derived from this, chareataristic are common to all forms' – Encyclopaedia of Religion and Vol-9, Page 523

ಇಂಥ ಗುರುವನ್ನು ಕಳಿಸಲೇ ? ಜೈನರು ಇವರಿಗೆ ಸಮಾನರೇ ? ಬೇಕಾದರೆ ಅವರು ಇವರೊಡನೆ ಆಗಮ, ತರ್ಕ, ಶಾಸ್ತ್ರ, ಪುರಾಣಾದಿ—ವಿಷಯಗಳಲ್ಲಿ ವಾದಿಸಲಿ' ಎನ್ನುವಳು. ಆಗಲಿ ಎಂದು ಆತ ಜೈನರನ್ನು ಕರೆಸುವನು. ಅವರು ಕೇಳಿದ ಪ್ರಶ್ನೆಗಳಿಗೆಲ್ಲ ದಾಸಿಮಯ್ಯನು ಉತ್ತರವಿತ್ತು, ಶಿವನು ಸರ್ವಶಕ್ತ, ಸರ್ವಾಂತರ್ಯಾಮಿ, ಎಂದು ಸಾರುವನು. ಅವರು ನಿರುತ್ತರರಾಗಿ ಒಂದು ಯುಕ್ತಿ ಹೂಡುವರು. ಹರವಿಯೊಂದರಲ್ಲಿ ಕಾಳಸರ್ಪವಿರಿಸಿ, 'ಶಿವನು ಸರ್ವಾಂತರ್ಯಾಮಿ ಎನ್ನುವಿ? ಈ ಹರವಿಯಲ್ಲಿ ಆತನಿರುವನೇ?' ಎಂದು ಪ್ರಶ್ನಿಸುವರು. 'ಉಂಟುಂಟು, ಇಲ್ಲದುಂಟೆ ? ಎನ್ನುತ್ತ ದಾಸಿಮಯ್ಯನು ಅದರಲ್ಲಿ ಕೈಹಾಕುವನು. ಹಾವು ಆತನ ಕರಸ್ಪರ್ಶದಿಂದ ಸ್ಪಟಿಕಲಿಂಗವಾಗುವುದು. ಅದನ್ನು ತೆಗೆದು ತೋರಿಸಲು ಜೈನರು ಸೋಲನ್ನೊಪ್ಪಿಕೊಳ್ಳುವರು.[14]

ಜಲದಿವ್ಯ : ಶೈವನಾದ ವಾಗೀಶ್ವರನು ಜೈನ ಧರ್ಮಕ್ಕೆ ಮನಸೋತು ಅದನ್ನು ಸ್ವೀಕರಿಸಿದ್ದು ಶಿವಭಕ್ತೆಯಾದ ಆತನ ಅಕ್ಕ ತಿಲ್ಲವಲ್ಲಿನಾಚಿಗೆ ಸರಿಬರಲಿಲ್ಲ. ಅವಳು ತನ್ನ ತಮ್ಮ ಮತ್ತೆ ತಿರುಗಿ ಶೈವಧರ್ಮವನ್ನನುಸರಿಸುವಂತೆ ಮಾಡಬೇಕೆಂದು ಶಿವನಲ್ಲಿ ಪ್ರಾರ್ಥಿಸಿಕೊಳ್ಳುವಳು. ಶಿವನು ಆಕೆಯ ಪ್ರಾರ್ಥನೆಯಂತೆ ಮಾಡುವನು. ವಾಗೀಶ್ವರನ ಕೆಲ ಜೈನ ಶಿಷ್ಯರು ಆತನಲ್ಲಿಗೆ ಬಂದು, ಮತ್ತೆ ತಮ್ಮ ಧರ್ಮವನ್ನು ಸ್ವೀಕರಿಸುವಂತೆ ಒತ್ತಾಯಿಸುವರು. 'ಶಿವನಲ್ಲದೆ ಅನ್ಯದೈವವಿಲ್ಲ'ವೆನ್ನುತ್ತ ವಾಗೀಶ್ವರನು ಅದಕ್ಕೆ ಒಪ್ಪಿಕೊಳ್ಳುವುದಿಲ್ಲ. ಆಗ ಅವರು ಆತನನ್ನು ನಾನಾ ವಿಧವಾಗಿ ನಿಂದಿಸುವರು, ದಂಡಿಸುವರು. ಅದಕ್ಕೆಲ್ಲ ಆತ ಮಣಿಯಲಿಲ್ಲ. ಕೊನೆಗೆ ಅವರು ಆತನನ್ನು ಮುಗಿಸಿಯೇ ಬಿಡಬೇಕೆಂದು ನಿಶ್ಚಯಿಸಿ, ಗೋಣಿ ಚೀಲವೊಂದರಲ್ಲಿ ಆತನನ್ನು ಹಾಕಿ ಸಮುದ್ರದಲ್ಲಿ ಎಸೆಯುವರು. ಆ ಚೀಲವು ಮುಳುಗದೆ ನೀರಿನ ಮೇಲೆ ತೇಲತೊಡಗುವುದು. ಇದನ್ನು ಕಂಡು ಆ ದ್ವೇಷಿಗಳು ವಾಗೀಶ್ವರನು ಶ್ರೇಷ್ಠ ಶಿವಭಕ್ತನೆಂದೂ, ಶಿವನೇ ದೈವವೆಂದೂ ನಂಬುವರು.[15]

ಅಗ್ನಿದಿವ್ಯ : ಸೊನ್ನಲಾಪುರ ಕ್ಷೇತ್ರವು ಸಿದ್ಧರಾಮನಿಂದ ಮಂಗಳಮಯವಾಗಿ ಪರಿಣಮಿಸಿದರೂ ಅದು ಕಾಶಿ, ಗಯೆಗಳಿಗೆ ಸಾಟಿಯಾಗಲಾರದೆಂದು ಕೆಲ ಅನ್ಯ ಮತೀಯರು ನುಡಿದುದನ್ನು ಹಾವಿನಹಾಳ ಕಲ್ಲಯ್ಯನು ಕೇಳಿ, ಸಿದ್ಧರಾಮನಲ್ಲಿಗೆ ಬಂದು ಆತನಿಗೆ, 'ಸೊನ್ನಲಾಪುರ ಕ್ಷೇತ್ರವು ಶ್ರೇಷ್ಠವಾದ ಪುಣ್ಯಕ್ಷೇತ್ರವೆಂದು ಜನ ನಂಬುವಂತೆ ಏನಾದರೂ ದೃಷ್ಟಾಂತ ತೋರಿಸು' ಎಂದು ಬೇಡಿಕೊಳ್ಳುವನು. ಆಗಲಿ ಎಂದು ಸಿದ್ಧರಾಮನು, ಪಂಚಲೋಹಗಳಿಂದ ಮಾಡಿದ ಗುಂಡೊಂದನ್ನು ತೆಗೆದುಕೊಂಡು ಕಾಯಿಸುವನು. 'ಧರೆಯಲ್ಲಿ ಸೊನ್ನಲಾಪುರಕ್ಕೆ ಸಮನಾದ ಪುಣ್ಯಕ್ಷೇತ್ರ ಇನ್ನೊಂದಿಲ್ಲ, ಈ ಮಾತು ಸಟೆಯಾದರೆ ನನ್ನ ಕೈ ಸುಡಲಿ' ಎನ್ನುತ್ತ,

---

14 ಬಸವಪುರಾಣ, ಸಂ-೫, ೧-೬೪, ಶ್ರೀ ಸಿದ್ಧೇಶ್ವರ ಪುರಾಣ, ಸಂ-೭, ಪ-೭೩ ಗುರುರಾಜ ಚಾರಿತ್ರ, ಸಂ-೨, ಪ-೬೮ ಶಿವಶರಣ ಕಥಾರತ್ನಕೋಶ, ಪುಟ-೧೯೬

15. ಹಿರೇಮಠ ಆರ್. ಸಿ. (ಸಂ) : ಪುರಾತನರ ರಗಳೆಗಳು, ವಾಗೀಶ್ವರ ರಗಳೆ, ಸ್ಥಲ-೨

ಆತನು ಜನರ ಸಮ್ಮುಖದಲ್ಲಿ[16] ಆ ಗುಂಡನ್ನು ಎತ್ತಿ ಹಿಡಿಯುವನು. ಸಿಗಿ ಸಿಗಿ ಹೊಳೆಯುವ ಕೆಂಡದಂತಿದ್ದ ಅದು ಆತನ ಕೈಯಲ್ಲಿ ಕಮಲದಂತೆ ಮೃದುವಾಗುವುದು. ಕೆಳಗೆ ಚೆಲ್ಲಲು ಉರಿಯತೊಡಗುವುದು. ಇದನ್ನು ಕಂಡು ಜನ ಆಶ್ಚರ್ಯ ಚಕಿತರಾಗುವರು. ಸಿದ್ಧರಾಮನು ಅವರಿಗೆ 'ಈಗಲಾದರೂ ಕಪಿಲಸಿದ್ಧ ಮಲ್ಲಿಕಾರ್ಜುನನನ್ನು, ಸೊನ್ನಲಾಪುರ ಪುಣ್ಯಕ್ಷೇತ್ರವೆಂಬುದನ್ನು ನಂಬಿರಿ' ಎನ್ನುವನು. ಅವರು ಶ್ರೇಷ್ಠ ಪುಣ್ಯಕ್ಷೇತ್ರವೆಂದು ನಂಬುವರು.[17]

ಪ್ರಸ್ತುತ ದಿವ್ಯವು ಜನತೆಯಲ್ಲಿನ ಸಂಶಯವನ್ನು ಹೋಗಲಾಡಿಸಿ, ಸೊನ್ನಲಾಪುರವು ಪುಣ್ಯಕ್ಷೇತ್ರವೆಂದು ನಂಬುವಂತೆ ಮಾಡಿದೆ. ಕ್ಷೇತ್ರ ಮಹಿಮೆಯನ್ನು ಸಾರಿದ. ಈ ರೀತಿ ಅಗ್ನಿದಿವ್ಯಕ್ಕೆ ಸಂಬಂಧಿಸಿದ ಇನ್ನೂ ಕೆಲ ಕಥೆಗಳನ್ನಿಲ್ಲಿ ಉದಾಹರಿಸಬಹುದು.

ವರದಾನಿ ರಾಮಯ್ಯನೆಂಬ ಶಿವಭಕ್ತನ ಮುಂದೆ ಅನ್ಯಮತೀಯರು ಬಸವ ಪುರಾಣವು ಎತ್ತಿನ ಪುರಾಣವೆಂದು ಹೀಯಾಳಿಸುವರು. ಆಗ ರಾಮಯ್ಯನು ಅವರಿಗೆ, 'ಅದು ಎತ್ತಿನ ಪುರಾಣವಲ್ಲ, ನಂದಿಯ ಅವತಾರಿಗಳಾಗಿ ಮರ್ತ್ಯದಲ್ಲಿ ಜನಿಸಿದ ಬಸವಣ್ಣನವರದು' ಎಂದು ತಿಳಿಸಿ, ಅದು ಶ್ರೇಷ್ಠವಾದ ಪುರಾಣವೆನ್ನುವನು. 'ಅದು ಶ್ರೇಷ್ಠವಾದುದೆನ್ನಲಿಕ್ಕೆ ಪ್ರಮಾಣವೇನು ? ಅದನ್ನು ಅಗ್ನಿಯಲ್ಲಿ ಹಾಕಿ ನೋಡೋಣ. ಅದು ಸುಡದಿದ್ದರೆ ಶ್ರೇಷ್ಠವಾದುದೆಂದು ನಂಬುವೆವು, ಎನ್ನುವರು. ನೀವು ಅಂದಂತೆಯೇ ಆಗಲೆಂದು ಆತನು ಅದನ್ನು ಅಗ್ನಿಯಲ್ಲಿ ಹಾಕುವನು. ಅಗ್ನಿಯು ಅದನ್ನು ಸ್ಪರ್ಶಿಸಲಿಲ್ಲ. ಆಗ ಅವರು ಅದು ಶ್ರೇಷ್ಠವಾದುದೆಂದು ಒಪ್ಪಿಕೊಳ್ಳುವರು.[18] ಹಿಂದೆ ಭಾಸನ ಕೃತಿಯ ಶ್ರೇಷ್ಠತೆಯನ್ನು ಪರೀಕ್ಷಿಸಲು ಇದರಂತೆಯೇ ಅಗ್ನಿಯಲ್ಲಿ ಹಾಕಿ ನೋಡಲು ಅದು ಸುಡಲಿಲ್ಲವಂತೆ. ಶ್ರೀ ರಾಮನು ರಾವಣನಿಂದ ಸೀತೆಯನ್ನು ಪುನಃ ಸ್ವೀಕರಿಸುವುದಕ್ಕೆ ಮುನ್ನ ಆಕೆಯ ಪಾತಿವ್ರತ್ಯವನ್ನು ಹೀಗೆಯೆ ಪರೀಕ್ಷಿಸುವನು. 'ಪಂಚವಿಂಶ ಅಥವಾ ತಾಂಡ್ಯ ಬ್ರಾಹ್ಮಣದಲ್ಲಿ (೧೪.೬.೬) ವತ್ಸ ಎನ್ನುವವನು ತಾನು ಶೂದ್ರಳೊಬ್ಬಳ ಮಗನಲ್ಲವೆಂದೂ ಬ್ರಾಹ್ಮಣನೆಂದೂ ತೋರಿಸಲು ಅಗ್ನಿಪ್ರವೇಶ ಮಾಡಿ ಯಾವ ತೊಂದರೆಯೂ ಇಲ್ಲದೆ ಹೊರಗೆ ಬಂದನೆಂದು ಹೇಳಿದೆ. ಸಂಸ್ಕೃತ ಗ್ರಂಥಗಳಲ್ಲಿ ದಿವ್ಯದ ವಿಷಯಕ್ಕೆ ಇದೇ ಅತ್ಯಂತ ಪ್ರಾಚೀನ ಉಲ್ಲೇಖ. ಛಾಂದೋಗ್ಯದಲ್ಲಿ (VI.೧೬.೧) ಕಳ್ಳತನದ ಆಪಾದನೆಗೆ ಗುರಿಯಾಗಿರುವ ವ್ಯಕ್ತಿಯು ತಾನು ನಿರಪರಾಧಿ ಎಂಬುದನ್ನು

16. 'The place must be public, in the hall of justice or before the kings palace, or a temple or at cross roads, just as a royal sacrifice is public' – Encyclopaedia of Religion and Ethics, Vol-9, Page-523

17. ಸಿದ್ಧರಾಮಚಾರಿತ್ರ, ಸಂ-೭, ರಾಘವಾಂಕ ಚರಿತೆ ಸಂ-೧೫, ಪ-೦—೫೨

18. ಶಿವತತ್ತ್ವ ಚಿಂತಾಮಣಿ ಸಂ-೩೮, ಪ-೪೦-೪೧, ಚೆನ್ನಬಸವಪುರಾಣ, ಸಂ-೬೨, ಪ-೬೮ ಶ್ರೀ ಸಿದ್ಧೇಶ್ವರ ಪುರಾಣ, ಸಂ-೧೪, ಪ-೧೪, ಗುರುರಾಜಚಾರಿತ್ರ, ಸಂ-೧೦, ಪ-೫೩-೫೪,

ತೋರಿಸಲು ಬೆಂಕಿಯಲ್ಲಿ ಕಾಯಿಸಿದ ಕೊಡಲಿಯನ್ನು ಹಿಡಿಯುವ ವಿಷಯವಿದೆ.[19]

ವಿಷದಿವ್ಯ : ಬಸವಣ್ಣನವರು ನಡೆಸುತ್ತಿದ್ದ ದಾಸೋಹದಲ್ಲಿ ಭಕ್ತರಿಗಷ್ಟೇ ಪ್ರವೇಶವಿದ್ದಿತು. ಭವಿಗಳಿಗಿರಲಿಲ್ಲ ಬಸವಣ್ಣನವರ ವ್ಯಕ್ತಿತ್ವಕ್ಕೆ ಕಲಂಕ ಹಚ್ಚುವ, ಅವರ ಧಾರ್ಮಿಕ ಆಚರಣೆಗಳನ್ನು ಲಘುವಾಗಿ ಕಂಡು ಅಪಹಾಸ್ಯಗೈಯ್ಯುವ ಉದ್ದೇಶದಿಂದ ಕೆಲ ಅನ್ಯಮತೀಯರು ಮತ್ತು ಕಳ್ಳರು ಭಕ್ತರಂತೆ ವೇಷಧರಿಸಿಕೊಂಡು ದಾಸೋಹ ಮನೆಯಲ್ಲಿ ಪ್ರವೇಶಪಡೆದು, ಅಲ್ಲಿ ಅವರೆಲ್ಲ ನಿಜಭಕ್ತರೇ ಆಗಿ ಪರಿವರ್ತನೆಗೊಂಡ ವಿಷಯವನ್ನು ಕೆಲ ವೀರಶೈವ ಪುರಾಣಗಳು ವರ್ಣಿಸಿವೆ. ಬಸವಣ್ಣನವರು ನಡೆಸುತ್ತಿದ್ದ ದಾಸೋಹದ ಮೇಲೆ ಎಲ್ಲ ಜನರ ಕಣ್ಣಿತ್ತು. ಪುಕ್ಕಟೆ ಪ್ರಸಾದ ದೊರೆಯುವುದೆಂದು ತಿಳಿದು ಭಕ್ತರಲ್ಲದವರೂ ಅದನ್ನು ಬಯಸುವರು. ಒಂದು ದಿನ ಕೆಲ ಕಬ್ಬಿಲರು ಬಿಜ್ಜಳನ ಹತ್ತಿರ ಹೋಗಿ 'ಬಸವಣ್ಣನು ನಮಗೆ ಪ್ರಸಾದ ಕೊಡುತ್ತಿಲ್ಲ' ವೆಂದು ದೂರುವರು. ಆಗ ಆತನು ಬಸವಣ್ಣನವರನ್ನು ಕರೆಸಿ ಅವರಿಗೂ ಪ್ರಸಾದ ಕೊಡಲು ತಿಳಿಸುವನು. ಆದಕ್ಕೆ ಬಸವಣ್ಣನವರು 'ಪ್ರಸಾದದ ನಂಬಿಕೆ ಇದ್ದವರಿಗೆ ಮಾತ್ರ ಅದು ಸಿಗುವುದೇ ವಿನಾ ಎಲ್ಲರಿಗೂ ಸಿಗದು' ಎನ್ನುವರು. ಇದನ್ನು ಕೇಳಿ ಆ ಕಬ್ಬಿಲರು 'ಪ್ರಸಾದ ಕೊಡದಿದ್ದರೆ ನಾವು ಇಲ್ಲಿಯೇ ಸಾಯುವೆವು' ಎಂದು ಹಠ ಹಿಡಿಯುವರು. 'ಪ್ರಸಾದ ಸ್ವೀಕರಿಸುವ ಅರ್ಹತೆ ನಿಮ್ಮಲ್ಲಿದ್ದರೆ ಸಂಗಮನಾಥನಿಗೆ ವಿಷವನ್ನು ನಿವೇದಿಸಿ, ಅದನ್ನೇ ಪ್ರಸಾದವೆಂದು ಕೊಡುವೆನು ಸ್ವೀಕರಿಸುವಿರಾ ? ಎಂದು ಕೇಳುವರು. 'ನಮಗಾದರೆ ವಿಷ ಪ್ರಸಾದ, ಭಕ್ತರಿಗಾದರೆ ಅಮೃತ ಪ್ರಸಾದ, ಇದೊಳ್ಳೆಯದು, ಜೀವವಿದ್ದರೆ ಕಾರಿಯ ಸೊಪ್ಪನ್ನಾದರೂ ತಿಂದು ಬದುಕೇವು, ನೀವಿಕ್ಕುವ ವಿಷಪ್ರಸಾದವನ್ನು ನಿಮ್ಮ ಭಕ್ತರುಂಡು ಬದುಕಲಿ ನೋಡೋಣ. ನಮಗೆ ಪ್ರಸಾದ ಬೇಕಿಲ್ಲ' ಎನ್ನುವರು. ಆಗಲಿ ಎಂದು ಬಸವಣ್ಣನವರು ವಿಷವನ್ನು ಸಂಗಮನಾಥನಿಗೆ ನಿವೇದಿಸಿ ಭಕ್ತರಿಗೆ ಹಂಚುವರು. ಅವರು ಪವಿತ್ರಭಾವನೆಯಿಂದ ಅದೇ ಪ್ರಸಾದವೆಂದು ನಂಬಿ ಸ್ವೀಕರಿಸುವರು. ಆದು ಅವರಿಗೆ ಅಮೃತಮಯ ಪ್ರಸಾದವಾಗಿ ಪರಿಣಮಿಸುವುದು.'[20] ಇಂಥವೇ ವಿಷದಿವ್ಯದ ಕಥೆ ಸಿದ್ಧರಾಮ ಚಾರಿತ್ರದಲ್ಲೂ ವರ್ಣಿತವಾಗಿದೆ.[21]

ಶರಣರು ಗತಿಸಿದ ಅನಂತರ, ವೀರಶೈವಧರ್ಮ, ಶಿವನ ಸರ್ವಾಂತರ್ಯಾಮಿತ್ವ, ಶರಣರ ಭಕ್ತಿನಿಷ್ಠೆ, ಧರ್ಮಗ್ರಂಥ, ಪ್ರಸಾದ ಮತ್ತು ಪುಣ್ಯಕ್ಷೇತ್ರ-ಇವನ್ನೆಲ್ಲ ಅನ್ಯಮತೀಯರು ಲಘುವಾಗಿ ಕಾಣತೊಡಗಿದಂತೆ ತೋರುತ್ತದೆ. ಅವರು ಇವುಗಳನ್ನು ಶ್ರೇಷ್ಠವಾದುವೆಂದು ಒಪ್ಪಿಕೊಳ್ಳದೆ, ಹೀಯಾಳಿಸ ತೊಡಗಿದರೆಂದು ಕಾಣುತ್ತದೆ. ಆಗ ವೀರಶೈವ ಪುರಾಣಕಾರರು ಅವು ಶ್ರೇಷ್ಠವಾದುವೆಂದು ಅವರಿಗೆ ತಿಳಿಸಲು ದಿವ್ಯಗಳನ್ನವಲಂಬಿಸಿದುದು ಮೇಲಿನ ಕಥೆಗಳಿಂದ ವಿದಿತವಾಗುತ್ತದೆ.

---

19. ಚಿದಾನಂದಮೂರ್ತಿ ಎಂ. : ಸಂಶೋಧನ ತರಂಗ, ಭಾಗ-೧, ಪುಟ-೮೯.
20. ಬಸವಪುರಾಣ, ಸಂ-೫೭, ಪ-೨೭-೬೯, ಸಿಂಗಿರಾಜ ಪುರಾಣ, ಸಂ-೩೩, ಪ ೪-೩೧ ಚೆನ್ನಬಸವಪುರಾಣ ಸಂ-೫೭, ಪ-೪೮, ಗುರುರಾಜ ಚಾರಿತ್ರ ಸಂ ೧೨, ಪ೫೨-೫೮
21. ಸಿದ್ಧರಾಮಚಾರಿತ್ರ ಸಂ-೫, ಪ-೧೨-೧೬.

ಶರಣರು ಯಾವ ಅಪರಾಧಗೈಯದಿದ್ದರೂ ಅವರ ಭಕ್ತಿ ನಿಷ್ಠೆ, ಧರ್ಮನಿಷ್ಠೆ ಮತ್ತು ಸಾತ್ವಿಕ ಶಕ್ತಿಯನ್ನು ಒರೆಗೆ ಹಚ್ಚುವ ಅನೇಕ ಪ್ರಸಂಗಗಳು ಅವರ ಜೀವಿತಾವಧಿಯಲ್ಲಿ ನಡೆದುವೆಂದು ಪುರಾಣಕಾರರು ಹೇಳುವರು. ಅನ್ಯಮತೀಯರು, ದ್ವೇಷಿಗಳು ಒಡ್ಡಿದ ಅನೇಕ ಆತಂಕಗಳನ್ನು, ಗಂಡಾಂತರ ಪ್ರಸಂಗಗಳನ್ನು ಶರಣರು ಧೈರ್ಯದಿಂದ ಎದುರಿಸಿ, ತಾವು ನಿರ್ದೋಷಿಗಳೆಂದೂ, ತಾವು ಸಾರಿದ ಸಂದೇಶ–ಧಾರ್ಮಿಕ ತತ್ವಗಳು ಶ್ರೇಷ್ಠವಾದುವೆಂದೂ ದಿವ್ಯಗಳ ಮೂಲಕ ಸಿದ್ಧಪಡಿಸಿರುವರೆಂದೂ ಪುರಾಣಕಾರರು ಬಣ್ಣಿಸಿರುವರು.

ಶಿವಶರಣರು ದಿವ್ಯದಂತಹ ಅಮಾನುಷವಾದ, ಉಗ್ರವಾದ ನ್ಯಾಯನಿರ್ಣಯದ ಪದ್ಧತಿಯನ್ನಾಗಲೀ, ಪವಾಡಗಳಂತಹ ಅತಿಮಾನುಷ ಶಕ್ತಿಗಳನ್ನಾಗಲೀ ಪುರಸ್ಕರಿಸಿದವರಲ್ಲ. ಅವರು ತಮ್ಮ ಆತ್ಮಸಾಕ್ಷಿಯಾಗಿ ನಡೆದುಕೊಂಡವರು. ಅವರ ಬದುಕು ಪರಿಶುದ್ಧವಾದುದು. ತಮ್ಮ ನಿರ್ಮಲವಾದ ಚಾರಿತ್ರವನ್ನು ಭಕ್ತಿನಿಷ್ಠೆಯನ್ನು ಜನ ಸಮ್ಮುಖದಲ್ಲಿ ಸಮರ್ಥಿಸಿಕೊಳ್ಳುವ ಅಗತ್ಯವಾಗಲೀ, ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿ ದಿವ್ಯದಂತಹ ಉಗ್ರಪರೀಕ್ಷೆಗೊಳಪಟ್ಟು ನ್ಯಾಯನಿರ್ಣಯ ಮಾಡಿಕೊಳ್ಳುವ ಪ್ರಸಂಗವಾಗಲೀ ಮತ್ತು ವೀರಶೈವ ತತ್ವಗಳು, ಧರ್ಮಗ್ರಂಥ ಮತ್ತು ಪುಣ್ಯಕ್ಷೇತ್ರ— ಇವೆಲ್ಲ ಶ್ರೇಷ್ಠವೆಂದು ಸಾರಿ ಜನ ನಂಬುವಂತೆ ಯತ್ನಿಸುವ ಪ್ರಮೇಯವಾಗಲೀ ಅವರಿಗಿರಲಿಲ್ಲ. ತೀರ್ಥಕ್ಷೇತ್ರಯಾತ್ರೆಯನ್ನೇ ಅವರು ವಿರೋಧಿಸಿರುವರು. ತೀರ್ಥಕ್ಷೇತ್ರಯಾತ್ರೆಗೈದು ಪಾವನರಾದೆವೆಂದುಕೊಳ್ಳುವವರನ್ನು ತಮ್ಮ ಅನೇಕ ವಚನಗಳಲ್ಲಿ ನಿರ್ದಾಕ್ಷಿಣ್ಯವಾಗಿ ವಿಡಂಬಿಸಿರುವರು. ವಸ್ತುಸ್ಥಿತಿ ಹೀಗಿರುವಾಗ, ಶರಣರು ದಿವ್ಯಗಳ ಮೂಲಕ ಕ್ಷೇತ್ರಮಹಿಮೆಯನ್ನು ಸಾರಿದರೆಂದು ಪುರಾಣಕಾರರು ವರ್ಣಿಸಿದುದು ನಿಜಕ್ಕೂ ಹಾಸ್ಯಾಸ್ಪದವೆನ್ನಿಸುತ್ತದೆ, ಆಭಾಸವೆನ್ನಿಸುತ್ತದೆ. ಶರಣರು ನುಡಿದಂತೆ ನಡೆದ ಮಹಾನುಭಾವರು. ಯಾರ ಸಂಶಯಕ್ಕೂ ತಲೆಬಾಗದ ಅವರ ಬದುಕು ನೈತಿಕ ನೆಲೆಗಟ್ಟಿನ ಮೇಲೆ ನಿಂತುದು.

ಶರಣರ ತರುವಾಯ ಬಂದ ಅನೇಕ ವೀರಶೈವ ಪುರಾಣಕಾರರು ಅವರ ಧ್ಯೇಯೋದ್ದೇಶಗಳನ್ನೇ ಸರಿಯಾಗಿ ಅರ್ಥಯಿಸಿಕೊಂಡಂತಿಲ್ಲ. ಅವರು ಸಾರಿದ ಸಂದೇಶ, ತತ್ವಗಳು ಮತ್ತು ಎತ್ತಿಹಿಡಿದ ಮೌಲ್ಯಗಳನ್ನು ಕೆಲವೆಡೆ ತದ್ವಿರುದ್ಧವಾಗಿಸಿದುದನ್ನು ಕಾಣಬಹುದು. ಶರಣರು ಅಲೌಕಿಕ ಶಕ್ತಿಯುಳ್ಳವರು, ಮಹಿಮಾಪುರುಷರು ಎಂದು ಒತ್ತುಕೊಟ್ಟು ವರ್ಣಿಸಿರುವರು. ಇದರಿಂದ ಶರಣರ ಚರಿತ್ರೆಯಲ್ಲಿ ನೈಜತೆಯ ಅಂಶ ಕಡಿಮೆಯಾಯಿತು. ಎಷ್ಟೋ ವಿವಿದಾತ್ಮಕ ವಿಷಯಗಳು ಅವರ ಚರಿತ್ರೆಯಲ್ಲಿ ಸೇರಿಕೊಂಡುವು. ಅವುಗಳಲ್ಲಿ ದಿವ್ಯದ ಕಥೆಗಳೂ ಒಂದೆನ್ನಬಹುದು. ಇವುಗಳನ್ನು ಅವರು ತಮ್ಮ ಪುರಾಣಗಳಲ್ಲಿ ವರ್ಣಿಸಲು ಅಂದಿನ ಸಮಾಜದಲ್ಲಿ ರೂಢಿಗತವಾದ, ಜನತೆಯಿಂದ ಶಾಸ್ತ್ರೋಕ್ತವಾದ ಪದ್ಧತಿಯೆಂದು ಮನ್ನಣೆ ಪಡೆದ[22] ದಿವ್ಯಗಳೇ ಪ್ರೇರಣೆ ನೀಡಿದಂತೆ ತೋರುತ್ತದೆ.

22. ಚಿದಾನಂದಮೂರ್ತಿ ಎಂ. :
ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ—೩೪೭.

ಇಂದಿನ ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ *

● ಎಚ್. ಆರ್. ಅಮರನಾಥ

ರಂಗಭೂಮಿ ಎಂದರೆ ಯಾವುದನ್ನು ಕೇಂದ್ರಬಿಂದುವನ್ನಾಗಿ ಇಟ್ಟುಕೊಳ್ಳಬೇಕೆಂಬುದೂ ಒಂದು ಪ್ರಶ್ನೆ. ನಮ್ಮ ಸುತ್ತಲಿನ ರಂಗ ಚಟುವಟಿಕೆಗಳನ್ನು ನೋಡಿದರೆ ಕಂಪನಿ ನಾಟಕಗಳು, ಯಕ್ಷಗಾನ, ಬಯಲಾಟ, ಬೀದಿ ನಾಟಕಗಳು, ಶಾಲಾ-ಕಾಲೇಜುಗಳ ನಾಟಕಗಳು, ಹವ್ಯಾಸಿ ತಂಡಗಳ ನಾಟಕಗಳು–ಎಲ್ಲವೂ ಕಂಡು ಬರುತ್ತವೆ. ಇವೆಲ್ಲವುಗಳ ಪ್ರೇಕ್ಷಕರು, ನಟರು, ನಿರ್ದೇಶಕರು, ವ್ಯವಸ್ಥಾಪಕರು, ನಾಟಕಕಾರರು ಎಲ್ಲರ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯ ಬಗ್ಗೆ ಏನಾದರೂ ಸೂತ್ರವಿಟ್ಟುಕೊಳ್ಳೋಣವೆಂದರೆ "ಡೆಮೋಕ್ರಸಿಯೋ, ದ್ಯಾಮವ್ವನ ಜಾತ್ರಿಯೋ" ಎಂಬ ಬೇಂದ್ರೆಯವರ ಸಾಲು ನೆನಪಾಗುತ್ತದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೂ ನಮ್ಮ ರಂಗಭೂಮಿಯ ಈಗಿನ ಅವಸ್ಥೆಗೂ ಸಂಬಂಧವಿದೆಯೆಂದು ನನ್ನ ಗ್ರಹಿಕೆ. ಭಾರತ ಪ್ರಜಾಪ್ರಭುತ್ವದೊಡನೆ ಹೇಗೋ ಏಗುತ್ತಿರುವ ಹಾಗೆಯೇ ಸಾಹಿತ್ಯಿಕ ನಾಟಕಕಾರರೂ ಪ್ರೇಕ್ಷಕರೊಡನೆ ಏಗುತ್ತಿದ್ದಾರೆ ಎಂದು ನನಗನ್ನಿಸುತ್ತದೆ. 'ಪ್ರೇಕ್ಷಕ ವರ್ಗ–ನಮ್ಮ ರಂಗಭೂಮಿಯ ಸಮಸ್ಯೆ' ಎಂದು ಶ್ರೀರಂಗರ ಪುಸ್ತಕವನ್ನೇ ಬರೆದಿದ್ದಾರೆ.[1] ಪ್ರೇಕ್ಷಕ ವರ್ಗ ಹೀಗೆ ಸಮಸ್ಯೆಯಾಗಿರುವುದರ ಒಂದು ಮುಖ್ಯ ಕಾರಣ ಸಾಮಾಜಿಕ ಪ್ರಜ್ಞೆಯಲ್ಲಿದೆ ಎಂದು ನನ್ನ ಅನಿಸಿಕೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಟ್ಟು ನಂತರ ಪ್ರೇಕ್ಷಕರ, ನಟರ ಮತ್ತು ನಾಟಕಕಾರರ ಸಾಮಾಜಿಕ, ರಾಜಕೀಯ ಪ್ರಜ್ಞೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಒಂದೇ ನಾಟಕ ಬೇರೆ ಬೇರೆ ನಿರ್ದೇಶಕರ ರಂಗಪ್ರದರ್ಶನಗಳಲ್ಲಿ ಬೇರೆ ಬೇರೆ ಸಾಮಾಜಿಕ, ರಾಜಕೀಯ ಪ್ರಜ್ಞೆಯನ್ನು ಅಭಿವ್ಯಕ್ತಿಸಿರುವುದನ್ನು ನಾನು ಕಂಡಿಲ್ಲವಾದ್ದರಿಂದ ನಿರ್ದೇಶಕರ ಬಗ್ಗೆ ಏನನ್ನೂ ಹೇಳುವುದಿಲ್ಲ.

ಮೊನ್ನೆ ಮೊನ್ನೆ ಆಗಸ್ಟ ೩೦, ೩೧ ರಂದು 'ಕನ್ನಡ ನಾಟಕಗಳಲ್ಲಿ ಸಮಕಾಲೀನತೆ' ಎನ್ನುವ ವಿಷಯದ ಮೇಲೆ ಉಡುಪಿಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ

* 'ಉತ್ತರಕನ್ನಡ ಜಿಲ್ಲಾ ನಾಟಕೋತ್ಸವ', ಮಂಚೀಕೇರಿಯಲ್ಲಿ ದಿ. ೨೭-೧೦-೮೭ ರ ವಿಚಾರಗೋಷ್ಠಿಯಲ್ಲಿ ಮಂಡಿಸಲಾದ ಪ್ರಬಂಧ.

1. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. (1969)

ಪ್ರಸನ್ನರ 'ದಂಗೆಯ ಮುಂಚಿನ ದಿನಗಳು' ನಾಟಕ ಪ್ರಯೋಗದ ಕಾಲದಲ್ಲಿ ನಡೆದ ಘಟನೆಯನ್ನು ನೋಡಿ. ಈ ಬಗ್ಗೆ 'ಲಂಕೇಶ್ ಪತ್ರಿಕೆ' ಸಪ್ಟಂಬರ್ ೧೪, ೧೯೮೬)ಯ ಟೀಕೆ-ಟಿಪ್ಪಣಿಯಲ್ಲಿ ಲಂಕೇಶರು ಬರೆದದ್ದು ಹೀಗಿದೆ.

"ತಮ್ಮನ್ನು ಎಡಪಂಥೀಯರೆಂದು ತಿಳಿದುಕೊಂಡಿರುವ ಪ್ರಸನ್ನರಿಗೂ ಉಡುಪಿಯ ಆರೆಸ್ಸೆಸ್‌ಗಳಿಗೂ ಮನಸ್ತಾಪ, ಜಗಳ ನಡೆಯುತ್ತಲೇ ಇರುತ್ತದೆ. 'ಶತರಂಜ್ ಕೆ ಕಿಲಾಡಿ' ಹಿಂದಿ ಸಣ್ಣ ಕತೆಯನ್ನಾಧರಿಸಿದ ಮುಸ್ಲಿಂ ವಸ್ತುವುಳ್ಳ ಈ ನಾಟಕದಲ್ಲಿ ಒಬ್ಬ ಮುಸ್ಲಿಂ ಯುವಕ, "ಹಿಂದೂ ಪುರಾಣದಲ್ಲಿ ಕೃಷ್ಣ ಅಂತ ಇದ್ದಾನಂತೆ, ಆತ ಪಕ್ಕದ ಮನೆಯ ಹೆಂಗಸರನ್ನು ಕದ್ದುನೋಡುವುದು, ಪ್ರೀತಿಸುವುದು ಮಾಡ್ತಾನಂತೆ" ಎಂಬ ಮಾತು ಬರುತ್ತದೆ. ಈ ಮಾತಿನ ಬಗ್ಗೆ ಆರೆಸ್ಸೆಸ್‌ಗಳು ಆಕ್ಷೇಪವೆತ್ತಿ ಮೈಕ್ ಕಿತ್ತುಕೊಂಡು ಕೂಗಾಡಿದರು; ಪ್ರಸನ್ನ ಕ್ಷಮೆ ಕೇಳಬೇಕೆಂದು ಅಬ್ಬರಿಸಿದರು. ನಡೆಯುತ್ತಿದ್ದ ನಾಟಕ ನಿಲ್ಲಿಸಿದ್ದಕ್ಕೆ ನಮಗೆಲ್ಲ ಸಿಟ್ಟು ಬಂದಿತ್ತು. ಆ ಮಾತಿನ ಧಾಟಿ ಮತ್ತು ಸಂದರ್ಭ ಸಾಹಿತ್ಯದ ದೃಷ್ಟಿಯಿಂದ ಚೆನ್ನಾಗಿಲ್ಲದಿದ್ದರೂ ಆರೆಸೆಸ್‌ಗಳ ಉದ್ಧಟತನ ಅಕ್ಷಮ್ಯವಾಗಿತ್ತು. ಇವತ್ತು ಆರೆಸ್ಸೆಸ್‌ಗಳು ಈ ಮಾತಿಗೆ ಆಕ್ಷೇಪಣೆ ಎತ್ತಿದರೆ ನಾಳೆ ಜಮಾತೆ ಇಸ್ಲಾಮಿಗಳು ಇಡೀ ನಾಟಕದ ವಸ್ತುವಿನ ವಿರುದ್ಧ ತಕರಾರೆತ್ತುತ್ತಾರೆ. ಆ ನಾಟಕದ ಕಥೆಯೇ ಮುಸ್ಲಿಂ ಅರಿಸ್ಟಾಕ್ರಸಿ ತನ್ನ ವ್ಯಭಿಚಾರ, ಸೋಮಾರಿತನದಿಂದ ಕುಸಿಯುತ್ತಿರುವ ಚಿತ್ರ ಕೊಡುತ್ತದೆ. ಗಿರೀಶ ಸಮಾಧಾನ ಹೇಳಿದರು. ಚೆಡ್ಡಿಗಳು ಒಪ್ಪಲಿಲ್ಲ; ಶರ್ಮಾ ಹೇಳಿದರು. ಒಪ್ಪಲಿಲ್ಲ. ನಾನು ಸುಮ್ಮನೇ ನೋಡುತ್ತ ಇದ್ದೆ. ಕೆ. ವಿ. ಸುಬ್ಬಣ್ಣ ಧ್ವನಿವರ್ಧಕಕ್ಕೆ ಹೋಗಿ, "ನೀವು ಈ ತರದ ವರ್ತನೆಯಿಂದ ನಿಮ್ಮ ಧರ್ಮ ಮತ್ತು ದೇಶ ಉಳಿಸಬಲ್ಲಿರಿ ಎಂದು ತಿಳಿದಿದ್ದರೆ ಅದು ನಿಮ್ಮ ಭ್ರಮೆ. ನಾವು ನಿಮ್ಮೆಲ್ಲರಿಗಿಂತ ಹೆಚ್ಚು ಆತ್ಮಾಭಿಮಾನಿಗಳೂ ದೇಶಪ್ರೇಮಿಗಳೂ ಆಗಿದ್ದೇವೆ. ಇವತ್ತು ನೀವು ಈ ನಾಟಕ ಆಡುವುದನ್ನು ನಿಲ್ಲಿಸಿದರೆ ಇಲ್ಲಿಗೆ ಅತಿಥಿಗಳಾಗಿ ಬಂದಿರುವ ನಾವೆಲ್ಲ ಈ ನಿಮ್ಮ ಊರಿಗೆ ಎಂದೂ ಕಾಲಿರಿಸುವುದಿಲ್ಲ, ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ .... " ಅಂದರು.

ಆರೆಸ್ಸೆಸ್‌ಗಳು ತೆಪ್ಪಗಾದರು "

ಭರತನ ನಾಟ್ಯಶಾಸ್ತ್ರದಲ್ಲಿ ಒಂದು ಕಥೆ ಬರುತ್ತದೆ. ಬ್ರಹ್ಮನ ಸೂಚನೆಯಂತೆ ಭರತ ಮೊದಲ ನಾಟಕವನ್ನು ಬರೆದು ದೇವಲೋಕದ ಸಭೆಯಲ್ಲಿ ಪ್ರಯೋಗಿಸಿದಾಗ ಆ ನಾಟಕದ ಕಥೆಯಲ್ಲಿ ದೇವಾಸುರ ಯುದ್ಧವಾಗಿ ಅಸುರರು ಸೋಲುವ ಸಂದರ್ಭ ಬಂದಾಗ ಪ್ರೇಕ್ಷಕರಲ್ಲಿದ್ದ ಅಸುರರು ಗದ್ದಲ ಎಬ್ಬಿಸಿ ನಾಟಕ ನಡೆಯದಂತೆ ಮಾಡಿದರಂತೆ. ನಂತರ ಬ್ರಹ್ಮ ನಾಟಕ ಪ್ರಯೋಗಕ್ಕೆ ರಕ್ಷಣಾ ವ್ಯವಸ್ಥೆ ಬೇಕೆಂದು

ತಿಳಿದು ನಾಟ್ಯಗೃಹವಿರಬೇಕೆಂದೂ ಅದನ್ನು ದಿಕ್ಪಾಲಕರು ರಕ್ಷಿಸಬೇಕೆಂದೂ ಯೋಚಿಸಿದನಂತೆ. ಆ ಪ್ರಕಾರವಾಗಿಯೇ ನಾಟ್ಯಗೃಹ ನಿರ್ಮಿಸಿ ನಾಟಕ ಪ್ರದರ್ಶಿಸಲಾಯಿತಂತೆ. ಸಾಂಪ್ರದಾಯಿಕ ನಂಬಿಕೆಯಂತೆ ನಾಟಕದ ಇತಿಹಾಸದಲ್ಲಿ ನಡೆದಿರಬಹುದಾದ ಮೊದಲ ಪ್ರಯೋಗವೇ ಪ್ರೇಕ್ಷಕ ವರ್ಗದ ಪ್ರಜ್ಞೆಯನ್ನು ಎದುರಿಸಬೇಕಾದ್ದು ರಂಗಭೂಮಿಗೇ ವಿಶಿಷ್ಟವಾದ ಸಮಸ್ಯೆಗಳತ್ತ ಬೊಟ್ಟು ಮಾಡಿ ತೋರಿಸುತ್ತದೆ.

ಇಬ್ಸೆನ್ನನ 'A Doll's House' ನಾಟಕದ ನಾಯಕಿ ನೋರಾ ನಾಟಕದ ಅಂತ್ಯದಲ್ಲಿ ಕೇವಲ ಗೊಂಬೆಯಾಗಿ ಉಳಿಯಲು ಇಚ್ಛಿಸದೇ ಗಂಡ, ಮಕ್ಕಳು, ಮನೆ-ಎಲ್ಲವನ್ನೂ ಬಿಟ್ಟು ತನ್ನತನವನ್ನು ಕಂಡುಕೊಳ್ಳಲು ಹೋಗುತ್ತಾಳೆ. ಹೋಗುತ್ತ ಬಾಗಿಲನ್ನು ಧಡಾರನೆ ಹಾಕಿ ಹೋಗುತ್ತಾಳೆ. ಆ ಸದ್ದು ಇಡೀ ಯುರೋಪಿನಲ್ಲಿ ಪ್ರತಿಧ್ವನಿಸಿತೆಂದು ವಿಮರ್ಶಕರು ವರ್ಣಿಸಿದ್ದಾರೆ. ಇಬ್ಸೆನ್ನನ ಈ ನಾಟಕವನ್ನು ವಿರೋಧಿಸಿದ ಜನ ಈ ನಾಟಕದ ಅಂತ್ಯವನ್ನು ಬದಲಾಯಿಸಿ ನೋರಾ ಮನೆಗೆ ವಾಪಸ್ಸು ಬರುವಂತೆ ಬರೆಯಬೇಕೆಂದು ಒತ್ತಾಯಿಸಿದರಂತೆ. ಇವರಿಗೆ ಉತ್ತರ ನೀಡುವಂತೆ ಇಬ್ಸೆನ್ ತನ್ನ ಮುಂದಿನ ನಾಟಕ Ghosts ನಲ್ಲಿ ಗಂಡನ ಎಲ್ಲ ದುರ್ಗುಣಗಳನ್ನು ಸಹಿಸಿ ಬದುಕಿದ ಹೆಂಡತಿಯನ್ನು ಚಿತ್ರಿಸಿ, ಅವರ ಮಗನಿಗೆ ತಂದೆಯ ಪಾಪ ಪರಿಹಾರವಿಲ್ಲದ ಗುಪ್ತರೋಗವಾಗಿ ಕಾಡುವುದನ್ನು ತೋರಿಸಿದ. ಈ ಉದಾಹರಣೆ ನೋಡಿದರೆ ಸಮಕಾಲೀನ ಪ್ರೇಕ್ಷಕ ವರ್ಗದಿಂದ ಅಸಹನೆಯ ಪ್ರತಿಕ್ರಿಯೆ ಪಡೆಯುವುದು ಎಲ್ಲ ಕ್ರಾಂತಿಕಾರಿ ನಾಟಕಕಾರರ ಹಣೆಬರಹವಿರಬಹುದು ಅನಿಸುತ್ತದೆ.

ಉಡುಪಿಯಲ್ಲಾದ ಘಟನೆ ನಾಟ್ಯಶಾಸ್ತ್ರದ ಕಥೆಯಂತೆ ರಂಗಭೂಮಿಯ ಸಾರ್ವಕಾಲಿಕ ಸಮಸ್ಯೆಯೇ? ಇಬ್ಸೆನ್ನನಿಗಾದಂತೆ ಕ್ರಾಂತಿಕಾರಿ ನಾಟಕಕ್ಕೆ ಬಂದ ಪ್ರತಿರೋಧವೇ ? ಅಲ್ಲದಿದ್ದರೆ ಮತ್ತೇನು ? ನಮ್ಮ ಇಂದಿನ ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಅನುಭವಿಸುತ್ತಿರುವ ಬಿಕ್ಕಟ್ಟಿನ ಉಲ್ಬಣ ರೂಪ ಇದು ಅನಿಸುವುದಿಲ್ಲವೇ ? ಇದಕ್ಕೆ ಪರಿಹಾರವೇನು ? ಈ ಪ್ರಶ್ನೆ ಕೇಳಿದಾಗ ಜಾತಿಯ ಸಾಮಾಜಿಕ ಸಮಸ್ಯೆ ಮತ್ತು ಜಾತೀಯತೆಯ ರಾಜಕಾರಣ ಎರಡೂ ಎದುರಾಗುತ್ತವೆ. ಪರಿಹಾರ ಸೂಚಿಸಲು ನಾನು ಸಮರ್ಥನಲ್ಲ. ಆದರೆ ಇಂದಿನ ಕನ್ನಡ ರಂಗಭೂಮಿಯ ಆರೋಗ್ಯದ ದೃಷ್ಟಿಯಿಂದ ಕೆಲವು ಸೂಚನೆಗಳನ್ನು ನೀಡಬಲ್ಲೆ. ಏಕೆಂದರೆ ಸಾಮಾಜಿಕ ಪ್ರಜ್ಞೆ ಸಮಸ್ಯೆಯಾಗುವುದು ರಂಗಪ್ರಜ್ಞೆ ಮರೆತು ಹೋದಾಗ. ಈ ಪ್ರಬಂಧದ ಅಂತ್ಯದಲ್ಲಿ ನಾನು ನೀಡುವ ಸೂಚನೆಗಳು ಹವ್ಯಾಸಿ ಮತ್ತು ವೃತ್ತಿರಂಗ ಭೂಮಿಗಳ ಮಧ್ಯೆ ಇರುವ ಕಂದಕವನ್ನು

ಹೇಗಾದರೂ ತುಂಬಬೇಕೆಂಬ ಉದ್ದೇಶದಿಂದ ಪ್ರೇರೇಪಿತವಾಗಿದೆ. ಉಡುಪಿಯ ಪ್ರೇಕ್ಷಕರ ನಡತೆಯನ್ನು ನಾನು ಸಮರ್ಥಿಸುತ್ತೇನೆಂದು ಯಾರೂ ತಪ್ಪಾಗಿ ತಿಳಿಯ ಬಾರದು.

ರಂಗಭೂಮಿಯಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯ ದೃಷ್ಟಿ ಯಿಂದ ಗಮನ ಸೆಳೆಯುವ ಇತ್ತೀಚಿನ ಬೆಳವಣಿಗೆಯೆಂದರೆ ಬೀದಿ ನಾಟಕಗಳು, ಸಾಮಾನ್ಯವಾಗಿ ಇವು ಯಾವುದಾದರೂ ಚಳುವಳಿಗೆ ಸಂಬಂಧಿಸಿಯೇ ಇರುತ್ತವೆ. ಉದಾಹರಣೆಗೆ ಸಮುದಾಯ, ವಿಮೋಚನಾದವರ ಬೀದಿನಾಟಕಗಳು, ಗೋಕಾಕ್ ವರದಿಯ ಬಗ್ಗೆ, ಕೈಗಾ ಅಣುಸ್ಥಾವರದ ಬಗ್ಗೆ ಬೀದಿ ನಾಟಕಗಳು ಇತ್ಯಾದಿ. ಈ ನಾಟಕಗಳನ್ನು ಪ್ರೇಕ್ಷಕರು ದುಡ್ಡುಕೊಟ್ಟು ನೋಡಬೇಕಾಗಿಲ್ಲವಾದ್ದರಿಂದ ಜನರ ಪ್ರತಿಕ್ರಿಯೆ ಸಾಮಾನ್ಯವಾಗಿ ಚೆನ್ನಾಗಿರುತ್ತದೆ. ರಂಗ ಅನುಭವವಿರುವ ಹವ್ಯಾಸಿ ತಂಡಗಳೇ ಸಾಮಾನ್ಯವಾಗಿ ಇವನ್ನು ನಡೆಸುವುದರಿಂದ ಇವುಗಳಲ್ಲಿ ರಂಗ ಪ್ರಜ್ಞೆ ತಕ್ಕ ಮಟ್ಟಿಗೆ ಚೆನ್ನಾಗಿರುತ್ತದೆ. ಜನಜಾಗೃತಿ ಮತ್ತು ಪ್ರಚಾರ. ಇವು ಗಳ ಸ್ಪಷ್ಟ ಉದ್ದೇಶವಾಗಿರುವುದರಿಂದ ರಂಗ ಪ್ರಜ್ಞೆಯ ಲೋಪಗಳು ಎಷ್ಟೋ ಬಾರಿ ಕ್ಷಮ್ಯವೆನಿಸುವುದೂ ನಿಜ. ಏನೇ ಆದರೂ ರಂಗಭೂಮಿಯ ಕುರಿತಾದ ಚರ್ಚೆಯಲ್ಲಿ ಬೀದಿ ನಾಟಕಗಳು ಕೇಂದ್ರಸ್ಥಾನ ಪಡೆಯುವುದಿಲ್ಲ. ರಂಗ ಭೂಮಿ ಯಲ್ಲಿ ಸಾಮಾಜಿಕ, ರಾಜಕೀಯ ಪ್ರಜ್ಞೆಗೆ ಸಂಬಂಧಿಸಿದಂತೆ ಇದನ್ನು ಬಿಟ್ಟು ಹೋಗುವುದೂ ಸಾಧ್ಯವಿಲ್ಲ.

ನಾಟಕಕಾರರಿಗಿಂತ ಮೊದಲು ವೃತ್ತಿರಂಗ ಭೂಮಿಯು ನಟರ ಸಾಮಾಜಿಕ, ರಾಜಕೀಯ ಪ್ರಜ್ಞೆಯ ಬಗ್ಗೆ ಸ್ವಲ್ಪ ಹೇಳಬಹುದು. ಕಂಪನಿ ನಾಟಕಗಳಲ್ಲಿ ಕೆಲವು ನಟರು ನಾಟಕದಲ್ಲಿಲ್ಲದ ಕೆಲವು ಮಾತುಗಳನ್ನು ಸ್ವಯಂಸ್ಫೂರ್ತಿಯಿಂದ, ಅಥವಾ ಪ್ರೇಕ್ಷರನ್ನು ನೋಡಿಕೊಂಡು, ಅಥವಾ ಮಾಲಿಕನ ಆದೇಶದಂತೆ ಹೇಳು ತ್ತಾರೆ. ಬಿಸಿ ಬಿಸಿ ಸುದ್ದಿಯಲ್ಲಿರುವ ಸಾಮಾಜಿಕ ರಾಜಕೀಯ ಘಟನೆಗಳಿಗೆ, ಹೇಳಿಕೆಗಳಿಗೆ ಪ್ರತಿಕ್ರಿಯೆ ವ್ಯಕ್ತ ಪಡಿಸುತ್ತಾರೆ. ಚುನಾವಣೆಯ ಸಮಯ ಬಂದಾಗ ಕೆಲವು ರಾಜಕೀಯ ಪಕ್ಷಗಳ ಪ್ರಚಾರ ಮಾಡುವುದೂ ಉಂಟು. ಮಾಸ್ಟರ್ ಹಿರಣ್ಣಯ್ಯನವರು ತಮ್ಮ ನಾಟಕ ಪ್ರದರ್ಶನಗಳಿಗೆ ಸರಕಾರದ ಅಧಿಕಾರಿಗಳನ್ನು ಫ್ರೀ ಪಾಸು ಕೊಟ್ಟು ಕರೆಸಿ ಕೂಡ್ರಿಸಿಕೊಂಡು ಆಯಾ ಡಿಪಾರ್ಟ್‌ಮೆಂಟಿನ ಜನ್ಮ ಜಾಲಾಡಿಸುವುದು ಪ್ರಸಿದ್ಧವಾದ ವಿಷಯ.

ಯಕ್ಷಗಾನ ರಂಗದಲ್ಲಿ ನಟನಿಗೆ ಲಿಖಿತ ಮಾತುಗಳಿರುವುದಿಲ್ಲ. ಪಾತ್ರಧಾರಿ ಗಳು ತಮ್ಮ ತಮ್ಮ ಯೋಗ್ಯತೆಗನುಗುಣವಾಗಿ ಅರ್ಥ ಹೇಳುತ್ತಾರೆ, ಅಂಬೆ, ದಾಕ್ಷಾಯಣಿಯರ ಪಾತ್ರಧಾರಿಗಳು ಹೆಣ್ಣಿನ ಸಮಸ್ಯೆಯ ಬಗ್ಗೆ ಸಮಂಜಸವಾಗಿ

ಮಾತನಾಡಿದ್ದನ್ನು ಕಂಡಿದ್ದೇನೆ. ವಿಶ್ವಾಮಿತ್ರ ತ್ರಿಶಂಕುವಿಗೆ ಸದೇಹಸ್ವರ್ಗಾರೋಹಣ ಮಾಡಿಸುವಾಗ ಅಸ್ಪೃಶ್ಯತೆಯ ಸಮಸ್ಯೆಯನ್ನು ರಸಾಭಾಸವಾಗದಂತೆ ಚಿತ್ರಿಸುವವರಿದ್ದಾರೆ. ಆದರೆ ಸ್ತ್ರೀ ಶೋಷಣೆ, ಅಸ್ಪೃಶ್ಯರ ಶೋಷಣೆಯ ಬಗ್ಗೆ ಭಾಷಣ ಬಿಗಿಯುವುದು ಯಕ್ಷಗಾನ ರಂಗಕ್ಕೆ ಹೊಂದುವುದಿಲ್ಲ. ಹಾಡು, ಕುಣಿತ, ಅಭಿನಯ, ಮಾತುಗಾರಿಕೆ ಮುಂತಾದವುಗಳಿಂದ ಸರ್ವಾಂಗ ಸುಂದರವಾದ ಯಕ್ಷಗಾನಗಳಲ್ಲಿ ಕೇವಲ ಮಾತುಗಾರಿಕೆಯನ್ನೇ ಬಂಡವಾಳವಾಗಿಟ್ಟುಕೊಂಡ ಕೆಲವು ಪ್ರಸಿದ್ಧ ನಟರು ರಾಜನ ಪಾತ್ರ ಹಾಕಿಕೊಂಡು ಬಂದು ಕಲಬೆರಕೆ, ಕಾಳ ಸಂತೆ, ಜನಸಂಖ್ಯಾ ಸಮಸ್ಯೆ, ಆಹಾರ ಸಮಸ್ಯೆಗಳ ಬಗ್ಗೆ ಭಾಷಣ ಮಾಡುತ್ತಾರೆ. ಇದೂ ಯಕ್ಷಗಾನದ ರಂಗಪ್ರಜ್ಞೆಗೆ ಹೊಂದುವುದಿಲ್ಲ. ಒಂದೇ ಮಾತಿನಲ್ಲಿದ್ದಾಗ ರಸೋತ್ಕರ್ಷವಾಗುವ ಸಾಮಾಜಿಕ ವಿಷಯ ದೀರ್ಘಭಾಷಣವಾದಾಗ ಆಭಾಸವಾಗುವುದೂ ಇದೆ. ಯಕ್ಷಗಾನದಲ್ಲಿ ಸಾಮಾಜಿಕ ಪ್ರಶ್ನೆಯ ದೃಷ್ಟಿಯಿಂದ ಹಾಸ್ಯಗಾರನ ಪಾತ್ರ ವಿಶಿಷ್ಟವಾಗಿದೆ. ದುಡ್ಡಿಗಾಗಿ ಹಪಹಪಿಸುವ, ಜಗಳಗಂಟನಾದ, ಹತ್ತು ಮಕ್ಕಳ ತಂದೆಯಾದ ಮುದಿಬ್ರಾಹ್ಮಣನ ಪಾತ್ರ ಹಾಸ್ಯಾಸ್ಪದವಾಗುವದಿಲ್ಲ. ಬ್ರಾಹ್ಮಣ ಸಮಾಜದ ಎಲ್ಲ ಕೊಳಕುಗಳನ್ನೂ ಸಮರ್ಥ ಹಾಸ್ಯಗಾರ ಚಿತ್ರಿಸುವ ಸಾಧ್ಯತೆಯಿದೆ. ರಾಮ, ಕೃಷ್ಣ ಎಂಬ ಶಬ್ದಗಳನ್ನು ಹೇಳುತ್ತ ಶ್ರೀ ರಾಮಕೃಷ್ಣ ಹೆಗಡೆಯವರನ್ನು ಬೇಕೆಂದೇ ಸೂಚಿಸುವವರೂ ಇದ್ದಾರೆ ಇತ್ತೀಚೆಗೆ ಯಕ್ಷಗಾನದಲ್ಲಿ 'ಸಂಗ್ಯಾ-ಬಾಳ್ಯಾ' ಪ್ರಯೋಗ ನಡೆದಿದೆ. ಯಕ್ಷಗಾನ ರಂಗಭೂಮಿಗೆ ಇದು ಹೊಸ ಆಯಾಮವನ್ನು ಕೊಟ್ಟಿದೆಯೆಂದು ಹೊಗಳಿದವರೂ ಇದ್ದಾರೆ. ಆದರೆ ಶುದ್ಧ ಸಾಮಾಜಿಕ ಅಥವಾ ಐತಿಹಾಸಿಕ ವಸ್ತು ಯಕ್ಷಗಾನಕ್ಕೆ ಹೊಂದುವುದಿಲ್ಲವೆಂದು ನನ್ನ ಅನಿಸಿಕೆ. ಯಕ್ಷಗಾನ ರಂಗಭೂಮಿ ಸ್ವಭಾವತಃ ಪೌರಾಣಿಕ ವಸ್ತುವಿಗೆ ಬದ್ಧವಾಗಿದೆ.

ಕಂಪನಿ ನಾಟಕಗಳ ನಟರಿರಲಿ, ಮಾ. ಹಿರಣ್ಣಯ್ಯನವರಿರಲಿ, ಯಕ್ಷಗಾನ ನಟರಿರಲಿ ರಂಗಪ್ರಜ್ಞೆಯನ್ನು ನಿಷ್ಠುರವಾಗಿ ಕಾಯ್ದುಕೊಂಡಾಗ ಮಾತ್ರ ರಸಾಸ್ವಾದವಾಗುತ್ತದೆ. ಇಲ್ಲದಿದ್ದಲ್ಲಿ ನಾವು ಆಸ್ವಾದಿಸುವುದು. ಕಲೆಯ ಆನಂದವನ್ನೆಲ್ಲ ಲೌಕಿಕವಾದ ಬೇರೊಂದು ಭಾವವನ್ನು.

ರಂಗ ಪ್ರಜ್ಞೆಯನ್ನು ನಿಷ್ಠುರವಾಗಿ ಕಾಯ್ದುಕೊಳ್ಳುವ ಸವಾಲು ನಾಟಕಕಾರನಿಗೂ ಇದೆ. ನಾಟಕಕಾರನೊಳಗಿರುವ ಸಮಾಜಸುಧಾರಕ ಅಥವಾ ವೈಚಾರಿಕ, ಕಲಾವಿದನ ಮೇಲೆ ಸವಾರಿ ಮಾಡುವ ಸಂದರ್ಭಗಳು ಹೇರಳವಾಗಿವೆ. ಶ್ರೀರಂಗರ ಸುಪ್ರಸಿದ್ಧ ನಾಟಕ 'ಹರಿಜನ್ವಾರ' ದಲ್ಲಿ ವೈಚಾರಿಕ ಕಲಾವಿದನ ವಿರುದ್ಧ ಹೋಗುವುದನ್ನು ಗಿರೀಶ್ ಕಾರ್ನಾಡರು ತೋರಿಸಿದ್ದಾರೆ.[2] ಶ್ರೀರಂಗರ

2. ನಾಟಕಾಂಕ ಮನ್ವಂತರ ಪ್ರಕಾಶನ, ಧಾರವಾಡ. (೧೯೬೭)

ಕಥೆಯೇ ಹೀಗಾದರೆ ಕಂಪನಿ ನಾಟಕಕಾರರ ಬಗ್ಗೆ, ಏನು ಹೇಳುವುದು ? ಸಮಯ ಸಿಕ್ಕಾಗೆಲ್ಲ ನೀತಿಯ ಬಗ್ಗೆ, ಆದರ್ಶದ ಬಗ್ಗೆ ಸುದೀರ್ಘವಾದ ಉಪದೇಶ ಮಾಡುವ ಕಂಪನಿ ನಾಟಕಕಾರರ ಪ್ರವೃತ್ತಿ ಎಲ್ಲರಿಗೂ ಗೊತ್ತಿರುವ ವಿಷಯವಾದ್ದರಿಂದ ಆ ಬಗ್ಗೆ ಹೆಚ್ಚುಹೇಳುವುದಿಲ್ಲ.

ಕಂಪನಿ ನಾಟಕಕಾರರ ರಂಗ ಪ್ರಜ್ಞೆಯ ವಿಷಯ ಬಿಟ್ಟು ಸಾಮಾಜಿಕ ಪ್ರಜ್ಞೆಯನ್ನು ನೋಡಿದರೆ ಕೆಲವು ಅಂಶಗಳು ಗಮನಕ್ಕೆ ಬರುತ್ತವೆ.

೧. ಇತ್ತೀಚೆಗೆ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳು ಕಡಿಮೆಯಾಗಿ ಸಾಮಾಜಿಕ ನಾಟಕಗಳು ಹೆಚ್ಚಾಗಿವೆ.

೨. ಬಡತನದ ಸಮಸ್ಯೆ, ಆಧುನಿಕ ಶಿಕ್ಷಣದ ಸಮಸ್ಯೆ; ಗಂಡು-ಹೆಣ್ಣಿನ ಸಮಸ್ಯೆ – ಇವು ಜನಪ್ರಿಯ ವಸ್ತುಗಳಾಗಿವೆ. 'ಗೌಡ್ರಗದ್ಲ', 'ಸೂಳೆಗೆ ಗಂಡನಾರು' ನಾಟಕಗಳಲ್ಲಿ ಜಮೀನ್ದಾರರು ಮಾಡುವ ಶೋಷಣೆ, ವೇಶ್ಯಾವೃತ್ತಿಯ ಸಮಸ್ಯೆಗಳನ್ನು ಕೈಗೆತ್ತಿಕೊಂಡರೂ ಅತಿರೇಕದ ಥಾಟ್, ಸರಳ ಪರಿಹಾರಗಳು ಇವನ್ನು ಗೌಣವಾಗಿಸುತ್ತದೆ. 'ಸೂಳೆಗೆ ಗಂಡನಾರು' ನಾಟಕ ಮತ್ತು ಚಂದ್ರಶೇಖರ ಪಾಟೀಲರ 'ಅಪ್ಪಾನಾಟಕ – ಇವೆರಡೂ ವೇಶ್ಯಾ ಸಮಸ್ಯೆಯನ್ನು ಚಿತ್ರಿಸಿರುವ ಬಗೆಯನ್ನು ಎರಡರ ಬಗ್ಗೆ ಸಹಾನುಭೂತಿಯಿಂದ ತುಲನಾತ್ಮಕವಾಗಿ ಅಭ್ಯಾಸ ಮಾಡಿ ಕೆಲವು ನಿರ್ಣಯಗಳಿಗೆ ಬರಬಹುದಾದರೆ ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳ ನಡುವಿನ ಕಂದಕ ತುಂಬುವಲ್ಲಿ ಒಂದು ಹೆಜ್ಜೆ ಇಟ್ಟಂತಾಗುತ್ತದೆ ಎಂದು ನನ್ನ ಅನಿಸಿಕೆ.

೩. ನೀತಿಗೆ ಸಂಬಂಧಿಸಿದಂತೆ ಒಳ್ಳೆಯವರು ಮತ್ತು ಕೆಟ್ಟವರು ಎಂಬ ಸರಳವರ್ಗೀಕರಣ ಕಂಪನಿ ನಾಟಕಗಳಲ್ಲಿ ಇರುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಇದರಲ್ಲಿ ಕುತೂಹಲಕಾರಿಯಾದ ಸಂಗತಿ ಒಂದಿದೆ. ಕೆಟ್ಟವರಿಗೆ ಶಿಕ್ಷೆಯಾಗುವುದನ್ನು ಇಲ್ಲಿಯ ಪ್ರೇಕ್ಷಕರು ಒಪ್ಪುತ್ತಾರೆ. ಕೆಟ್ಟವರು ನಾಟಕದ ಅಂತ್ಯದಲ್ಲಿ ಹೃದಯಪರಿವರ್ತನೆಯಾಗಿ ಒಳ್ಳೆಯವರಾದರೆ ಮೆಚ್ಚಿಕೊಳ್ಳುತ್ತಾರೆ. ಒಳ್ಳೆಯವರ ದುರಂತವಾದರೆ ಪರವಾಗಿಲ್ಲ ಎಂದು ಸಹಿಸುತ್ತಾರೆ. ಆದರೆ ಒಳ್ಳೆಯವರು ಹೃದಯ ಪರಿವರ್ತನೆಯಾಗಿ ಕೆಟ್ಟವರಾದರೆ ಅದನ್ನು ಖಂಡಿತಾ ಒಪ್ಪುವುದಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಬಡವನೊಬ್ಬ ಶ್ರೀಮಂತನ ಮನೆಯಲ್ಲಿ ಕೆಲಸಕ್ಕಿರುತ್ತಾನೆ. ಬಡವ ಸಹಜವಾಗಿ ಸಾತ್ವಿಕನೂ, ಸದ್ಗುಣಿಯೂ, ಧರ್ಮನಿಷ್ಠನೂ, ಕಷ್ಟಸಹಿಷ್ಣುವೂ ಆಗಿರುತ್ತಾನೆ. ಶ್ರೀಮಂತ ಸಹಜವಾಗಿ ದುಷ್ಟನೂ, ಕಾಮುಕನೂ, ಕುಡುಕನೂ ಆಗಿರುತ್ತಾನೆ. ಒಂದು ದಿನ ಯಾವುದೋ ಕೆಲಸ ಹೇಳಿ ಬಡವನನ್ನು ದೂರ ಕಳಿಸಿದ ಶ್ರೀಮಂತ ಸುಂದರಿಯೂ,

ಪತಿಭಕ್ತಿಪರಾಯಣೆಯೂ ಆದ ಬಡವನ ಹೆಂಡತಿಯನ್ನು ಕೆಲಸವಿದೆಯೆಂದು ಹೇಳಿ ಕರೆಸಿಕೊಂಡು ಅವಳ ಮನ ಒಲಿಸಲು ಪ್ರಯತ್ನಿಸುತ್ತಾನೆ. ಬಡವನ ಹೆಂಡತಿ ಪಾತಿವ್ರತ್ಯದ ಶಕ್ತಿಯ ಬಗ್ಗೆ ಭಾಷಣ ಮಾಡುತ್ತಾಳೆ. ಜನ ಶಿಳ್ಳು ಹೊಡೆಯು ತ್ತಾರೆ, ಚಪ್ಪಾಳೆ ಹೊಡೆಯುತ್ತಾರೆ. ಶ್ರೀಮಂತ ಆಕೆಯ ಮೇಲೆ ಕೈಮಾಡಲು ಹೋದಾಗ ಆಕೆ ಹೇಗೋ ತಪ್ಪಿಸಿಕೊಂಡರೆ ಪ್ರೇಕ್ಷಕರು ಮೆಚ್ಚುತ್ತಾರೆ. ಶ್ರೀಮಂತ ನನ್ನು ಕೊಂದರೂ ಮೆಚ್ಚುತ್ತಾರೆ. ಬೇರೆ ದಾರಿ ಕಾಣದ ಆತ್ಮಹತ್ಯೆ ಮಾಡಿ ಕೊಂಡರೂ ಮೆಚ್ಚುತ್ತಾರೆ. ಆದರೆ ಬಲಾತ್ಕಾರಕ್ಕೆ ಒಳಗಾಗಿ ಅವನಿಗೆ ಮನ ಸೋತರೆ ಒಪ್ಪುವುದಿಲ್ಲ. ಬಲಾತ್ಕಾರಕ್ಕೆ ಒಳಗಾದವಳು ನಂತರ ಮಹಾಕಾಳಿ ಯಾಗಿ ಸೇಡು ತೀರಿಸಿಕೊಂಡರೂ ಅವರಿಗೆ ಪರವಾಗಿಲ್ಲ. ಕಂಪನಿ ನಾಟಕದ ಪ್ರೇಕ್ಷಕರು ನಾಟಕಗಳಲ್ಲಿ ಒಳ್ಳೆಯತನದಲ್ಲಿ ಶ್ರದ್ಧೆಯನ್ನು ಬಯಸುತ್ತಾರೆ. ನಮ್ಮ ಹವ್ಯಾಸಿ ನಾಟಕಕಾರರು ಕೆಡುಕಿನ ವಿಶ್ವರೂಪ ದರ್ಶನ ಮಾಡಿಸಿದಂತೆ ಒಳ್ಳೆಯ ತನವನ್ನು ತೋರಿಸುವುದಿಲ್ಲವೆಂಬುದೂ ಕಂಪನಿ ಮತ್ತು ಹವ್ಯಾಸಿ ನಾಟಕಗಳಲ್ಲಿಯ ಕಂದಕಕ್ಕೆ ಒಂದು ಕಾರಣವೆನಿಸುತ್ತದೆ. Evil is absolute, good is relative ಎಂಬುದು ಹವ್ಯಾಸಿ ನಾಟಕಕಾರರ ದರ್ಶನವಾದರೆ Good is absolute, evil is relative ಎಂಬುದು ಕಂಪನಿ ನಾಟಕದ ಪ್ರೇಕ್ಷಕರ ಬಯಕೆ. ಇವೆರಡೂ ಸಂಧಿಸುವುದು ಬಹುಶಃ Good and Evil ಎರಡೂ relative ಎಂಬಲ್ಲಿ ಅಥವಾ absolute ಎಂಬಲ್ಲಿ ಅನಿಸುತ್ತದೆ.

೪. ಕಂಪನಿ ನಾಟಕಗಳಲ್ಲಿ ಗಾಂಧಿ, ಸುಭಾಷ್‌ಚಂದ್ರ ಬೋಸರನ್ನು ದೇವತೆಗಳಂತೆ ಸ್ಮರಿಸಲಾಗುತ್ತದೆ. ಜಯಪ್ರಕಾಶ ನಾರಾಯಣ, ವಿನೋಬಾ ಭಾವೆ, ಅಂಬೇಡ್ಕರರ ಹೆಸರು ಅಪರೂಪಕ್ಕೆ ಬರುತ್ತದೆ. ಆದರೆ ಡಾ. ರಾಮ ಮನೋಹರ ಲೋಹಿಯಾ ಅವರ ಹೆಸರು ಬಾಯಿ ತಪ್ಪಿಯೂ ಬರುವುದಿಲ್ಲ (ಬಾಯಿ ತಪ್ಪಿಯಾದರೂ ಬರಲಿಕ್ಕೆ ಅವರ ಹೆಸರನ್ನು ಕೇಳಿರಬೇಕಲ್ಲ !) ಹವ್ಯಾಸಿ ನಾಟಕ ಗಳಲ್ಲಿ ಗಾಂಧಿ-ಸುಭಾಷ್‌ಚಂದ್ರರು ಸಮಸ್ಯೆಯಾಗಿ ಪರೋಕ್ಷವಾಗಿ ಅಹಿಂಸೆ-ಹಿಂಸೆಗಳ ತಾತ್ವಿಕ ರೂಪದಲ್ಲಿ ಬರುತ್ತಾರೆ. ಲೈಂಗಿಕತೆ, ಅಸ್ಪೃಶ್ಯತೆ, ಆಧುನಿಕತೆ ಗಳಿಗೆ ಸಂಬಂಧಿಸಿದಂತೆ ಗಾಂಧಿಯವರ ನಿಲುವಿನ ಪರೋಕ್ಷವಿರೋಧವೂ ಕಂಡು ಬರುತ್ತದೆ. ಇದು ಕಂಪನಿನಾಟಕದ ಪ್ರೇಕ್ಷಕರಿಗೆ ಸದ್ಯ ಸಹನೀಯವಾಗಬಲ್ಲದು ಅನಿಸುವುದಿಲ್ಲ. ಜಾತಿಯ ಸಮಸ್ಯೆ, ಗಂಡು-ಹೆಣ್ಣಿನ ಸಮಸ್ಯೆಗಳು ಅವರಿಗೆ ಪ್ರಿಯ ವಾದರೂ ಈ ಸಮಸ್ಯೆಗಳು ಬಿಕ್ಕಟ್ಟಿನ ಸ್ವರೂಪ ತಳೆದು ನಿರ್ಣಯಾತ್ಮಕವಾಗು ವುದನ್ನು ಅವರು ಇಷ್ಟಪಡುವುದಿಲ್ಲ ಅನಿಸುತ್ತದೆ.

ಇನ್ನು ಸಾಹಿತ್ಯಿಕ ನಾಟಕಗಳಿಗೆ ಬರಬಹುದು ಕೈಲಾಸಂ ಮತ್ತು ಶ್ರೀರಂಗರು ಸಾಮಾಜಿಕ ನಾಟಕಗಳ ಹೊಳೆಯನ್ನೇ ಹರಿಸಿದರು. ಬೇಂದ್ರೆಯವರೂ,

ಕಾರಂತರೂ ಸಾಮಾಜಿಕ ನಾಟಕಗಳನ್ನು ಬರೆದರು. ಕುವೆಂಪು ಅವರ 'ಬೆರಳ್ಗೆ ಕೊರಳ್' 'ಶೂದ್ರತಪಸ್ವಿ' ಮುಂತಾದ ಪೌರಾಣಿಕ ನಾಟಕಗಳಲ್ಲೂ ಸಾಮಾಜಿಕ ಪ್ರಜ್ಞೆಯನ್ನು ಗುರುತಿಸಬಹುದು. ಇವರೆಲ್ಲರ ನಾಟಕಗಳನ್ನು ನೋಡಿದಾಗ ಆಗಿನ ಸಾಹಿತ್ಯಕ ಯುಗವನ್ನು Romantic ಎಂದು ಕರೆದವರ ಬಗ್ಗೆ ಕನಿಕರ ವೆನಿಸುತ್ತದೆ. ಆ ತಲೆಮಾರಿನ ನಾಟಕಗಳ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಅಜ್ಜನ ತಲೆಮಾರಿನವರಿಗಿಂತ ಅಪ್ಪನ ತಲೆಮಾರಿನ ಕಾರ್ನಾಡ್, ಲಂಕೇಶ್ ಕಂಬಾರ, ಚಂದ್ರಶೇಖರ ಪಾಟೀಲರ ಬಗ್ಗೆ ಇಲ್ಲಿ ಹೆಚ್ಚಿನ ಲಕ್ಷ ಕೊಡುತ್ತೇನೆ. 'ಇಂದಿನ ಕನ್ನಡ ರಂಗಭೂಮಿ' ಎಂದರೆ ನಾನು ಈ ಪೀಳಿಗೆಯನ್ನೇ ಗಮನದಲ್ಲಿಟ್ಟು ಕೊಂಡಿದ್ದೇನೆ. ನಂತರದ ಪೀಳಿಗೆಯವರ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಗೊತ್ತಿಲ್ಲ.

ಕೈಲಾಸಂ ಮತ್ತು ಶ್ರೀರಂಗರು ತಮ್ಮ ನಾಟಕಗಳಲ್ಲಿ ಸಮಾಜ ಸುಧಾರಕನ ದೃಷ್ಟಿ ಇಟ್ಟುಕೊಂಡಿದ್ದರು ನಂತರದ ಶ್ರೀರಂಗರು ಹೆಚ್ಚು ಜಟಿಲವಾದ ವೈಚಾರಿಕ ಜಿಜ್ಞಾಸೆಯನ್ನು ನಾಟಕಗಳಲ್ಲಿ ಅಭಿವ್ಯಕ್ತಿಸಿದರು. ನಂತರದ ಪೀಳಿಗೆಯಲ್ಲಿ ಕಂಡುಬರುವ ವಿಶೇಷತೆ ಎಂದರೆ ಇವರ ದೃಷ್ಟಿ ಸಮಾಜ ಸುಧಾರಕನದಲ್ಲ. ಲಂಕೇಶರ ಸಿಟ್ಟಿಗೆದ್ದ ಯುವಕ, ಚಂಪಾರ ಅಸಂಗತ ದೃಷ್ಟಿ, ಕಂಬಾರರ ಜಾನಪದ ನೆಲೆ, ಕಾರ್ನಾಡರ ಆಧುನಿಕತೆ ಮತ್ತು ವಸ್ತು ವೈವಿಧ್ಯ ಈಗಾಗಲೇ ಸಾಕಷ್ಟು ಚರ್ಚೆಗೆ ಒಳಗಾಗಿವೆ. ಒಬ್ಬೊಬ್ಬರ ಒಂದೊಂದು ನಾಟಕದ ಬಗ್ಗೆ ವಿಸ್ತೃತವಾದ ವಿಮರ್ಶೆ ಬಂದಿದೆ. ನಾನು ಅದಕ್ಕೆ ಕೈಹಾಕುವುದಿಲ್ಲ. ಇವರೆಲ್ಲರಿಗೂ ಸಮಾನ ವಾದ ಕೆಲವು ಅಂಶಗಳನ್ನು ಸ್ಥೂಲವಾಗಿ ಹೇಳಬಯಸುತ್ತೇನೆ.

೧. ಇವರು ನಗರದ ಮಧ್ಯಮ ವರ್ಗದ ಸುಶಿಕ್ಷಿತ ಜನರನ್ನು ತಮ್ಮ ಪ್ರೇಕ್ಷಕ ರೆಂದು ಗ್ರಹಿಸುತ್ತಾರೆ. ಅವರ ಬಗ್ಗೆಯಾದರೂ ಇವರಿಗೆ ಆತ್ಮವಿಶ್ವಾಸವಿಲ್ಲ.[3]

೨. ಮಾತುಗಳನ್ನು ಇವರ ವ್ಯಕ್ತಿಗಳ ಮುಖವಾಡ ಕಿತ್ತೊಗೆಯಲು ಅಥವಾ ಮರ್ಮಕ್ಕೆ ಚುಚ್ಚಿ ಘಾಸಿಗೊಳಿಸಲು ಬಳಸುತ್ತಾರೆ.

೩. ಈ ದೇಶದ ಸಂಸ್ಕೃತಿಯ ಘನತೆಯ ಬಗ್ಗೆ ಇವರಿಗೆ ಅನುಮಾನಗಳಿವೆ. ಈ ದೇಶದಲ್ಲಿ ಕ್ರಾಂತಿ ಸಾಧ್ಯವಾಗುವುದಿಲ್ಲವೆಂಬ ಭಾವನೆ ದುಃಖ, ಬೇಸರ, ಸಿಟ್ಟು, ತಿರಸ್ಕಾರ ಮುಂತಾದ ರೂಪಗಳಲ್ಲಿ ಪ್ರಕಟವಾಗುತ್ತದೆ.

ಇನ್ನು ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯ ದೃಷ್ಟಿಯಿಂದ ನನಗೆ ಮುಖ್ಯವೆನಿಸಿದ ಕೆಲವು ನಾಟಕಗಳನ್ನು ಹೆಸರಿಸುತ್ತೇನೆ. ಸಾಮಾಜಿಕ ಆಗು–

---

3 ಈ ಬಗ್ಗೆ ಶ್ರೀ ಚಂದ್ರಶೇಖರ ಕಂಬಾರರ 'ಆಧುನಿಕ ನಾಟಕಕಾರ ಮತ್ತು ಪರಂಪರೆ 'ಜನಪದ ರಂಗಭೂಮಿ' ಎಂಬ ಲೇಖನ ನೋಡಬಹುದು. ಪುಸ್ತಕ : ಕನ್ನಡಪರಂಪರೆ ನಾಟಕ- ಮತ್ತು ಪ್ರಯೋಗ' . ಪ್ರಧಾನ ಸಂಪಾದಕರು, ಶ್ರೀ ಜಿ. ಎಸ್. ಶಿವರುದ್ರಪ್ಪ

ಹೋಗುಗಳಿಗೆ ಮಾಡುವ ಪ್ರತಿಕ್ರಿಯೆ, ತಳೆಯುವ ವೈಚಾರಿಕ ನಿಲುವು, ಹೆಚ್ಚು ವಿಸ್ತಾರವಾದ ಪ್ರಜ್ಞೆ–ಇವುಗಳಿಗೆ ಇರುವ ವ್ಯತ್ಯಾಸವನ್ನು ಈಗಾಗಲೇ ಹೇಳಿದ್ದೇನೆ. ಈ ದೃಷ್ಟಿಯಿಂದ ಇಗ್ಗಪ್ಪ ಹೆಗೆಡೆಯ ವಿವಾಹ ಪ್ರಹಸನ', ಜೋಂದ್ರೆಯವರ 'ಉದ್ಧಾರ' ಚಂ.ಪಾ. ರ 'ಅಪ್ಪ' ನಾಟಕಗಳು ಬಹಳ ಮುಖ್ಯವಾದವು. ಈ ಪಟ್ಟಿಯಲ್ಲಿ ಸಾಮಾಜಿಕ ನಾಟಕಗಳಿಗೇ ಹೆಸರಾದ ಕೈಲಾಸಂ. ಶ್ರೀರಂಗ ಮತ್ತು ಲಂಕೇಶರ ಒಂದು ನಾಟಕವೂ ಇಲ್ಲದಿರುವುದು ಕೆಲವರಿಗೆ ತಪ್ಪೆನಿಸಬಹುದು. ಆದರೆ ಇವರ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆಗಿಂತ ನಿಲುವು ಹೆಚ್ಚು ಮುಖ್ಯವಾಗಿದೆ ಎಂದು ನನ್ನ ಅನಿಸಿಕೆ. ಚಂ. ಪಾ. ರ 'ಅಪ್ಪ' ನಾಟಕದ ಬಗ್ಗೆ ಬರೆಯುತ್ತಾ ಶ್ರೀಮೋಹನರಾಂ ಹೇಳುತ್ತಾರೆ.[4] ಪಾಟೀಲರು ಇದನ್ನು tragic play ಯನ್ನಾಗಿ ಮಾಡದೇ angry play ಯನ್ನಾಗಿ ಮಾಡಿದ್ದರೆ ಇನ್ನೂ ಹೆಚ್ಚು ಮಹತ್ವಪೂರ್ಣವಾಗುತ್ತಿತ್ತೆಂದು ಅನಿಸುತ್ತದೆ". ಆದರೆ ಇದೇ ಕಾರಣಕ್ಕಾಗಿ ಆ ನಾಟಕವನ್ನು ನಾನು ಮೇಲಿನ ಪಟ್ಟಿಯಲ್ಲಿ ಸೇರಿಸಿದ್ದೇನೆ. Angry play ಗಿಂತ Tragic play ಯ ಸತ್ವ ಹೆಚ್ಚಿನದು ಎಂದು ನನ್ನ ಅನಿಸಿಕೆ. ಮೂರು ನಾಟಕಗಳ ಈ ನನ್ನ ಪಟ್ಟಿಗೆ ಸ್ವಲ್ಪ ಅಳುಕುತ್ತಾ ಇನ್ನು ಮೂರು ನಾಟಕಗಳನ್ನು ಸೇರಿಸಬಹುದು: ಶ್ರೀರಂಗರ 'ಕತ್ತಲೆ-ಬೆಳಕು', ಮಾಸ್ತಿಯವರ 'ಕಾಕನಕೋಟೆ', ಮತ್ತು ಕನಾ೯ಡರ 'ಅಂಜುಮಲ್ಲಿಗೆ' ಸಾಮಾಜಿಕ ಸಮಸ್ಯೆಯ ಚಿತ್ರಣ ಇವುಗಳಲ್ಲಿದ್ದರೂ, ನಿಲುವು ಅಷ್ಟು ಪ್ರಮುಖವಾಗಿಲ್ಲದಿದ್ದರೂ ಇವುಗಳ ಕೊರತೆ ಏನೆಂದರೆ ಇವುಗಳಲ್ಲಿ Cultural inwordness ಇಲ್ಲ. ಅಂದರೆ ಈ ನಾಟಕಕಾರರು ತಾವು ಚಿತ್ರಿಸುವ ಸಂಸ್ಕೃತಿಗೆ ಸಾಕಷ್ಟು ಒಳಗಿನವರಾಗಿಲ್ಲ. 'ಕತ್ತಲೆ-ಬೆಳಕು' ನಾಟಕದಲ್ಲಿ ಇತಿಹಾಸದ ವಿವಿಧ ಘಟ್ಟಗಳ ಚಿತ್ರಣ ಆಕರ್ಷಕವಾಗಿದ್ದರೂ ಆಳ ಸಾಕಷ್ಟಿಲ್ಲ. 'ಕಾಕನಕೋಟೆ' ಯಲ್ಲಿ ಕಾಡುಕುರುಬರ ಸಂಸ್ಕೃತಿಯ ದುರಂತದ ದುರ್ವಿಪಾಕವಿಲ್ಲ, ದುರ್ಬಲ ಪಾಕವಿದೆ.[5] 'ಅಂಜುಮಲ್ಲಿಗೆ' ಯಲ್ಲಿ ಮಾಮಿನಿಯದು ವೈಯಕ್ತಿಕ ಸಮಸ್ಯೆಯಾದಷ್ಟು ತೀವ್ರವಾಗಿ ಸಂಸ್ಕೃತಿಯ ಸಮಸ್ಯೆಯಾಗಿಲ್ಲ.

ಇನ್ನು ರಾಜಕೀಯ ಪ್ರಜ್ಞೆ "ನಮ್ಮಲ್ಲಿ ರಾಜಕೀಯ ನಾಟಕಗಳೇ ಇನ್ನೂ ಬಂದಿಲ್ಲ" ವಂದು ಶ್ರೀ ಕೆ.ವಿ. ಸುಬ್ಬಣ್ಣನವರು ಹೇಳಿದ್ದಾರೆ.[6] ಇದನ್ನು ನಾನು

4. 'ಕನ್ನಡ ನಾಟಕ: ವಿಮರ್ಶೆ' ಸಂ : ಕೆ. ಮರುಳಸಿದ್ಧಪ್ಪ (ಜಿಂ. ವಿ. ಸ) ೧೯೭೮
5. ಕಾಕನಕೋಟೆ : ಸಂಘರ್ಷವಿಲ್ಲದ ಸಾಂಸ್ಕೃತಿಕ ಮುಖಾಮುಖಿ ಎಂಬ ನನ್ನ ಲೇಖನ ನೋಡಬಹುದು 'ಕಾಕನಕೋಟೆ ನೆನಪಿನ ಸಂಚಿಕೆ', ರಂಗವಿಭಾಗ, ಮಂಚೀಕೇರಿ (೧೯೭೫)
6. ಸಂವಾದ : ಪ್ರಶಸ್ತಿ ವಿಶೇಷಾಂಕ-54, ಕರ್ನಾಟಕ ನಾಟಕ ಅಕಾಡಮಿ, ಬೆಂಗಳೂರು

ಒಪ್ಪುತ್ತೇನೆ. ಏಕೆಂದರೆ ರಾಜಕೀಯ ನಾಟಕವೆಂದರೆ ರಾಜಕಾರಣಿಗಳ ವಿಡಂಬನೆ. ಯಾಗಲಿ ಮುಖವಾಡ ಕಿತ್ತೊಗೆಯುವುದಾಗಲಿ ಭ್ರಷ್ಟಾಚಾರ ಬಯಲಿಗೆಳೆಯುವುದಾಗಲೀ ಅಲ್ಲ. ಇದರ ಆಳದಲ್ಲಿ ಇತಿಹಾಸದ ಬಗ್ಗೆ ಭದ್ರವಾದ ಸೈದ್ಧಾಂತಿಕ ದೃಷ್ಟಿ ಇರಬೇಕಾಗುತ್ತದೆ. ರಾಜಕೀಯ ನಾಟಕಗಳಲ್ಲದಿದ್ದರೂ ರಾಜಕೀಯ ಪ್ರಜ್ಞೆಯ ದೃಷ್ಟಿಯಿಂದ ಮಹತ್ವದ ನಾಟಕಗಳೆಂದರೆ ಕಾರ್ನಾಡರ 'ತುಘಲಕ' ಲಂಕೇಶರ 'ಸಂಕ್ರಾಂತಿ' ಮತ್ತು ಕಂಬಾರರ ಜೈಸಿದ್ಧನಾಯಕ, ಈ ನಾಟಕಗಳ ವಸ್ತು ಸಮಕಾಲೀನ ರಾಜಕೀಯದ ಕ್ಷೇತ್ರದಿಂದ ಆಯ್ದುಕೊಂಡದ್ದು ಅಲ್ಲವಾದರೂ ಹೆಚ್ಚು ಪ್ರಬುದ್ಧವಾದ ರಾಜಕೀಯ ಪ್ರಜ್ಞೆ ಇವುಗಳಲ್ಲಿದೆ ಅನಿಸುತ್ತದೆ. ಶ್ರೀರಂಗರ 'ಶೋಕ ಚಕ್ರ' ಗಮನಾರ್ಹವಾಗಿದೆ.

'ಒಡಲಾಳ' 'ಕಪ್ಪುಜನ–ಕೆಂಪುನೆರಳು' 'ಲೋಕಶಾಕುಂತಲ' ಮುಂತಾದ ಭಾಷಾಂತರ, ರೂಪಾಂತರ ನಾಟಕಗಳು ಸಾಮಾಜಿಕ ಪ್ರಜ್ಞೆಯ ದೃಷ್ಟಿಯಿಂದ ಮಹತ್ವದ್ದಾಗಿವೆಯಾದರೂ ಸೌಲಭ್ಯದ ದೃಷ್ಟಿಯಿಂದ ಅವುಗಳ ಬಗ್ಗೆ ಚರ್ಚೆಗೆ ನಾನು ಹೋಗುವುದಿಲ್ಲ. 'ರೇಡಿಯೋ ನಾಟಕ' ಗಳು ನನ್ನ ವಿಷಯದ ವ್ಯಾಪ್ತಿಯೊಳಗೆ ಬರುವುದಿಲ್ಲ ಗೀತನಾಟಕಗಳನ್ನು ಸೌಲಭ್ಯಕ್ಕಾಗಿ ಹೊರಗೇ ಇಟ್ಟಿದ್ದೇನೆ.

ಇನ್ನು ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಗಳ ನಡುವಿನ ಕಂದಕ ತುಂಬುವ ದೃಷ್ಟಿಯಿಂದ, ಪ್ರೇಕ್ಷಕ ವರ್ಗ ನಮ್ಮ ರಂಗಭೂಮಿಯ ಸಮಸ್ಯೆಯಾಗಬಾರದೆಂಬ ದೃಷ್ಟಿಯಿಂದ ಕೆಲವು ಸೂಚನೆಗಳನ್ನು ಕೊಡುತ್ತೇನೆ. ಈ ಬಗ್ಗೆ ಆಸಕ್ತಿಯುಳ್ಳವರು ಈ ದಿಶೆಯಲ್ಲಿ ಹೆಚ್ಚಿನ ವಿಚಾರವನ್ನೂ ಪ್ರಯೋಗಗಳನ್ನೂ ಮಾಡಲಿ ಎಂಬ ಆಶಯದಿಂದ ಕೊಡುವ ಸೂಚನೆಗಳು ಇವೇ ಹೊರತು ಉಪದೇಶವಲ್ಲ.

೧. ನಾಟಕ ರಂಜನೆಯ ಮಾಧ್ಯಮ, ಶಿಕ್ಷಣ ಸುಧಾರಣೆಯ ಮಾಧ್ಯಮ ಅಭಿವ್ಯಕ್ತಿಯ, ಆತ್ಮಶೋಧನೆಯ ಮಾಧ್ಯಮ ಎಂಬ ದೃಷ್ಟಿಗಿಂತ ಹೆಚ್ಚಾಗಿ ಇದು ಒಂದು ಲೀಲೆ, ಆಟವೆಂಬ ದೃಷ್ಟಿ ಮೊದಲು ನಾಟಕಕಾರರಲ್ಲಿ ಬೆಳೆಯಬೇಕು. ಜೀವನವನ್ನೇ ನಾಟಕರಂಗವೆಂದು ತಿಳಿಯುವಷ್ಟು ಕಠಿಣವೇನೂ ಇದಲ್ಲ.

೨. ನಾಟಕಕಾರ ತನ್ನ ಪ್ರೇಕ್ಷಕನನ್ನಾಗಿ ಗ್ರಾಮೀಣ ಅಶಿಕ್ಷಿತ ಯುವಕನನ್ನು ಕಲ್ಪಿಸಿಕೊಳ್ಳಬೇಕು.

೩. ನಾಟಕಕಾರ ಪ್ರತ್ಯಕ್ಷವಾಗಿ (ಅಂದರೆ ಭಾಗವತ, ಸೂತ್ರಧಾರ, ನಾಟಕಕಾರ ಮುಂತಾದ ಪಾತ್ರವಾಗಿ) ಅಥವಾ ಪರೋಕ್ಷವಾಗಿ ಅಂದರೆ ಕಥೆಯ ಯಾವುದಾವರೂ ಪ್ರಮುಖಪಾತ್ರದಲ್ಲಿ) ರಂಗದ ಮೇಲೆ ಹಾಜರಾಗಬಾರದು. ಅಪರೋಕ್ಷವಾಗಿ ಎಲ್ಲ ಕಡೆಗೂ ಇರಬೇಕು. ನಾಟಕಕಾರನ ಪ್ರತಿನಿಧಿ ಪಾತ್ರದ ಬದಲು ಪ್ರೇಕ್ಷಕನ ಪ್ರತಿನಿಧಿ ಪಾತ್ರವನ್ನು ನಿರ್ಮಿಸಬೇಕು ಅಥವಾ ಸಂಭಾಷಣೆಯನ್ನು

ಬರೆಯಬೇಕು. ಯಾವುದೇ ಪಾತ್ರ ಯುವಕ, ಯುವತಿ, ವೃದ್ಧ, ಅಧಿಕಾರಿ ನಂ ೧,೨,೩ ಇತ್ಯಾದಿಯಾಗಿ ಹೆಸರಿಲ್ಲದೆಯೇ ರಂಗದ ಮೇಲೆ ಬರಬಾರದು. ಏಕೆಂದರೆ ಹೆಸರು ವ್ಯಕ್ತಿಯೊಬ್ಬನ ಕನಿಷ್ಟ ಗುರುತು.

೪. “ದುಃಖಾರ್ತಾನಾಂ ಶ್ರಮಾರ್ತಾನಾಂ ಶೋಕಾರ್ತಾನಾಂ ತಪಸ್ವಿನಾಂ।
ವಿಶ್ರಾಂತಿ ಜನನಂ ಕಾಲೇ ನಾಟ್ಯಮೇತದ್ಭವಿಷ್ಯತಿ”
(ನಾಟ್ಯಶಾಸ್ತ್ರ, ಅಧ್ಯಾಯ ೧, ಶ್ಲೋಕ ೧೧೯)

ಎಂಬುದನ್ನೂ, ಭರತ ನಾಟಕದ ಮೌಲ್ಯಮಾಪಕರಾಗಿ ಬೇರೆ ಬೇರೆ ೩ ವೃತ್ತಿಯವರಿರಬೇಕೆಂದು ಹೇಳಿರುವುದನ್ನೂ ನೆನಪಿಟ್ಟುಕೊಂಡು ಸಾಮಾನ್ಯ ಜನಗ ಮನಸ್ಸನ್ನು ಸಹಾನುಭೂತಿಯಿಂದ ಚಿತ್ರಿಸಬೇಕು. ಸಾಮಾನ್ಯ ಜನ ಎಂದರೆ ವಿಪರೀತ ಪರಿಸ್ಥಿತಿಯಲ್ಲಿ ರಾಜಿಯಾಗಲು ತಯಾರಿರುವವರು. ಮಹಾಪಾತ್ರರ ಅಸಾಮಾನ್ಯ ನೈತಿಕತೆಯಾಗಲೀ ದುಷ್ಕರ ಕ್ರಿಯಾಶೀಲತೆಯಾಗಲೀ ಇವರಿಗಿರುವುದಿಲ್ಲ. ಉದಾಹರಣೆಗೆ ಸೊಫೋಕ್ಲಿಸನ ಅಂತಿಗೊನೆ ಮತ್ತು ಎಲೆಕ್ಟ್ರಾರ ತಂಗಿಯರ ಪಾತ್ರಗಳು ಮತ್ತು A Doll's House ನಾಟಕದಲ್ಲಿ ನೋರಾಳ ಕಥೆಗೆ ಸಮಾಂತರವಾಗಿ ಬೆಳೆಯುವ ಲಿಂಡಾಳ ಪಾತ್ರ–ಇವನ್ನು ನೋಡಬಹುದು.

೫. ಪ್ರೇಕ್ಷಕನನ್ನು ನಂಬಬೇಕು. ನಮ್ಮ ಎಲ್ಲ ಗುಟ್ಟುಗಳೂ ಗೊತ್ತಿರುವ, ನಮಗಿಂತ ಹಿರಿಯನಾದ ಗೆಳೆಯನನ್ನು ನಂಬುವ ಹಾಗೆ. ಹೀಗಾದರೆ ಮಾತ್ರ ಪ್ರೇಕ್ಷಕನಲ್ಲಿ ಸಹೃದಯತೆ ಬೆಳೆಯ ಬಲ್ಲುದು. ಸಹೃದಯತೆ ಇದ್ದಾಗ ಮಾತ್ರ ರಸಸ್ವಾದ ಸಾಧ್ಯವಾಗುವುದು. ನಾಟಕದ ಸಂದರ್ಭದಲ್ಲಿಯೇ ಭರತನ ಪ್ರಖ್ಯಾತ ರಸಸೂತ್ರ ಹುಟ್ಟಿದ್ದು ಸಾರ್ಥಕವಾಗುವುದು.

೬. ಮಾತನ್ನು ಅಸ್ತ್ರವನ್ನಾಗಿ ಬಳಸದೇ ನೋವಿಗೆ ಸ್ಪಂದಿಸುವ ಮಾಧ್ಯಮವಾಗಿಸಬೇಕು. ಏಕೆಂದರೆ ವಿಡಂಬನೆಯ, ಸಿನಿಕತೆಯ, ಕುಹಕದ ಅಥವಾ ವೀರಾವೇಶದ ಮೂದಲಿಕೆಗಿಂತ ಅಪರಿಹಾರ್ಯರಾದ ನೋವಿನ ದನಿಗೆ ಸಹೃದಯತೆಯನ್ನು ಅರಳಿಸುವ ಶಕ್ತಿ ಹೆಚ್ಚಿರುತ್ತದೆ.

೭. ಜಾತಿ, ಮತಗಳ ಕುರಿತು ಬರೆಯುವಾಗ ಒಂದು ಜಾತಿ ಅಥವಾ ಮತವನ್ನು ಬೇರೆಯವರು ಟೀಕಿಸುವಂತೆ ಬರೆಯುವ ಬದಲು ಆಯಾ ಜಾತಿ ಮತದ ವ್ಯಕ್ತಿಯೇ ಪ್ರಾಮಾಣಿಕವಾಗಿ ಜಿಜ್ಞಾಸೆಗೆ ಒಳಗಾಗುವಂತೆ ಮಾಡಬೇಕು. ಅಂದಾಗ ನಾಟಕಕ್ಕೆ Cultural inwardness ಬರುತ್ತದೆ.

೮. ತಾತ್ವಿಕ ಸಮಸ್ಯೆಯನ್ನು ತಾತ್ವಿಕಮಟ್ಟದಲ್ಲಿಯೇ ಎದುರಿಸಬೇಕೇ ಹೊರತು ವೈಯಕ್ತಿಕಗೊಳಿಸಬಾರದು. (ಉದಾ : ‘ಹಯವದನ’ದಲ್ಲಿ ಪೂರ್ಣತೆಯ

ಸಮಸ್ಯೆ, 'ಹಿಟ್ಟಿನ ಹುಂಜ'ದಲ್ಲಿ ಹಿಂಸೆಯ ಸಮಸ್ಯೆಗಳು ವೈಯಕ್ತಿಕವಾಗಿ ಎದುರಿಸಲ್ಪಟ್ಟಿವೆ.

೯. ಜನ, ಜನಸಮುದಾಯ ಎಂದಾಗ Mass mind, folk-mind, collective, mind common Man's mentality, majority mentality- ಇವುಗಳಲ್ಲಿಯ ವ್ಯತ್ಯಾಸವನ್ನು ಗುರುತಿಸಿ ಸ್ಪಷ್ಟವಾಗಿ ಅರಿಸಿಕೊಳ್ಳಬೇಕು. ('ತುಘಲಕ್' ನಾಟಕದ ಅಜೀಜನ ಪಾತ್ರದಲ್ಲಿ ಈ ಬಗ್ಗೆ ಗೊಂದಲವಿರುವುದರಿಂದಲೇ ಅತ ಪ್ರೇಕ್ಷಕರ ಪ್ರತಿನಿಧಿ ಪಾತ್ರವಾಗುವುದಿಲ್ಲ), ಕಾರ್ಲ್ ಜಿ. ಯೂರಿಸ್ ಹೇಳುವ historical collective unconcessness ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಬೇಕೆಂದು ನನ್ನ ವೈಯಕ್ತಿಕ ಅಪೇಕ್ಷೆ.

'ಕೂಲಿ' ಸಿನೇಮಾದ ಜೊತೆ 'ಅರ್ಧಸತ್ಯ' ಸಿನೇಮಾ ಸ್ಪರ್ಧಿಸಿದಂತೆ 'ಗೌಡ್ರಗದ್ಲ'ದಂತಹ ನಾಟಕದ ಜೊತೆಗೆ ಪ್ರದರ್ಶನದಲ್ಲಿ ಸ್ಪರ್ಧಿಸಬಲ್ಲ ಸಾಹಿತ್ಯಿಕ ನಾಟಕ ಬರಬೇಕೆಂದು ನಾನು ಆಶಿಸುತ್ತೇನೆ. ಉತ್ತಮವಾದ ನಾಟಕಗಳ ಪ್ರದರ್ಶನಗಳಿಗಾಗಿ ತಿಂಗಳುಗಟ್ಟಲೆ ಮೊದಲೆ ಟಿಕೆಟ್ಟು ಮಾರಿ ಕಡೆಗೆ ರಂಗಮಂದಿರ ಅರ್ಧದಷ್ಟು ತುಂಬಿರದಿದ್ದರೂ ಪತ್ರಿಕೆಗಳಲ್ಲಿ ಯಶಸ್ವಿಯೆಂದು ಸುದ್ದಿ ಮಾಡುವ ಬದಲು ಈ ಪ್ರದರ್ಶನಗಳ ಕರಪತ್ರಗಳಲ್ಲಿ, ಪೋಸ್ಟರ್‌ಗಳಲ್ಲಿ "ಇಂದಿನಿಂದ ಅಮೋಘ ಪ್ರಾರಂಭ" ಎಂಬ ಸಾಲು ಕಂಗೊಳಿಸುವ ಕಾಲ ಬರಲೆಂದು ಹಾರೈಸುತ್ತೇನೆ ಹಾಗಾದಾಗ "ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ" ಎಂಬ ಕಾಳಿದಾಸನ ಮಾತು ನಮ್ಮ ಮಟ್ಟಿಗೂ ಸತ್ಯವಾದೀತು.

●

ಹರಿಶ್ಚಂದ್ರಕಾವ್ಯದ ಹೊಲತಿಯರು–ಒಂದು ವಿವೇಚನೆ

● ವಿಜಯಶ್ರೀ ಸಬರದ

ಹರಿಶ್ಚಂದ್ರ ಚರಿತ್ರೆ ವೇದ–ಪುರಾಣ-ಸಾಹಿತ್ಯಗಳಲ್ಲಿ ಪ್ರಸಿದ್ಧವಾದ ಪುರಾತನ ಕಥೆ. ವೈದಿಕ ಗ್ರಂಥಗಳಲ್ಲಿ ಈ ಕಥೆ ಯಾಜ್ಞಿಕಾಂಶಗಳನ್ನೊಳಗೊಂಡಿದ್ದರೆ, ಪೌರಾಣಿಕ ಗ್ರಂಥಗಳಲ್ಲಿ ಐತಿಹಾಸಿಕ ಅಂಶಗಳನ್ನೊಳಗೊಂಡ ಭಾವಾವೇಶದಿಂದೊಡಗೂಡಿವೆ. ಹರಿಶ್ಚಂದ್ರನ ಕಥೆಗೆ ಸಂಬಂಧಿಸಿದ ಈ ಎಲ್ಲವೂ ಆಮೂಲಾಗ್ರವಾಗಿ, ವಿವರವಾಗಿ ಯಾವ ಒಂದು ಕಡೆಗೂ ಸಿಗುವುದಿಲ್ಲ. ಹರಿಶ್ಚಂದ್ರನ ವೃತ್ತಾಂತವನ್ನು ಹೇಳುವ ಪ್ರಮುಖ ವೈದಿಕ ಗ್ರಂಥಗಳೇ ಮೂರು.

೧) ಐತರೇಯ ಬ್ರಾಹ್ಮಣ (ಪಂಚಿಕಾ ೭ ಅಧ್ಯಾಯ–೩)

೨) ಸಾಂಖ್ಯಾಯನ ಶ್ರೌತ ಸೂತ್ರ (೧೫ : ೧೭ : ೨೫)

೩) ವೇದಾರ್ಥ ದೀಪಿಕಾ (ಋಗ್ವೇದ ಭಾಗ ೧೨೪)

ಇವು ಪುರಾಣಗಳಿಗಿಂತಲೂ ಪ್ರಾಚೀನವಾದವುಗಳು. ಹದಿಮೂರನೇ ಶತಮಾನದಲ್ಲಿದ್ದ ರಾಘವಾಂಕನು ತನ್ನ ಕಾಲದಲ್ಲಿದ್ದ ಪೌರಾಣಿಕ ಕಥೆಯನ್ನೇ ತೆಗೆದುಕೊಂಡು ಕಾವ್ಯ ರಚಿಸಿದ್ದಾನೆ. ಮೂಲದಲ್ಲಿ ಇರದ "ಹೊಲತಿಯರ ಪ್ರಸಂಗ" ವಿಶ್ವಾಮಿತ್ರನಿಂದಾದ ಶೋಷಣೆ 'ಹರಿಶ್ಚಂದ್ರನ ಔದಾರ್ಯ' ಇವೆಲ್ಲಾ ರಾಘವಾಂಕ ತನ್ನ ಕಾವ್ಯದಲ್ಲಿ ಜೋಡಿಸಿಕೊಂಡ ಹೊಸ ಅಂಶಗಳು.

ಷಟ್ಪದಿಯಂತಹ ದೇಸಿ ಛಂದಸ್ಸನ್ನು ಕನ್ನಡದ ಕಾವ್ಯದಲ್ಲಿ ಪ್ರಾರಂಭಿಸುವುದರ ಮೂಲಕ ರಾಘವಾಂಕ ಷಟ್ಪದಿಯ ಹರಿಕಾರನಾದ. ರಾಘವಾಂಕನಿಗಿಂತ ಮುಂಚೆಯೇ ಷಟ್ಪದಿಯ ಉಗಮವಿದ್ದರೂ, ಅದಕ್ಕೆ ಹೊಸ ಆಯಾಮ ಕೊಟ್ಟು ಕಾವ್ಯದಲ್ಲಿ ಷಟ್ಪದಿಯ ಪರಂಪರೆಯನ್ನೇ ಹಾಕಿಕೊಟ್ಟವ ರಾಘವಾಂಕ. ಮನುಜರ ಮೇಲೆ, ಸಾಯುವವರ ಮೇಲೆ ಬರೆಯುವುದು ವ್ಯರ್ಥವೆಂದು ತಿಳಿದುಕೊಂಡ ಹರಿಹರ, ರಾಘವಾಂಕನ ಗುರು ಮತ್ತು ಸೋದರ ಮಾವನಾದರೂ ರಾಘವಾಂಕ ಮನುಜರ ಮೇಲೆ ಕಾವ್ಯ ಬರೆದು ಖ್ಯಾತನಾದವ. ಸಂಪ್ರದಾಯದ ನೆಲೆಯಲ್ಲೇ ಬದುಕಿ ಜನಪರ ಒಲವು ಗಳಿಸಿಕೊಂಡವ. ಆದ್ದರಿಂದ ಹರಿಹರನಿಗಿಂತ ರಾಘವಾಂಕ ನಮಗೆ ಹತ್ತಿರವಾಗುತ್ತಾನೆ.

ಹನ್ನೆರಡನೇ ಶತಮಾನದ ವಚನಕಾರರ ಪ್ರಭಾವ ಹರಿಹರ-ರಾಘವಾಂಕರಿಬ್ಬರ ಮೇಲಾಗಿದ್ದರೂ, ಅವರ ರೀತಿ ಮಾತ್ರ ಬೇರೆ–ಬೇರೆ. ಇಹದಲ್ಲಿಯೇ ಪರವನ್ನು ಕಂಡ ಶರಣರು ಜನಸಾಮಾನ್ಯರ–ದೀನ ದಲಿತರ ಧ್ವನಿಯಾಗಿ ಮಾತನಾಡಿದರು. ಆದರೆ ಹರಿಹರ ಶರಣರ'ಪರ'ವೊಂದನ್ನೇ ಹಿಡಿದುಕೊಂಡು ಜಗ್ಗಾಡುತ್ತಾ ಸಾಮಾನ್ಯ ರಾಗಿ ಬದುಕಿದ ಶರಣರನ್ನು ಪುಷ್ಪಕ ವಿಮಾನಗಳಲ್ಲಿ ಹಾರಾಡಿಸುತ್ತಾ, ಕಾಯಕವೇ ಕೈಲಾಸವೆಂದು ಸಾರಿದ ಆ ವಚನಕಾರರನ್ನು ತನ್ನ ಕಾವ್ಯದಲ್ಲಿ ಮತ್ತೊಮ್ಮೆ ಹುಟ್ಟಿಸಿ ಆಕಾಶದಲ್ಲಿ ಕೈಲಾಸ ತೋರಿಸುತ್ತಾ ಶರಣರ ನಿಜವಾದ ತತ್ವಗಳಿಗೆ ಮಸಿ ಬಳಿದ. ವಾಸ್ತವತೆಯ ತಳಹದಿಯ ಮೇಲೆ ಬದುಕಿದ ಪ್ರಾಮಾಣಿಕ ವಚನಕಾರರ ಸುತ್ತ ಪವಾಡದ ಕತೆಗಳನ್ನೂ ಹೆಣೆದು ಅವರ ನಿಜವಾದ ಧೋರಣೆಗೆ ಮೋಸ ಮಾಡಿದ. ಭಕ್ತಿಯ ಹುಟ್ಟಿನಲ್ಲಿ, ಭಾವಾವೇಶದ ಅಮಲಿನಲ್ಲಿ ವಚನಕಾರರ ಒಟ್ಟು ಬದುಕನ್ನೇ ವಿಕೃತಗೊಳಿಸಿದ. ತಾನು ಮಾವ–ಗುರು ಎಂಬ ದಾಷ್ಟ್ರ್ಯದಿಂದ ಜನ ಪರ ನಿಲುವಿನ ಕವಿ ರಾಘವಾಂಕನ ಹಲ್ಲು ಮುರಿದು ತಾನು ಬಿದ್ದ ಕಂದಕದಲ್ಲೇ ಆತನನ್ನೂ ಎಳೆದುಕೊಂಡ. ಇಂತಹ ಜಡ ಸಂಪ್ರದಾಯದಲ್ಲಿದ್ದುಕೊಂಡೇ ರಾಘವಾಂಕ ಹರಿಶ್ಚಂದ್ರ ಕಾವ್ಯದಲ್ಲಿ ಜನಪರ ನಿಲುವಿನ ಹೊಸ ದಿಕ್ಕುಗಳನ್ನು ಸೂಚಿಸಿದ್ದು, ಶತಶತಮಾನಗಳಿಂದ ಶೋಷಣೆ ಮಾಡುತ್ತ ಬಂದ ವೈದಿಕಶಾಹಿ ಪ್ರತಿನಿಧಿ ವಿಶ್ವಾಮಿತ್ರನ ಸೊಕ್ಕು–ಅಹಂಕಾರವನ್ನು ಖಂಡಿಸಿದ್ದು ನಮಗಿಂದಿಗೂ ರೆಲೆವೆಂಟ್ [ಸೂಕ್ತ] ಎನಿಸುತ್ತದೆ. ಆದ್ದರಿಂದ ರಾಘವಾಂಕ ಗುರುವಾದ ಹರಿ ಹರನನ್ನು ಮೀರಿ ಬೆಳೆದು 'ಜನಪರ'ಕ್ಕೆ ಪ್ರಾಮುಖ್ಯತೆ ಕೊಡುವುದರ ಮೂಲಕ ವಚನಕಾರರನ್ನು ನೆನಪಿಗೆ ತರುತ್ತಾನೆ.

ರಾಘವಾಂಕನ ಹರಿಶ್ಚಂದ್ರ ಕಾವ್ಯ ಆತನ ಸಿದ್ಧರಾಮ ಪುರಾಣ, ಸೋಮನಾಥ ಚರಿತ್ರೆಗಳಿಗಿಂತ ಭಿನ್ನವಾದುದು. ಹರಿಶ್ಚಂದ್ರ ಸತ್ಯವ್ರತ-ಶಿವಭಕ್ತ ನಾಗಿದ್ದರೂ ಶಿವಸಂಕಲ್ಪದಿಂದಾಗಲಿ, ಯಾರದೋ ಪ್ರಸಾದದಿಂದಾಗಲಿ ಹುಟ್ಟಿದವ ನಲ್ಲ. ಬುರುಡೆ ಬಿಡುವ ಪವಾಡ ಪುರುಷನೂ ಅಲ್ಲ. ಅವನೊಬ್ಬ ಸಾಮಾನ್ಯ ಮನುಷ್ಯ. ಎರಡು ವೈದಿಕ ಕೋಣಗಳ ಹಣಾಹಣೆಯಲ್ಲಿ ನರಳುತ್ತಿರುವ ಜನ ಸಾಮಾನ್ಯರ ಶತಮಾನಗಳ ಪ್ರತಿನಿಧಿ.

ಹರಿಶ್ಚಂದ್ರ ಕಾವ್ಯದ ಸೊಗಸು ಅದರ ಕಾವ್ಯ ಪರಿಕರಗಳನ್ನು ಮೀರಿ ಬೆಳೆಯುತ್ತದೆ. ತಾನು ಬರೆಯುತ್ತಿರುವುದರ ಬಗೆಗೆ ಕವಿಗೆ ವಿಶ್ವಾಸವಿದೆ. ಚಲನ ಶೀಲಗುಣ ಬಹಳ ಮುಖ್ಯವಾದದು. 'ನಡೆವರೆಡಹದೆ ಕುಳಿತರೆಡಹುವರೆ' ಎಂಬ ಕವಿಯ ಮಾತು ಇಂದಿಗೂ ಅರ್ಥಪೂರ್ಣವೆನಿಸುತ್ತದೆ. ರನ್ನನ ಗದಾಯುದ್ಧದ ತರುವಾಯ ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ ಮಾತ್ರ ಸಂಭಾಷಣೆಗಳು ಅತ್ಯಂತ ಸಮರ್ಪಕವಾಗಿ ಮತ್ತು ನಾಟಕೀಯವಾಗಿ ಅರ್ಥವತ್ತಾಗಿ ವರ್ಣಿತವಾಗಿವೆ.

ವಶಿಷ್ಠ-ವಿಶ್ವಾಮಿತ್ರರ ಸಂವಾದದಲ್ಲಿ ಬರುವ ಅವರ ಹಠ, ಛಲ ಈರ್ಷೆಗಳಿಗೆ ಹರಿಶ್ಚಂದ್ರನಂತಹ ನಿಯತ್ತಿನ ಅರಸ ಮತ್ತು ಬಡಪಾಯಿ ಪ್ರಜೆಗಳೆಲ್ಲಾ ನೊಂದು ಪರಿತಪಿಸುವುದನ್ನು ದಟ್ಟವಾಗಿ ಚಿತ್ರಿಸುವುದರ ಮೂಲಕ ರಾಘವಾಂಕ ವೈದಿಕ ಶಾಹಿಯ ಶತಮಾನಗಳ ಸೋಗಲಾಡಿತನವನ್ನು ಬಯಲಿಗೆಳೆಯುತ್ತಾನೆ. ತಾನೊಬ್ಬ ದೊಡ್ಡ ರಾಜರ್ಷಿ ಎಂದು ಕೊಬ್ಬಿದ ವಿಶ್ವಾಮಿತ್ರ; ವಶಿಷ್ಠನೊಂದಿಗೆ ತಾನು ಆಡಿದ ಮಾತನ್ನು ಉಳಿಸಿಕೊಳ್ಳಲು ಕೇವಲ ತನ್ನ ಹಟವೊಂದನ್ನು ಸಾಧಿಸಲಿಕ್ಕೆ ಇಡೀ ರಾಜ್ಯದಲ್ಲೇ ಕ್ಷೋಭೆಯನ್ನುಂಟು ಮಾಡುತ್ತಾನೆ. ಪ್ರಜಾಕೋಟಿಗೆಲ್ಲಾ ನಿರಂತರ ಕಿರುಕುಳ ಕೊಡುತ್ತಾನೆ. ಮೃಗ ಸಮೂಹವೆಲ್ಲಾ ನಾಡಿನ ಬೆಳೆಯನ್ನೆಲ್ಲಾ ತಿನ್ನುವಂತೆ ಮಾಡಿ, ತೋಟದ ಗಡ್ಡೆ ಗೆಣಸು ಹಂದಿಗಳ ಪಾಲು ಮಾಡಿ ರಾಜ್ಯದಲ್ಲೇ ದಾರುಣ ಪರಿಸ್ಥಿತಿಯನ್ನು ತಂದೊಡ್ಡುತ್ತಾನೆ. ವಿಶ್ವಾಮಿತ್ರನ ಈರ್ಷೆ, ಮತ್ತು ನೊಂದು ಬೆಂದು ಪರಿತಪಿಸುತ್ತಿರುವ ಜನತೆ, ಇವೆಲ್ಲಾ ಸನ್ನಿವೇಶವನ್ನು ಕವಿ ರಾಘವಾಂಕ ಮನಕಲುಕುವಂತೆ ಚಿತ್ರಿಸಿದ್ದಾನೆ.

ಮೊಳೆವ ಬೀಜಗಳನ್ನೆಲ್ಲಾ ಕ್ರಿಮಿಕೀಟಗಳು; ಸಸಿಯನ್ನು ಎಳೆಹುಲ್ಲೆಗಳು ಸವಿದಂಟುಗಳನ್ನೆಲ್ಲಾ ಆಕಳುಗಳು, ಬೆಳೆಗಳನ್ನೆಲ್ಲಾ ಹೆಗ್ಗಣಗಳು ತಿಂದು "ಕಾವ್ಯ ಬಸವಂತರೆಲ್ಲರಂ ಸರ್ಪಸಂತತಿ ತಿಂದು, ತಾಳಪಟಂ ಮಾಡೆ ನಾಡೆಲ್ಲವಂ ಗೋಳಿಡಿಸುತಿರ್ದುದನೇವಣ್ಣಿಸುವೆನು" ಎನುವಲ್ಲಿ ರಾಘವಾಂಕ ವರ್ಣಿಸಿರುವ ಪ್ರಜಾ ಶೋಷಣೆಯ ಚಿತ್ರ ದಟ್ಟವಾಗಿ ಒಡಮೂಡಿದೆ. ಇಂತಹ ನೀಚ ಮುನಿಯ ಬಗೆಗೆ ನಾನು ಹೇಗೆ ವರ್ಣಿಸಲಿ ? ಏನು ವರ್ಣಿಸಲಿ? ಎಂದು ಕೇಳಿಕೊಳ್ಳುವ ಕವಿಯ ಪ್ರಶ್ನೆಗಳಲ್ಲಿ ನೋವನ್ನು ಮೀರಿದ ತುಡಿತವಿದೆ. ವಿಶ್ವಾಮಿತ್ರನಂತಹ ಮುನಿಗಳ ಮೇಲ್ವರ್ಗದವರ ಹುನ್ನಾರವನ್ನು ಬಯಲು ಮಾಡುವ ಪ್ರಯತ್ನವಿದೆ. ಅದಕ್ಕೇ ಆತ ಮುಂದಿನ ಪದ್ಯದಲ್ಲಿ ಪ್ರಜೆಗಳ ಮುಖಾಂತರ ವಿಶ್ವಾಮಿತ್ರನ ವಿಶ್ವಾಸ ಘಾತಕ ತನವನ್ನು ಹೊರ ಹಾಕಿಸಿದ್ದಾನೆ.

"ಪಾಪಿ ನಿಷ್ಕರುಣಿ ನಿರ್ದಯ ಮೂರ್ಖ ನೀಚ ನೀರಸನಿರ್ಗುಣ
ನೆರೆಕೊಂಡೆ ನಂಬಿ ನಚ್ಚಿರ್ದರೆಮ್ಮೊಡಲೊಳ
ಳ್ಳುರಿಯುತಿಪ್ಪಳು ಬೇಗೆಯ ಬೆಂಕಿಯುರಿ ನಿನ್ನ
ನಿರಿಯದೇ ಹೇಳು ವಿಶ್ವಾಸ್ವಮೃತ್ಯುವಾದೆ ವಿಶ್ವಾಮಿತ್ರ ಎನುತಿರ್ದರು"

ತಾನು ನಿಂತ ನೆಲವೇ ಕುಸಿಯುವ ಮತೀಯ ವ್ಯವಸ್ಥೆಯಲ್ಲೇ ಬೆಳೆದಾಗ್ಯೂ ರಾಘವಾಂಕ ಜನಪರ ನಿಲುವು ತಾಳುವುದರಿಂದ ಆತನ ಕೃತಿ ಇಂದಿಗೂ ಅಧ್ಯಯನ ಯೋಗ್ಯವಾಗುತ್ತದೆ.

ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಹೊಲತಿಯರ ಪ್ರಸಂಗ ನಮಗಿಂದು ತೀರಾ ಮುಖ್ಯವೆನಿಸುತ್ತದೆ. ರಾಘವಾಂಕ ಹೇಳುವಂತೆ ಇಲ್ಲಿನ ಹೊಲತಿಯರು ವಿಶ್ವಾಮಿತ್ರನ ಹೊಲೆತನದಿಂದ ಹುಟ್ಟಿದವರು. ಬದ್ಧ ದ್ವೇಷ- ಅತಿಕೋಪ ಇವೇ ಮುನಿಗೆಹೊಲೆ. ಇಂತಹ ಹೊಲೆತನದಿಂದಲೇಹೊಲತಿಯರು ಹುಟ್ಟಿದ್ದರು ಎಂಬುದು ರಾಘವಾಂಕನ ಅಭಿಪ್ರಾಯ. ಆದರೆ ಇದು ಅವಾಸ್ತವ. ಪ್ರಗತಿಪರ ವಿಚಾರದವ ರಾರೂ ಈ ಮಾತನ್ನು ಒಪ್ಪುವದಿಲ್ಲ. ಹಾಗಾದರೆ ಹೊಲತಿಯರು ಯಾರು? ವಿಶ್ವಾಮಿತ್ರನ ನಿಜವಾದ ಹೊಲತನವೆಂದರೆ ಯಾವುದು? ಈ ಎರಡು ಪ್ರಶ್ನೆ ಗಳಿಗೆ, ಕೂಲಂಕಷವಾಗಿ ವಿಚಾರಿಸಿಕೊಂಡಾಗ ನನಗನ್ನಿಸಿದ್ದು ಹೀಗೆ —

ದೇವೀಭಾಗವತದಲ್ಲಿ ವಿಶ್ವಾಮಿತ್ರ ನಿಂತ ಕಾಮಿತಳಾಗಿದ್ದ ಒಬ್ಬ ಸುಂದರಿಯ ಪ್ರಸ್ತಾಪ ಬರುತ್ತದೆ.

"ರಾಜನ್ ಯಾಂ ಬಾದತೇತ್ಯರ್ಥಂ ವಿಶ್ವಮಿತ್ರೋ ಮಹಾಮುನಿ;
ತಪಃ ಕರೋತಿ ಯದ್ಘೋರಂ ಮದರ್ಥಂ ಕಾಶಿಕೋವನೇ ||
ತೇನಾಹಂ ದುಃಖತಾ ರಾಜನ್ ವಿಷಯೇ ತವಸುವ್ರತಃ
ವಿದ್ಧಿಮಾಂ ಕಮನಾಂ ಶಾಂತಾಂ ಪೀಡಿತಾಂ ಮುನಿನಾಭೃಶಂ ||

ನಾವು ವಾಸ್ತವಿಕವಾಗಿ ವಿಚಾರಿಸಿದಾಗ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ವಿಶ್ವಾಮಿತ್ರ ಕಾಮಿಸಿದ ಹೆಂಗಸು ಹೊಲತಿ. ಆಕೆಗೆ ವಿಶ್ವಾಮಿತ್ರನಿಂದ ಹುಟ್ಟಿದ ಈ ಇಬ್ಬರು ಹೆಣ್ಣು ಮಕ್ಕಳೇ ಹೊಲತಿಯರಾಗಿರಬೇಕು. ಹೊಲತಿಯೊಬ್ಬಳನ್ನು ಕಾಮಿಸಿ ಅವಳಿಂದ ದೈಹಿಕ ಸುಖವನ್ನನುಭವಿಸಿದ ವಿಶ್ವಾಮಿತ್ರ ತನ್ನಿಂದ ಹುಟ್ಟಿದ ಹೊಲತಿ-ಮಕ್ಕಳನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸಿಕೊಂಡಿರಬೇಕು. ಮಂತ್ರಕೋಪದಿಂದ ಹುಟ್ಟುವುದು ಅಸಹಜ ಮತ್ತು ಅಸತ್ಯ. ಮಹಾಭಾರತದ ಪಾತ್ರಗಳ ಹುಟ್ಟನ್ನು ಎಸ್. ಎಲ್. ಭೈರಪ್ಪನವರು 'ಪರ್ವ'ದಲ್ಲಿ ವಿಶ್ಲೇಷಿಸಿರುವ ಹಿನ್ನೆಲೆಯಲ್ಲಿ ರಾಘವಾಂಕನ ಹೊಲತಿಯರನ್ನು ವಿಶ್ಲೇಷಿಸಿದಾಗ, ನಾನು ಊಹಿಸಿದ ಮೇಲಿನ ವಿಚಾರ ವಾಸ್ತವವೆನ್ನಿಸಬಹುದು.

ಈ ಬ್ರಾಹ್ಮಣರು ಮತ್ತು ಕ್ಷತ್ರಿಯರು, ಶೂದ್ರರನ್ನು ಹೇಗೆ ಮತ್ತು ಎಷ್ಟು ಜಾಣತನದಿಂದ ಶೋಷಣೆ ಮಾಡಿದರು ಎಂಬುದಕ್ಕೆ ವಿಶ್ವಾಮಿತ್ರ ಮಹಾಮುನಿಯ ಹಾದರದ ಚಿತ್ರವೊಂದೇ ಸಾಕು. ಜನರೆದುರಿಗೆ ದಲಿತರನ್ನು ಮುಟ್ಟುವುದು ಇವರಿಗೆ ಮಹಾಪಾಪ. ಆದರೆ ಕಳವಿನಿಂದ ಹಾದರ ಮಾಡಿ ಹೊಲತಿಯರ ದೈಹಿಕ ಸುಖ ಅನುಭವಿಸುವುದು ಪಾಪವಲ್ಲ. ವಿಶ್ವಾಮಿತ್ರ ಹಾರವರ ಪ್ರತಿನಿಧಿಯಾಗಿ ತನ್ನ ಮಹಾಪವಾಡಗಳನ್ನು ತೋರಿಸಿದ್ದಾನೆ. ದೇವಿಭಾಗವತದಲ್ಲಿ

ಹೇಳುವ ಹಾಗೆ ಒಬ್ಬ ಸುಂದರಿಯನ್ನು ಕಾಮಿಸಿದ. ಇದು ಶೋಷಣೆಯ ಒಂದು ಮುಖ. ಕಾಮಿಸಿದ ಸುಂದರಿಯಿಂದ ಹುಟ್ಟಿದ ಹೊಲತಿಯರನ್ನು ತನ್ನ ಈರ್ಷೆಗಾಗಿ ಉಪಯೋಗಿಸಿಕೊಂಡದ್ದು ಶೋಷಣೆಯ ಎರಡನೇ ಮುಖ.

ವಿಶ್ವಾಮಿತ್ರನಿಗೆ ನಿಜವಾಗಿಯೂ ಹೊಲತಿಯರನ್ನು ಹರಿಶ್ಚಂದ್ರನೊಡನೆ ವಿವಾಹ ಮಾಡಿಸುವ ಇಚ್ಛೆಯಿಲ್ಲ, ವಿಶ್ವಾಮಿತ್ರನಿಗೆ ದೈಹಿಕ ಸುಖ ಅನುಭವಿಸು ವಾಗ ಕಾಣದ ಹೊಲೆತನ, ಜನತೆಯ ಎದುರು ತಾನೊಬ್ಬ ರಾಜರ್ಷಿ ಎಂದು ಜಂಬಕೊಚ್ಚಿ ಕೊಳ್ಳುವ ಸಂದರ್ಭದಲ್ಲಿ ಕಾಣಿಸುತ್ತದೆ. ಇದೆಲ್ಲಾ ಹರಿಶ್ಚಂದ್ರನ ಹೆಸರಿಗೆ ಮಸಿ ಬಳಿಯುವ ಪ್ರಯತ್ನ. ವೈದಿಕ ಪರಂಪರೆಯಲ್ಲೇ ಬೆಳೆದು ಬಂದ ಹರಿಶ್ಚಂದ್ರ ಹೊಲತಿಯರನ್ನು ಮುಟ್ಟಲಾರೆನೆಂಬುದು ವಿಶ್ವಾಮಿತ್ರನಿಗ ಮೊದಲೇ ಗೊತ್ತಿದ್ದ ವಿಷಯ. ತನಗೆ ಗೊತ್ತಿದ್ದ ಇವೆಲ್ಲ ಅಂಶಗಳನ್ನು ತನ್ನ ಸ್ವಾರ್ಥ ಸಾಧನೆಗೆ ಉಪಯೋಗಿಸಿಕೊಂಡಾಗ್ಯೂ ಕೊನೆಗೂ ವಿಶ್ವಾಮಿತ್ರ ಸೋಲುತ್ತಾನೆ. ಇದು ರಾಘವಾಂಕನಲ್ಲಿ ನಾವು ಮೆಚ್ಚುವ ಅಂಶ. ಇದು ರಾಘವಾಂಕನ ಜನಪರ ನಿಲುವಿಗೆ ಹಿಡಿದ ಕನ್ನಡಿ.

ಈ ಕಾವ್ಯದಲ್ಲಿ ಬರುವ ಹೊಲತಿಯರ ಸ್ಥಿತಿ ಶತಮಾನಗಳಿಂದ ದಲಿತರಿಗಾದ ಅನ್ಯಾಯ – ಶೋಷಣೆಯನ್ನು ಬಿಚ್ಚಿ ತೋರಿಸುತ್ತದೆ. ಇಲ್ಲಿನ ಹೊಲತಿಯರು ವಿಶ್ವಾಮಿತ್ರನಂತಹ ಮುನಿಯಿಂದ ತಮಗೆ ತಿಳಿಯದಂತೆಯೇ ಶೋಷಿಸಲ್ಪಟ್ಟಿದ್ದರೆ, ವಶಿಷ್ಠನೆಂಬ ವೈದಿಕ ಸಾರಥಿಯ ಮಾತನ್ನು ಮೀರಿದ ಹರಿಶ್ಚಂದ್ರನಿಂದ ಅಪಮಾನಿ ತರಾಗಿದ್ದಾರೆ. ವಶಿಷ್ಠ–ವಿಶ್ವಾಮಿತ್ರರ ಈರ್ಷೆಯ ಹೀಟಿಗೆ ಹರಿಶ್ಚಂದ್ರ ಬಲಿಪಶುವಾ ದರೆ, ಇವರೆಲ್ಲರಿಂದಲೂ ಶೋಷಿಸಲ್ಪಟ್ಟವರು ಹೊಲತಿಯರು. ಕವಿಯ ಕನಿಕರವನ್ನು ಕೂಡ ಕಳೆದುಕೊಂಡ ದಾರುಣ ಸ್ಥಿತಿ ಅವರದು. ಕೊನೆಗೆ ಹರಿಶ್ಚಂದ್ರನಿಗೆ ಜಯ ಲಭಿಸುತ್ತದೆ. ಪರಿಹಾರ ದೊರಕುತ್ತದೆ. ಆದರೆ ಈ ಹೊಲತಿಯರಿಗೆ ? ಈ ಪ್ರಶ್ನೆ ಇಂದಿಗೂ ದಲಿತರ ಬಗೆಗೆ ಪ್ರಶ್ನೆಯಾಗಿಯೇ ಕಾಡುವುದನ್ನು ನೋಡಿದಾಗ ನಮ್ಮ ಇಂಡಿಯಾದಲ್ಲಿ ವೈದಿಕ ಸಂಸ್ಕೃತಿಯ ಪ್ರಭಾವ ಎಷ್ಟು ದಟ್ಟವಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಈ ಮೇಲ್ವರ್ಗದವರ ಈರ್ಷೆಗೆ ಹೀಟಿಗೆ ಮನರಂಜನೆಗೆ ಸರಕಾದ ದಲಿತರಿಗೆ ಕೊನೆಗೆ ಸಿಗುವುದು ಅವಹೇಳನ ಮತ್ತು ದುರಂತ.

ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಹರಿಶ್ಚಂದ್ರ ಮತ್ತು ಹೊಲತಿ ಯರ ಸಂಭಾಷಣೆಯನ್ನು ಗಮನಿಸಿದಾಗ, ಹೊಲತಿಯರ ಪ್ರಶ್ನೆಗಳಿಗೆ ಹರಿಶ್ಚಂದ್ರ ನಿಂದ ಸಮರ್ಪಕ ಉತ್ತರ ಸಿಗದೇ ಇದ್ದುದು ಸ್ಪಷ್ಟವಾಗುತ್ತದೆ. ಇದು ರಾಘವಾಂಕನ ಸೂಕ್ಷ್ಮದೃಷ್ಟಿಗೆ ಉದಾಹರಣೆ. ಹರಿಶ್ಚಂದ್ರ ಕಾವ್ಯವನ್ನು ವಿಮರ್ಶೆ ಮಾಡಿದ ನಮ್ಮ ಕೆಲ ವಿಮರ್ಶಕರು ಹರಿಶ್ಚಂದ್ರ ಹೊಲತಿಯರ ಸಂಭಾಷಣೆ ಬಹಳ

ಸುಂದರವಾಗಿದೆ-ಎಂದು ವರ್ಣಿಸಿದ್ದಾನೆಯೇ ವಿನಃ ಅದರ ಹಿಂದೆ ಅಡಗಿರುವ ಯಜಮಾನ ಸಂಸ್ಕೃತಿಯು ಉಸಿರು ಕಟ್ಟಿಸುವ ಯತ್ನವನ್ನು ಹೇಳಿಲ್ಲ.

ವಿಶ್ವಾಮಿತ್ರ ಏನು ಕೇಳಿದರೂ ಕೊಡಲು ಸಿದ್ಧನಾಗುವ ಹರಿಶ್ಚಂದ್ರ ಹೊಲತಿಯರ ನೃತ್ಯವನ್ನು ಮೆಚ್ಚಿ ಅವರು ಕೇಳಿದ ಮುತ್ತಿನ ಸತ್ತಿಗೆ ಕೊಡಲು ತಿರಸ್ಕರಿಸುತ್ತಾನೆ. ಉಚ್ಚವರ್ಗದ-ಪಂಡಿತ ಸಂಸ್ಕೃತಿಯು ಜನಸಾಮಾನ್ಯರಲ್ಲಿ ಮತ್ತು ರಾಜರಾದವರಲ್ಲಿ ಹೇಗೆ ಭಯಹುಟ್ಟಿಸುತ್ತದೆ ಎಂಬುದು ಈ ಸನ್ನಿವೇಶದಿಂದ ಸ್ಪಷ್ಟವಾಗುತ್ತದೆ. ಹೊಲತಿಯರು ಎಂದರೆ ಇಲ್ಲಿ ಹರಿಶ್ಚಂದ್ರನಿಗೂ ನಿರ್ಲಕ್ಷ್ಯ. ಇದೇ ಮುತ್ತಿನ ಸತ್ತಿಗೆ ವಿಶ್ವಾಮಿತ್ರ ಕೇಳಿದರೆ ಪಾದಕ್ಕೆ ಒಪ್ಪಿಸುತ್ತಾನೆ. ಅಲ್ಲಿಯ ಪ್ರಜೆಗಳೆಲ್ಲ ಕಷ್ಟಪಡಲಿಕ್ಕೆ, ತೊಂದರೆ ಅನುಭವಿಸಲಿಕ್ಕೆ ಮುಖ್ಯ ಕಾರಣವಾದದ್ದೆ ಉಚ್ಚವರ್ಗದವರ ಈರ್ಷೆಯಿಂದ. ವಿಶ್ವಾಮಿತ್ರನಿಗೆ ಕೊಡುವ ಗೌರವವನ್ನು ಹೊಲತಿಯರ ಮಾತಿಗೂ ಕೊಟ್ಟಿದ್ದರೆ ಹರಿಶ್ಚಂದ್ರ ಪರಿತಪಿಸಬೇಕಾದ ಕಾರಣವಿರುತ್ತಿರಲಿಲ್ಲ. ಮುತ್ತಿನ ಸತ್ತಿಗೆ ಕೊಡದೇ ಹೋದಾಗ ಹೊಲತಿಯರು ಹರಿಶ್ಚಂದ್ರನಿಗೆ ವಲ್ಲಭನಾಗು ಎಂದು ವಿನಂತಿಸಿಕೊಳ್ಳುತ್ತಾರೆ.

ಅಂದಿನ ಕಾಲದಲ್ಲಿ ಒಬ್ಬ ಅರಸನಿಗೆ ಹಲವಾರು ರಾಣಿಯರಿರುವುದು ಸಹಜ. ಮತ್ತು ಅದು ಅವರ ಅಂತಸ್ತನ್ನು ಹೆಚ್ಚಿಸುವ ವಿಷಯ. ಹೊಲತಿಯರ ಈ ಮಾತಿನಲ್ಲಿ ಯಾವ ಅಸಹಜತೆಯೂ ಇಲ್ಲ. 'ನಮಗೆ ವಲ್ಲಭನಾಗು' ಎಂದಾಕ್ಷಣ ಹರಿಶ್ಚಂದ್ರನ ಕೋಪ ನೆತ್ತಿಗೇರುತ್ತದೆ. ಆ ಕೋಪವನ್ನು ತಣ್ಣಗಾಗಿಸಲು ಹೊಲತಿಯರಿಂದ ಬರುವ ಮಾತುಗಳು ಬಹಳ ಮುಖ್ಯವಾದವುಗಳು. ನಾವು ಹೊಲತಿಯರಾದರೂ ನಮಗೆ ಗುಣರೂಪ-ಯೌವನವಿಲ್ಲವೆ? ಎಂದು ಪ್ರಶ್ನಿಸುತ್ತಾ, ಪವಿತ್ರ ಹಾಲು ಬರುವುದು ಕೆಚ್ಚಲ ಮಾಂಸದಿಂದ, ಸಿಹಿ ಜೇನು ಸಿಗುವುದು ನೊಣಗಳಿಂದ, ಸುವಾಸನೆಯ ಕಸ್ತೂರಿ ಮೃಗನಾಭಿಯಿಂದ ಬರುತ್ತದೆ. ಹಾಗಿರುವಾಗ ನಮ್ಮ ರೂಪ-ಯೌವನದ ಮುಂದೆ ಕುಲದ ಮಾತೇಕೆ? ಎನ್ನುತ್ತಾರೆ. ಮಾನವೀಯ ತುಡಿತವುಳ್ಳ ಯಾವ ಮನುಷ್ಯನೂ ಒಪ್ಪಬೇಕಾದ ಮಾತುಗಳಿವು. ಆದರೆ ಇದಕ್ಕೆ ಹರಿಶ್ಚಂದ್ರ ಕೊಡುವ ಉತ್ತರ ಇವರ ಪ್ರಶ್ನೆಗೆ ಸಂಬಂಧವೇ ಇಲ್ಲದ್ದು, ವೈದಿಕದ ಜೊಗಳೇತನದಿಂದ ಬಂದ ಬರೀ ಒಣ ತರ್ಕವಾಗಿದೆ.

ಬಚ್ಚಲು ನೀರು ತಿಳಿಯಾದರೆ ಸ್ನಾನಕ್ಕೆ ಬರಬಲ್ಲದೆ? ನಾಯಿಯ ಹಾಲು ಊಟಕ್ಕೆ ಬರಬಲ್ಲದೆ? ಸ್ಮಶಾನದಲ್ಲಿ ಬೆಳೆದ ಹೂ ಮುಡಿಯಲು ಯೋಗ್ಯವೆ? ಎಂದು ಹರಿಶ್ಚಂದ್ರನು ಸಮರ್ಥಿಸಿಕೊಳ್ಳುವ ಮಾತುಗಳು, ಹೊಲತಿಯರ ಪ್ರಶ್ನೆಗಳಿಗೆ ನಿಜವಾದ ಉತ್ತರಗಳಾಗಲಾರವು. ಬಚ್ಚಲ ನೀರು, ನಾಯಿಯ ಹಾಲು, ಸ್ಮಶಾನದ ಹೂವನ್ನು ಹೊಲತಿಯರಿಗೆ ಆತ ಹೋಲಿಸುವುದನ್ನು ನೋಡಿದರೆ, ಚಾತುರ್ವರ್ಣದ

ಅಮಾನವೀಯತೆಯಲ್ಲಿ ಆತ ಮುಳುಗಿ ಹೋಗಿರುವುದು ಸ್ಪಷ್ಟವಾಗುತ್ತದೆ. ನಾಯಿಗಳಿಗೂ – ಹೊಲತಿಯರಿಗೂ ಸಂಬಂಧವೇ ಇಲ್ಲ. ನಾಯಿ-ಪ್ರಾಣಿ, ಹೊಲತಿಯರು ಹರಿಶ್ಚಂದ್ರನಂತೆಯೇ ಮನುಷ್ಯರು, ಹೊಲತಿಯರನ್ನು ನಾಯಿಗೆ ಹೋಲಿಸಿದರೆ, ತಾನು ನಾಯಿಯೇ ಆಗುತ್ತೇನಲ್ಲಾ ಎಂಬ ಅರಿವು ಆತನಿಗಿರಲಿಲ್ಲ. ಇದಕ್ಕೆ ಪ್ರಮುಖ ಕಾರಣ ಆತ ದಟ್ಟವಾಗಿ ನಂಬಿರುವ ವೈದಿಕ ತತ್ವಗಳ ಗೊಡ್ಡು ಸಂಸ್ಕೃತಿ. ಇಷ್ಟಕ್ಕೆ ಹೊಲತಿಯರು ಬಿಡುವುದಿಲ್ಲ. ಹೊಲೆ ಶಬ್ದವನ್ನು, ಆತ ಪದೇ ಪದೇ ಬಳಸಿದಾಗ ಅವರು ಸ್ಪಷ್ಟವಾಗಿ ಕೇಳುತ್ತಾರೆ.

ಹಾಡನ್ನು ಕೇಳಿದ ಕಿವಿಗೆ ಹೊಲೆಯಿಲ್ಲ, ಮಾತಾಡಿ ಹೊಗಳಿದ ಬಾಯಿಗೆ ಹೊಲೆಯಿಲ್ಲ, ರೂಪ ನೋಡಿದ ಕಣ್ಣಿಗೆ ಹೊಲೆಯಿಲ್ಲ, ಸುಗಂಧವ ವಾಸಿಸಿದ ಮೂಗಿಗೆ ಹೊಲೆಯಿಲ್ಲ. ಕೇವಲ ಮುಟ್ಟುವುದರಿಂದ ಹೊಲೆಯಾಗುತ್ತದೆಯೇ ? ಪಂಚೇಂದ್ರಿಯಗಳಲ್ಲಿ ನಾಲ್ಕು ಅಧವು ಒಂದು ಅಧಿಕವೇ ಎನ್ನುವ ಅವರ ಮಾತು ಗಳಲ್ಲಿ ದಲಿತರ ನೋವಿನ ಒಟ್ಟು ಆಶಯವಿದೆ, ನೇರಧ್ವನಿಯಿದೆ, ನಿರ್ಭಿಡೆಯ ಸತ್ಯ ವಿದೆ.

ಈ ಮಾತಿಗೂ ಹರಿಶ್ಚಂದ್ರನಲ್ಲಿ ಉತ್ತರವಿಲ್ಲ. ಕೆಂಡವನ್ನು ಮುಟ್ಟಿದಾಗ ಮಾತ್ರ ಸುಡುತ್ತದೆ. ವಾಸಿಸಿದರೆ, ನೋಡಿದರೆ ಸುಡುವುದಿಲ್ಲ ಎನ್ನುವ ಆತನ ಮಾತಿನಲ್ಲಿ ತಪ್ಪಿಸಿಕೊಳ್ಳುವ ನರಿಬುದ್ಧಿ ಇದೆ. ಹೊಲತಿಯರು ಕೆಂಡವಲ್ಲ. ಅವರು ತನ್ನ ಹಾಗೇ ಮನುಷ್ಯರು ಎಂದು ಆತನಿಗೆ ಹೊಳೆಯುವುದು ಸಾಧ್ಯವೇ ಇಲ್ಲಾ. ನಿಮಗಾಗಿ ನನ್ನ ಕುಲ ಕೆಡಿಸಿಕೊಳ್ಳಲಾರೆ ಎಂದು ಸ್ಪಷ್ಟಪಡಿಸುತ್ತಾನೆ.

'ಪಾಪಿಗಳ ಪಾಪಂ ತೊಳೆವ ಗಂಗೆಗೆ ಪಾಪ ಲೇಪವುಂಟಾಯ್ತೆ ಹೇಳರಸ' ಎಂದು ಕೇಳುವ ಹೊಲತಿ ಯಾರ ಮಾತಿನಲ್ಲಿ ವಿಶಾಲತೆಯಿದೆ, ತ್ಯಾಗದ ಕೊಸೆಯ ಹರಿತವಿದೆ. ತಾವು ಪಾಪಿಗಳು ಎಂಬುದನ್ನು ಅನಿವಾರ್ಯವಾಗಿ ಒಪ್ಪಿಕೊಂಡು ಹರಿಶ್ಚಂದ್ರನಿಗೆ ಗಂಗೆಯ ಪವಿತ್ರ ಸ್ಥಾನವನ್ನು ಕಲ್ಪಿಸಿಕೊಡುತ್ತಾರೆ. ಬ್ರಾಹ್ಮಣರ ನೀಚ ಸಂಸ್ಕೃತಿಯಲ್ಲಿ ಬೆಳೆದ ಹರಿಶ್ಚಂದ್ರನಿಗೆ ಹೊಲತಿಯರ ಅಂತರಂಗದ ಕೂಗು ಕೇಳಿಸದಂತಾಗುತ್ತದೆ. ಅವರ ಮನದ ತುಡಿತ, ಸಮಾನತೆಯ ಅರ್ಥ ಆತನಲ್ಲಿ ನಿರರ್ಥಕವಾಗುತ್ತದೆ. ಕೊನೆಗೆ ಅವರು ಬಿಡದೆ ಹಟಮಾಡಿದಾಗ ಹಲ್ಲು ಮುರಿಯು ವಂತೆ, ಬಾಯಿ ಹರಿದು ರಕ್ತ ಸೋರುವಂತೆ ಚಾಟಿಯಿಂದ ಹೊಡೆಯುತ್ತಾನೆ. ಮಾನವೀಯತೆಗೆ ಹರಿಶ್ಚಂದ್ರನಿಂದ ಸಿಗುವ ಉತ್ತರವಿದು.

ಇದರಲ್ಲಿ ಹರಿಶ್ಚಂದ್ರನ ಬಗೆಗೆ ಓದುಗರಿಗೆ ಕೊಂಚವೂ ಸಿಟ್ಟು ಬರುವುದಿಲ್ಲ. ಕಾರಣ ಈ ಹೊಲತಿಯರು ವಿಶ್ವಾಮಿತ್ರನಿಂದ ಕಳಿಸಲ್ಪಟ್ಟವರು. ವಿಶ್ವಾಮಿತ್ರನ

ವೈದಿಕ ಬುದ್ಧಿಯೇ ಹರಿಶ್ಚಂದ್ರನಲ್ಲೂ ಕೆಲಸ ಮಾಡಿದೆ. ಹೀಗಾಗಿ ಹೊಲತಿಯರಿಗೆ ಇತ್ತ ವಿಶ್ವಾಮಿತ್ರನೂ ಇಲ್ಲ, ಅತ್ತ ಹರಿಶ್ಚಂದ್ರನೂ ಇಲ್ಲ. ಎಲ್ಲರಿಂದಲೂ, ಎಲ್ಲದರಿಂದಲೂ ವಂಚಿತರಾದರವರು. ಈ ಚಿತ್ರಣವನ್ನು ರಾಘವಾಂಕ ತನ್ನ ಕಾವ್ಯದಲ್ಲಿ ಮನಮುಟ್ಟುವಂತೆ ಬಿಂಬಿಸಿದ್ದಾನೆ. ಹೊಲತಿಯರಿಂದ ಆತ ಆಡಿಸುವ ಪ್ರತಿಮಾತಿನಲ್ಲೂ, ಶತಮಾನಗಳ ದಟ್ಟ – ನೋವು ಅಡಗಿದೆ ಕಡೆಗಣಿಸಲ್ಪಟ್ಟ ವರ ಧೈರ್ಯವಿದೆ. ಪಶುಪ್ರಾಣಿಗಳಂತೆ ಬದುಕಿದ ದಲಿತರ ಧ್ವನಿಯಿದೆ. ತನ್ನ ವಿಷದ ನಾಲಿಗೆಯನ್ನು ಭಯಂಕರವಾಗಿ ಚಾಚುತ್ತ ಬಂದಿರುವ ವೈದಿಕ ಸಂಸ್ಕೃತಿಯ ಹಾದರದ ಸಮುದ್ರದಲ್ಲಿ ಹೊಲತಿಯರಂತವರು ಪ್ರತಿಭಟಿಸಿದ್ದು ಸಮಾನತೆಗೆ ಹಾತೊರೆದದ್ದು ಕೇವಲ ಮನರಂಜನೆಯಾಗಿ ಇತಿಹಾಸದುದ್ದಕ್ಕೂ ಬಿದ್ದುಕೊಂಡಿದೆ. ಪ್ರತಿಯೊಂದನ್ನು ಮಾನವೀಯತೆಯಿಂದ – ವೈಚಾರಿಕತೆಯಿಂದ ನೋಡಿದಾಗ ಮಾತ್ರ ನಿಜವಾದ ಸೋಗಲಾಡಿತನ ಹೊರಗೆ ಬರುತ್ತದೆ. ಶತಮಾನಗಳ ಶೋಷಣೆಯ ಸಂಕೇತವಾಗಿ ಹೊಲತಿಯರು ಹರಿಶ್ಚಂದ್ರ ಕಾವ್ಯದಲ್ಲಿ ಸ್ಪಷ್ಟವಾಗಿ ಗುರುತಿಸಲ್ಪಟ್ಟಿದ್ದಾರೆ. ಇಂತಹ ಹಳೆಯ ಕಾವ್ಯವನ್ನು ದೀರ್ಘವಾಗಿ ಆಲೋಚಿಸು ವುದರ ಮೂಲಕ ಹೊಸ ದಿಕ್ಕುಗಳನ್ನು ಕಂಡುಕೊಳ್ಳಬೇಕಾಗಿದೆ.

ರತ್ನಾಕರನ ಹಾಡುಗಳು–ದಾಸರ ಕೀರ್ತನೆಗಳು

● ಎಸ್. ಪಿ. ಪಾಟೀಲ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸ ಸಾಹಿತ್ಯವು ಮಹತ್ವಪೂರ್ಣವಾದುದು. ವಚನ ಸಾಹಿತ್ಯದಂತೆಯೇ ಜನಮನದಲ್ಲಿ ಹಚ್ಚುಹಸುರಾಗಿ ಇಂದಿಗೂ ಉಳಿದು ಬಂದಿದೆ. ದಾಸರಾಗಲಿ, ಶರಣರಾಗಲಿ ಕೇವಲ ಸಾಹಿತ್ಯಿಕ ಉದ್ದೇಶ ವಿರಿಸಿಕೊಂಡು ಈ ರಚನೆಗಳನ್ನು ಮಾಡಿದವರಲ್ಲ. ಸಮಾಜದ ಸಮೂಲ ಪರಿವರ್ತನೆಯ ಉದ್ದೇಶವನ್ನಿರಿಸಿಕೊಂಡು ಸಾಮಾಜಿಕ ಕ್ರಾಂತಿಯ ಮೂಲಕ ಜನ ಸಾಮಾನ್ಯರಿಗೆ ಸರಿಯಾದ ಮಾರ್ಗವನ್ನು ತೋರುವ ಗುರಿಯನ್ನಿರಿಸಿಕೊಂಡವರು ಅವರು. ಭಕ್ತಿ, ಜ್ಞಾನ, ವೈರಾಗ್ಯಗಳ ಮುಪ್ಪುರಿಯಾದ ಕೀರ್ತನೆಗಳಲ್ಲಿ ಭಕ್ತಿಯೇ ಪ್ರಧಾನ ಅಂಶವಾಗಿದ್ದರೂ ನಾಮಸ್ಮರಣೆ, ಸಮಾಜ ವಿಡಂಬನೆ, ಕರ್ಮ, ಯೋಗಗಳೂ ಅದರಲ್ಲಿ ಸಮಾನ ಅವಕಾಶ ಪಡೆದಿವೆ.

೧೨ನೆಯ ಶತಮಾನದ ಶಿವಶರಣರ ಕ್ರಾಂತಿ ಸಾಮಾಜಿಕ, ಧಾರ್ಮಿಕ ಪರಿಸರವನ್ನು ವ್ಯಾಪಿಸಿತಲ್ಲದೆ ವಚನ ರಚನೆಯ ಮೂಲಕ ಸಾಹಿತ್ಯಿಕ ಕ್ರಾಂತಿಗೂ ನಾಂದಿ ಹಾಡಿತು. ಅದರಿಂದಾಗಿ ವಚನಗಳಂತೆಯೇ ಹಾಡುಗಳು, ಭಾವಪ್ರೇರಿತ ಭಕ್ತಿಯ ವ್ಯಕ್ತಿಸಿಷ್ಟ ನಿದರ್ಶನಗಳಾದವು. ೧೨ನೆಯ ಶತಮಾನದಂತೆಯೇ ೧೬ನೆಯ ಶತಮಾನವು ಕನ್ನಡ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ ಚರಿತ್ರೆಯಲ್ಲಿ ತುಂಬ ಮಹತ್ವಪೂರ್ಣ ಕಾಲಖಂಡ. ಧರ್ಮಪ್ರಸಾರ ಹಾಗೂ ಸಮಾಜಸುಧಾರಣೆಗೆ ಪರಿಣಾಮಕಾರಿ ಮಾಧ್ಯಮವಾಗಿ ಕೀರ್ತನೆಯನ್ನು ಹರಿದಾಸರು ಬಳಸಿದುದಲ್ಲದೆ ಅದು ಜನಮನದಲ್ಲಿ ನೆಲೆಯೂರುವಂತೆ ಮಾಡುವಲ್ಲಿ ಯಶಸ್ವಿಯೂ ಆದರು.

ಭಕ್ತಿಯ ಜನಪ್ರಿಯ ವಿಷಯದಿಂದಾಗಿ, ಜನಸಾಮಾನ್ಯರಿಗೂ ಅರ್ಥವಾಗುವ ಭಾಷೆ ಹೋಲಿಕೆಗಳ ಮೂಲಕವಾಗಿಯೂ ವಚನಸಾಹಿತ್ಯ, ಕೀರ್ತನೆಗಳು ವಿಶೇಷ ಪರಿಣಾಮ ಬೀರುವಲ್ಲಿಸಾರ್ಥಕತೆ ಪಡೆಯುವದು ಸಾಧ್ಯವಾಯಿತು. ಜನ ಸಾಮಾನ್ಯರ ಮಧ್ಯೆ ಬದುಕಿ ಅವರ ಮನದ ಮಿಡಿತವನ್ನು ಅಂತ ಅನುಭಾವಿಗಳು ಅವರ ಹೃದಯವನ್ನು ತಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಕೀರ್ತನೆಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಶಿವಶರಣರ, ದಾಸರ ಕ್ರಾಂತದೃಷ್ಟಿ ಸ್ಪಷ್ಟವಾಗಿ ಕಾಣುವಂತಿದೆ, ಅದರಂತೆ ಕನ್ನಡ ಸಾಹಿತ್ಯಕ್ಕೆ

ನಾಂದಿಯನ್ನು ಹಾಡಿ, ಪ್ರೌಢಕಾವ್ಯಗಳನ್ನು ಕನ್ನಡ ಭಾಷೆಯಲ್ಲಿ ಬರೆಯುವಲ್ಲಿ ಮೊದಲಿಗರಾದ ಜೈನಕವಿಗಳ ಈ ಕ್ಷೇತ್ರದ ಕಾಣಿಕೆ ಮೇಲು ನೋಟಕ್ಕೆ ತೀರ ನಿರಾಶೆಯನ್ನುಂಟು ಮಾಡುತ್ತದೆ. ಪ್ರೌಢ ಕಾವ್ಯರಚನೆಗೆ ಅಗತ್ಯವಾದ, ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಹೆಚ್ಚಿಸುವ ಮೂಲಕ ಅವರು ನೀಡಿದ ಕಾಣಿಕೆ, ಹಾಕಿಕೊಟ್ಟ ಮಾರ್ಗ ಅನನ್ಯವಾದುದು. ಅದರ ಫಲವಾಗಿ ಪ್ರೌಢ ಕಾವ್ಯ ವಸ್ತುಗಳನ್ನು ಆಯ್ದುಕೊಂಡು ಅವನ್ನು ಅಷ್ಟೇ ಗಂಭೀರವಾಗಿ ಮುನ್ನಡೆಸುವಲ್ಲಿ ಅವರು ತೃಪ್ತಿಪಡುವಂತಾಯಿತು.

೧೨ನೆಯ ಶತಮಾನದ ಶಿವಶರಣರ ಕ್ರಾಂತಿಯ ಫಲವಾಗಿ, ಜನಸಾಮಾನ್ಯರ ಭಾಷೆಗೆ ಮನ್ನಣೆ ನೀಡುವ ವಚನಸಾಹಿತ್ಯದ ಒಲವು ಮುಂದಿನ ಅನೇಕ ಜೈನಕವಿಗಳ ವಸ್ತುವಿನ ಆಯ್ಕೆ, ನಿರೂಪಣಾ ಕ್ರಮವನ್ನು ನಿರ್ಧರಿಸುವಲ್ಲಿ ಕಾರಣವಾಯಿತೆಂಬುದನ್ನು ಅಲ್ಲಗಳೆಯಲಿಕ್ಕಾಗದು. ಅದರ ಫಲವಾಗಿ ಚಂಪೂವಿನ ಮೋಹ ಕಡಿಮೆಯಾಗುತ್ತ ಷಟ್ಪದಿ, ಸಾಂಗತ್ಯಗಳಲ್ಲಿ ಕೃತಿರಚನೆಗೆ ಅವರು ತೊಡಗುವಂತಾಯಿತು. ಭಾಷೆಯ ವಿಷಯದಲ್ಲೂ ಜನಸಮ್ಮುಖ ದೃಷ್ಟಿ ಬಲವಾಗುತ್ತ ಸಾಗಿದುದನ್ನು ಕಾಣುತ್ತೇವೆ. "೧೬ನೆಯ ಶತಮಾನದಲ್ಲಿ ಮಾತ್ರ ಜೈನಕವಿಗಳು ದೇಸಿಯ ದಿಕ್ಕಿನತ್ತ ಬೀಸುವ ಗಾಳಿಯನ್ನರಿತು ತಮ್ಮ ಸಾಹಿತ್ಯ ರಥವನ್ನು ಅತ್ತ ಸಾಗಿಸಿದರು. ತೀರ್ಥಂಕರರ ಚರಿತೆಗಳು ಹಾಗೂ ಇತರ ಜೈನ ಸಾಂಪ್ರದಾಯಿಕ ವಿಷಯಗಳು ಜನಸುಲಭವಾದ ಷಟ್ಪದಿ ಸಾಂಗತ್ಯಗಳಲ್ಲಿ ನೆಲೆನಿಂತವು.......[1] ವೀರಶೈವ ಕವಿಗಳು ಷಟ್ಪದಿ-ರಗಳೆ ಮೊದಲಾದ ದೇಸೀ ಛಂದಸ್ಸುಗಳಲ್ಲಿ ಕೃತಿರಚನೆಯ ಮೂಲಕ ಧರ್ಮ ಪ್ರಸಾರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದುದು ಹಾಗೂ ದಾಸರು ಸಹ ಷಟ್ಪದಿ ಹಾಗೂ ಹಾಡುಗಳ ಮೂಲಕ ಜನಸಾಮಾನ್ಯರಿಗೆ ತೀರ ಸಮೀಪದವರಾಗಿ ಪ್ರಭಾವ ಬೀರುತ್ತಿದ್ದುದನ್ನು ಜೈನಕವಿಗಳು ಮನಗಂಡರಲ್ಲದೆ, ತಾವೂ ಬದಲಾದ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳಲು ನಿರ್ಧರಿಸಿದರೆಂದು ತೋರುತ್ತದೆ. ಆಗ ಬಹುಶಃ ಶಿವಶರಣರ ಹಾಗೂ ದಾಸರ ರಚನೆಗಳಿಂದ ಸಾಹಿತ್ಯಿಕ ಪ್ರೇರಣೆ ಹೊಂದಿ ತಮ್ಮ ಕೃತಿಗಳನ್ನು ರಚಿಸಲು ತೊಡಗಿರುವ ಸಾಧ್ಯತೆಯಿದೆ.

ತೀರ್ಥಂಕರ ಪುರಾಣಗಳಂತೆಯೇ ಇತರ ಮಹಾಪುರುಷರ ಚರಿತೆಗಳನ್ನು ಸಹ ಷಟ್ಪದಿಯಲ್ಲಿ ರಚಿಸಲು ಜೈನಕವಿಗಳು ಆರಂಭಿಸಿದರೂ ಹಾಡು-ಕೀರ್ತನೆಗಳಂತಹ ರಚನೆಗಳತ್ತ ಅಷ್ಟಾಗಿ ಗಮನಹರಿಸಲಿಲ್ಲವೆಂದೇ ತೋರುತ್ತದೆ. ಕಾವ್ಯ ವಸ್ತು ಹಾಗೂ ನಿರೂಪಣಾಕ್ರಮದಲ್ಲಿ ಸಾಂಪ್ರದಾಯಿಕ ಧೋರಣೆಯನ್ನು ಸಂಪೂರ್ಣವಾಗಿ ತೊರೆಯುವುದು ಅವರಿಂದ ಸಾಧ್ಯವಾಗಲಿಲ್ಲ ಇದರ ಫಲವಾಗಿ ಶರಣರ_

1. ಡಾ. ರಂ. ಶ್ರೀ ಮುಗಳಿ: ಕನ್ನಡ ಸಾಹಿತ್ಯ ಚರಿತೆ (1971), ಪು. 228

ದಾಸರ ಹಾಡು–ಕೀರ್ತನೆಗಳ ಪ್ರಮಾಣದಲ್ಲಿ ಜೈನಕವಿಗಳಿಂದ ಹಾಡು–ಕೀರ್ತನೆಗಳು ವಿಶೇಷವಾಗಿ ರಚಿತವಾಗದಿರುವುದು ಕಂಡು ಬರುತ್ತದೆ. ಆದರೆ ಈ ಸಾಹಿತ್ಯ ಪ್ರಕಾರದಲ್ಲಿಯೂ ಜೈನಕವಿಗಳನ್ನು ಉಪೇಕ್ಷಿಸಲಿಕ್ಕಾಗದ ಮಟ್ಟದಲ್ಲಿ ರತ್ನಕರ ವರ್ಣಿಯ (೧೫೫೭) ಹಾಡುಗಳು ಲಭ್ಯವಾಗಿರುವುದು ಗಮನಾರ್ಹ ಅಂಶವಾಗಿದೆ.

ತ್ಯಾಗ–ಭೋಗಗಳೆರಡರ ಅತ್ಯುನ್ನತ ಮಟ್ಟವನ್ನು, ಅವುಗಳ ಸಮನ್ವಯವನ್ನು, ಜೀವನ ರಸಿಕತೆಯ ದರ್ಶನವನ್ನು ನೀಡಿದ ಕವಿ ರತ್ನಾಕರವರ್ಣಿ, ಕನ್ನಡ ಮಹಾಕವಿಗಳಲ್ಲಿ ಒಬ್ಬನೆಂಬ ಮನ್ನಣೆಯನ್ನು ಪಡೆದ. ಅವನು ಭರತೇಶ ವೈಭವದ ಕರ್ತೃ. ತ್ರಿಲೋಕಶತಕ, ರತ್ನಾಕರಶತಕ, “ಅಪರಾಜಿತ ಶತಕ” ಇವುಗಳೊಂದಿಗೆ ನೂರಾರು ಕೀರ್ತನೆಗಳನ್ನೂ ಅವನು ರಚಿಸಿದ್ದು ಅವು ‘ಅಣ್ಣನ ಹಾಡುಗಳು’[2] ‘ರತ್ನಾಕರನ ಹಾಡುಗಳು’ ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಇತ್ತೀಚೆ ಪ್ರಕಟವಾದ ಶ್ರೀ ಹಂಪ ನಾಗರಾಜಯ್ಯ ಅವರು ಸಂಪಾದಿಸಿದ ರತ್ನಾಕರನ ಹಾಡುಗಳು ಅಧಿಕ ಸಂಖ್ಯೆಯ ಅಧಿಕೃತ ಹಾಡುಗಳನ್ನೊಳಗೊಂಡ ಕೃತಿಯಾಗಿದ್ದು, ರತ್ನಾಕರನ ಹಾಡುಗಳ ಅಧ್ಯಯನಕ್ಕೆ ಉಪಯುಕ್ತ ಕೃತಿಯಾಗಿ ಪರಿಣಮಿಸಿದೆ.

‘ಭರತೇಶ ವೈಭವ’ವು ಭರತಚಕ್ರಿಯ ಭೋಗದ ವೈಭವವನ್ನು ಚಿತ್ರಿಸುವಂತೆಯೇ ಅವನ ಅಂತರಂಗದ ವೈಭವವನ್ನೂ ಚಿತ್ರಿಸುತ್ತದೆ. ಭರತನನ್ನು ಕಾವ್ಯದ ನಾಯಕನನ್ನಾಗಿ ಮಾಡಿ ಬೃಹತ್‌ಗಾತ್ರದ ಕಾವ್ಯವನ್ನು ಸಾಂಗತ್ಯದಲ್ಲಿ ರಚಿಸುವಲ್ಲಿ ರತ್ನಾಕರ ಅನೇಕ ಸಂದರ್ಭಗಳಲ್ಲಿ ತನ್ನ ಸ್ವಂತಿಕೆಯನ್ನು ತೋರಿದ್ದಾನೆ. ಮುಂದಿನ ಕಾವ್ಯಗಳಿಗಿಂತ, ಪರಂಪರೆಯ ಕಥಾರಚನೆಗಿಂತ ಭಿನ್ನವಾದ ಅಂಶಗಳನ್ನು ಕಾವ್ಯದಲ್ಲಿ ಅಳವಡಿಸುವ ಮೂಲಕ ತನ್ನ ಸ್ವತಂತ್ರ ಮನೋವೃತ್ತಿಯನ್ನೂ, ಪ್ರಗತಿಪರ ದೃಷ್ಟಿಯನ್ನೂ ತೋರ್ಪಡಿಸಿದ್ದಾನೆ. ಅವನ ಇನ್ನಿತರ ಶತಕ, ಹಾಡುಗಳ ಹಿನ್ನೆಲೆಯಲ್ಲಿಯೂ ಈ ಅಂಶ ತೀರ ಮಹತ್ವದ್ದಾಗಿ ಕಂಡುಬರುತ್ತದೆ.

ರತ್ನಾಕರವರ್ಣಿ ಜೈನಧರ್ಮವನ್ನು ತೊರೆದು ವೀರಶೈವ ಧರ್ಮವನ್ನು ಸ್ವೀಕರಿಸಿದುದಾಗಿಯೂ ಮತ್ತೆ ಜೈನಧರ್ಮಕ್ಕೆ ಹಿಂತಿರುಗಿದನೆಂದು ಹೇಳಲಾಗುತ್ತಿದೆ. ಅವನ ಈ ಮತಾಂತರದ ಸಮಸ್ಯೆಯನ್ನು ಅಧಿಕೃತವಾಗಿ ದೃಢಪಡಿಸಲು ಬಾಹ್ಯಪುರಾವೆಗಳ ಅಭಾವವಿದ್ದರೂ ಅವನ ಕೃತಿಗಳ ಸ್ವರೂಪ, ಅಂತರ್ಗತ ಉಲ್ಲೇಖಗಳು ಈ ಸಮಸ್ಯೆಯ ಮೇಲೆ ಬೆಳಕುಬೀರುವಲ್ಲಿ ನೆರವಾಗುವಂತಿವೆ. ವೀರಶೈವ ಕವಿಗಳ ಮಾದರಿಯಲ್ಲಿ ಶತಕತ್ರಯಗಳನ್ನು ರಚಿಸಿರುವುದಲ್ಲದೆ ಅವುಗಳಲ್ಲಿ ತನ್ನ ಮಾನಸಿಕ ವ್ಯಗ್ರತೆಯನ್ನೂ ಉಗ್ರತೆಯನ್ನೂ ವ್ಯಕ್ತಪಡಿಸಿದ್ದಾನೆ.

---

2. ರತ್ನಾಕರನ ಹಾಡುಗಳು : ಸಂ : ಹಂಪ ನಾಗರಾಜಯ್ಯ: 1979

ಇದರಿಂದಾಗಿ ವೀರಶೈವ ಕವಿಗಳ ಶತಕಗಳನ್ನು ಅವನು ನೋಡಿರುವ ಸಾಧ್ಯತೆ ಅಧಿಕವಾಗಿ ಕಂಡುಬರುತ್ತದೆ. ಅದರಂತೆ ಶರಣರ ಹಾಡುಗಳನ್ನು ದಾಸರ ಕೀರ್ತನೆಗಳನ್ನೂ ಅವನು ಮುಕ್ತಮನಸ್ಸಿನಿಂದ ನೋಡಿದವನಾಗಿರಬೇಕು. ಅವನ ಮೇಲೆ ವಚನಕಾರರ ಪ್ರಭಾವ ನಿಚ್ಚಳವಾಗಿ ಗಾಢವಾಗಿ ಕಂಡುಬರುವ ಇಂಥ ಎರಡು ಹಾಡುಗಳ ಮೇಲೆ ಶ್ರೀ ಹಂಪ. ನಾಗರಾಜಯ್ಯ ಅವರು ವಿಶೇಷ ಬೆಳಕು ಬೀರಿದ್ದಾರೆ.[1] ಒಟ್ಟಿನಲ್ಲಿ ರತ್ನಾಕರವರ್ಣಿ ಜೈನಕವಿಯಾಗಿ ಪರಂಪರೆಯನ್ನು ಮನ್ನಿಸುವ ರೀತಿಯಲ್ಲಿ 'ಭರತೇಶ ವೈಭವ'ವನ್ನು ರಚಿಸಿದರೂ ಪರಂಪರೆಯನ್ನು ಮೀರಿರುವ ಅಂಶಗಳನ್ನು ಅಲ್ಲಿ ಕಾಣುತ್ತೇವೆ. ಅದರಂತೆ ಸ್ವತಂತ್ರಮನೋಧರ್ಮದ ಅವನು ಶರಣರ ದಾಸರ ಹಾಡುಗಳನ್ನು ಗಮನಿಸಿ, ಅದರ ಮೂಲಕ ಜನಸಮುದಾಯದ ಮೇಲೆ ಪ್ರಭಾವ-ಪರಿಣಾಮ ಇರುವ ಸಂದರ್ಭದಲ್ಲಿ ಅದನ್ನು ಅನುಸರಿಸಬೇಕೆಂಬ ಮುಕ್ತಮನಸ್ಸನ್ನು ತೋರಿರುವುದು ವ್ಯಕ್ತವಾಗುತ್ತದೆ.

ರತ್ನಾಕರನ ಹಾಡುಗಳನ್ನು ದಾಸರ ಕೀರ್ತನೆಗಳೊಂದಿಗೆ ಹೋಲಿಸಿ ನೋಡುವ ಪೂರ್ವದಲ್ಲಿ ಅವುಗಳಲ್ಲಿ ಅಡಕವಾದ, ಕೀರ್ತನೆಗಳಿಗೆ ಸಾಮಾನ್ಯವಾದ ಅಂಶಗಳನ್ನು ಒತ್ತಟ್ಟಿಗೆ ವಿವೇಚಿಸುವುದು ಅಗತ್ಯದ್ದಾಗಿದೆ. ಈವರೆಗೆ ರತ್ನಾಕರನ ಹಾಡುಗಳ ಬಗೆಗೆ ವಿಶೇಷವಾಗಿ ಎಲ್ಲಿಯೂ ವಿಸ್ತಾರವಾದ ಪ್ರಸ್ತಾಪ ಬರದೇ ಹೋದುದರಿಂದ, ಈ ಉಪೇಕ್ಷೆಯನ್ನು ನಿವಾರಿಸಲು ಪ್ರಯತ್ನಿಸುವುದು ಅಗತ್ಯದ್ದಾಗಿದೆ.

ಭಗವಂತನ ಕುರಿತ ಭಕ್ತನ ತನ್ಮಯತೆಯೇ ಭಕ್ತಿಯ ರೂಪದಲ್ಲಿ ಹಾಡಾಗಿ ಹೊರಹೊಮ್ಮುತ್ತದೆ. ಶರಣರು ಶಿವನನ್ನು, ದಾಸರು ಭಗವಂತನನ್ನು ಸ್ತುತಿಸುವ ರೀತಿಯಲ್ಲಿ ರತ್ನಾಕರವರ್ಣಿ ಜಿನಸ್ತುತಿಯನ್ನು ಭಕ್ತಿಪೂರ್ವಕವಾಗಿ ಮಾಡಿದ್ದಾನೆ.

ಆದಿಜಿನೇಶ ಜಿನನಾದರೋ ಎಂಥವನು
ಆದಿಜಿನೇಶ ಆದಿಜಿನೇಶ ಅಘಕುಲ ನಾಶ ॥ ಪಲ್ಲವಿ ॥
ನಿರ್ಮಲರೂಪ। ನಿರ್ಜಿತಕೋಪ। ಧರ್ಮದೀಪ ಪಾಪ ವಿಲೋಪ ॥
ನಿರ್ಜಿತಮದನ। ಸದ್ಗುಣಸದನ। ಸ್ಫೂರ್ಜಿತ ಜ್ಞಾನವರ್ಜಿತ ಕದನ ॥
ಶಕ್ತಿ ನಿಭವದನ। ಮುಕ್ತಿ ನಿವಾಸಾಧೀನ। ಭಕ್ತ್ಯಾಜ್ಞ ವಂದಿತ ವ್ಯಕ್ತ
ಕಡಲಾಧೀಶ ॥ [2]

ಆದಿಜಿನನ ನಿರ್ಮಲರೂಪವು ಸರಳವಾದ ಸಂಕ್ಷೇಪಕ್ಕೆ ಮಾದರಿಯಾದ ಪದಗಳಲ್ಲಿ ಸಂಗ್ರಹಗೊಂಡಿದೆ. ಆ ಜಿನನು "ಆನಂದಯೋಗಿ ಅಧ್ಯಾತ್ಮಯೋಗಿ। ಜೈನಾಗಮ

1. ಹಂಪ. ನಾಗರಾಜಯ್ಯ : ರತ್ನಾಕರನ ಹಾಡುಗಳು, 1979, ಪ್ರಸ್ತಾವನೆ,
2. ರತ್ನಾಕರನ ಹಾಡುಗಳು: ಧರ್ಮದ ದೀಪ ಪು 18.

ಯೋಗಿ ಜಯಸಿದ್ಧ ಯೋಗಿ॥ "[1] ಎಂಬುದಾಗಿಯೂ ಕಾಣಿಸಿಕೊಂಡಿದ್ದಾನೆ. ಅಂತರಂಗವನ್ನು ಬೆಳಗುವ ಆ ಮಣಿದೀಪವನ್ನು "ನಿನ್ನನು ನಾನೇನೆಂಬೆ ಸದ್ಗುರುವೇ॥ ಪಲ್ಲವಿ॥ ಕೃಪೆಯೂ ಸಮುದ್ರನೆಂಬೆ। ಸೌಖ್ಯದ ನಿಧಿಯೆಂಬೆ। ಅಪರಾಜಿತೇಶ್ವರಾ। ನಿನ್ನ ನಾನೇನೆಂಬೆ॥ ಅನುಪಲ್ಲವಿ॥[2] ಎಂದು ಅವನನ್ನು ಭಕ್ತವತ್ಸಲ, ಭವರೋಗಹರ ಮೊದಲಾದ ವಿಶೇಷಣಗಳಿಂದ ಸ್ಮರಿಸುತ್ತಾನೆ. 'ಭಜಕರ ಸುಖದಾಧಾರ' ಹಾಡಿನಲ್ಲಿಯೂ[3] ದೇವನ ಗುಣಗಳನ್ನೂ 'ತ್ರಿಜಗಕ್ಕೂ ನೀ ಸೂತ್ರಧಾರಾ' ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಇಂಥ ಗುಣನಿಧಿಯನ್ನು 'ಎಲ್ಲರೂ ಕೊಂಡಾಡಿ' ಎಂದು ಕವಿ ಉಪದೇಶಿಸುತ್ತಾನೆ.

ನೋಡಿರೆಲ್ಲರು ಕೊಂಡಾಡಿರೆಲ್ಲರು ನಾಡು ಮಾತು
ಬೇಡ ಭಕ್ತಿಗೂಡಿ ಸಮುದ್ರಾಧೀಶ್ವರನಾ ‖ [4]

ಭಕ್ತವತ್ಸಲನಾದ ದೇವನನ್ನು ಭಕ್ತಿಯಿಂದ ಸ್ಮರಿಸುವುದೇ ಭಕ್ತನಿಗೆ ಪರಮ ಪವಿತ್ರ ಕಾರ್ಯ. ಅಂತೆಯೇ 'ಭಕ್ತಿಯೇ ಮುಕ್ತಿ'[5] ಎಂಬ ಹಾಡಿನಲ್ಲಿ ಭಕ್ತನ ಸರ್ವಾರ್ಪಣ ಭಾವವನ್ನೂ ಕಾಣುತ್ತೇವೆ.

ಸಾಕಿನ್ನು ಹಲವು ಹಂಬಲಿಸಿ ನನಗೇಕೆ ನೀ
ಸಾಕಿದಂದದೊಳಪ್ಪೆ ಅಪರಾಜಿತೇಶಾ ‖ ಪ ‖

ಎಂದು ಭಕ್ತಿಯಿಂದ ಭಜಿಸಿದ, ದೇವ ತೋರಿದ ಕೃಪೆಯನ್ನು ಧನ್ಯತೆಯಿಂದ ಮನ್ನಿಸುವ, ಅದಕ್ಕಿಂತ ಬೇರಿನ್ನಾವುದನ್ನೂ ಬಯಸದಂತೆ ಭಕ್ತನ ಹೃದಯ ಪಕ್ವಗೊಂಡಿದೆ.

ಇಷ್ಟದೈವದ ನಾಮಸ್ಮರಣೆ ಭಕ್ತನಿಗೆ ಪರಮ ಪವಿತ್ರವಾದುದು. ಅದು ಅವನನ್ನು ಎಂಥ ಸಂಕಟಗಳಿಂದಲೂ ಪಾರುಮಾಡಬಲ್ಲುದೆಂಬ ದೃಢವಾದ ನಂಬುಗೆ, ವಿಶ್ವಾಸ ಆತನದು.

"ನಿನ್ನ ನಾಮ ನಮ್ಮ ಪರಿಣಾಮ ಸಮುದ್ರಾಧೀಶಾ [6]
ಜಿನಜಿನ ಜಿನವೆನ್ನಿರೊ । ನೀವೆಲ್ಲರೂ
ಜಿನಜಿನ ಜಿನ ಎನ್ನಿರೊ" ಎಂಬ 'ಸುಖಮೀಪ ಜಪವಿದು' [7]
ಭವರೋಗ ಕೆಡಿಸುವ । ಹಿರಿದಾದ ಜಪವಿದು.

ಎಂಬಲ್ಲಿ ನಾಮಸ್ಮರಣೆಯಲ್ಲಿ ಬಲವಾದ ನಂಬುಗೆ ವ್ಯಕ್ತವಾಗುತ್ತದೆ. ಅದುದರಿಂದ 'ದೇವನಮೋ ಜಿತಕಾಮ ನಮೋ ಜೀವರಕ್ಷಕ ಸಜೀವ ನಮೋ' ಎಂದು 'ಮಂಗಳ

---

1. ರತ್ನಾಕರನ ಹಾಡುಗಳು: ಶೃಂಗಾರಯೋಗಿ ಪು 20,
2. ಅದೇ ಪು. 129 – 30; 3) ಅದೇ ಪು 133; 4. ಅದೇ ಪು 136;
5) ಅದೇ ಪು. 178 6. ಅದೇ ಪು. 129 7. ಅದೇ ಪು. 84

ಮಾಯನಾದ ಸೊಬಗಿನ ಮುಕ್ತ್ಯಂಗನೆಯುರಸ ಸವೆಗೇ' ಎಂದು 'ವೀತರಾಗನ ಪಾದವ ನೆನೆ'[1] ಎಂಬ ಜಿನಸ್ಮರಣೆಯು ಭಕ್ತನ ಏಕೋಭಾವವನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ಮುಕ್ತಿಯನ್ನು ಅರಸಹೊರಟ ಮಾನವನಿಗೆ ಧ್ಯಾನವಿಲ್ಲದೆ ಮುಕ್ತಿಯಹುದೆ.[2] .... ನಿರಂಜನ ಸಿದ್ಧನ ನೀ ನಿತ್ಯ ಅರಿತು ಧ್ಯಾನಿಸೆ ಮುಕ್ತಿ ನಿನಗೆ ಲಭಿಸುವುದು ಎನ್ನುವಲ್ಲಿ ಅಚಲವಾದ ಶ್ರದ್ಧೆಯಿದೆ. ಧ್ಯಾನಸುಖ[3] ಧ್ಯಾನವೊಂದೆ ಪರಿಹಾರ[4] ಎಂಬ ಹಾಡುಗಳಲ್ಲಿಯೂ ಇದೇ ಭಾವವ್ಯಕ್ತವಾಗಿದೆ. ಮೋಸದಿಂದಾದ ಪಾಪಕೆ ಬೆಚ್ಚಲೇಕೆ ಜಿನೇಶನ ಮತದೊಳುಂಟದು ಪರಿಹಾರ" ಎಂದೂ ಅಲ್ಲಿ ಪರಿಹಾರ ಮಾರ್ಗವನ್ನೂ ತೋರಿದ್ದಾಗಿದೆ.

ನಾಮಸ್ಮರಣೆ, ಧ್ಯಾನದಲ್ಲಿ ತಲ್ಲೀನತೆಯನ್ನು ಸಾಧಿಸಿಗ ಭಕ್ತ ಹಾಗೂ ದೇವನಲ್ಲಿ ಸಂಬಂಧ ಅನ್ಯೋನ್ಯವಾದುದು. ತನ್ನ ಸುಖ-ದು:ಖವನ್ನು ಬಿಚ್ಚುಮನಸ್ಸಿನಿಂದ ಅವನಲ್ಲಿ ವ್ಯಕ್ತಗೊಳಿಸುವ ಹಕ್ಕು ಸಲಿಗೆ ಅವನಿಗುಂಟು. ಮನದಳಲನ್ನು ವ್ಯಕ್ತಪಡಿಸುವಲ್ಲಿ ಅವನ ಆರ್ತನಾದ ಮನವನ್ನು ತಟ್ಟುತ್ತದೆ. 'ಆರುಂಟು ನೀನಲ್ಲದೆ.'[5] ಹಾಡಿನಲ್ಲಿ ಅವನ ಹೃದಯದ ಆರ್ತನಾದ ಧ್ವನಿಸುತ್ತದೆ.

ಆದಿಗೊರಿವೆಯನ್ನ ನೋವ ಸೋವ ಸರ್ವಜ್ಞ ! ಆರುಂಟು ನೀನಲ್ಲದೆ ಸುದಿಜ್ಞಾ ಎಂದು ಆರಂಭವಾಗುವ ಹಾಡು ದೇವನೊಬ್ಬನೇ ಅವನಿಗೆ ಆಧಾರವೆಂಬುದನ್ನೂ, ಅವನನ್ನು ಹೊರತುಪಡಿಸಿ ಯಾರಲ್ಲೂ ಅವ ತನ್ನ ಸ್ಥಿತಿಯನ್ನು ಅರುಹಲು ಅವಕಾಶವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವಿದೆ· ಅಲ್ಲದೆ "ಅಭಯಕೊಡು ಕೋಟಿ ಸೂರ್ಯ ಪ್ರಕಾಶ | ಉಭಯ ಕರ್ಮವ ಸುಟ್ಟುರುಹುಪಾಪನಾಶ" ಎಂದೂ ಅಭಯವನ್ನು ಕೋರುತ್ತಾನೆ. 'ಕಾಯೋ ಗುರುವೆ'[6] ಹಾಡಿನಲ್ಲಿಯೂ ಇಂದ್ರಿಯಕ್ಕೆ ಸಿಕ್ಕಿ ನೊಂದೆನಯ್ಯ ಗುರುವೆ, ಎಂದು ಭ್ರಾಂತಿ ಮೋಹದಿಂದ ಬಳಲಿದ ತನ್ನನ್ನು ಕಾಯಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾನೆ. "ಎಂದಿಗೆ ಬೆಳಗಹುದೊ ನಾನಿನ್ನೆಂದಿಗೆ ಕಣ್ದೆರವೆನೋ" ಎಂದು ಕೇಳುವಲ್ಲಿ ಕ್ರೋಧ ಮಾಯೆ, ಲೋಭ ಮೋಹದ ನಾಲ್ಕುಜಾವ ಕಳೆದು ಸೂರ್ಯೋದಯ ಎಂದಾಗುವದೆಂದು 'ಪಾಪವೆಂಬ ಕತ್ತಲೆ'[7] ಹಾಡಿನಲ್ಲಿ ಭಕ್ತ ಪರಿತಪಿಸುತ್ತಾನೆ. ನೊಂದ ತಾಪಸಾಲೆದೆ....[8] ಎಂಬಲ್ಲಿ 'ನಿನ್ನವನೆಂದೆನ್ನ ಮನ್ನಿಸೊ ದೇವರದೇವ' ಎಂದು ಹಲುಬುತ್ತಾನೆ. ಕರ್ಮದಾಹಗೊಳಿಸಿ ಕಾಡುತಿಹ.ದು ಕಾಯೋ ನೋಡಿ" ಎಂದು ಹಲುಬುವ ಭಕ್ತ "ಏಕಯ್ಯ ಹೀಗೆನ್ನ ನೋವ ನೀ ನೋಡುವೆ। ನಾಕೆನ್ನಲಾಗದೇ ಅಪರಾಜಿತೇಶ್ವರಾ" ಎಂದು "ಬೇಗಕರೆದುಕೊ ಸ್ವಾಮಿ"[9] ಎಂದೂ ಸೊನ್ನೆಯಂತೆ

---

1. ಅದೇ ಪು. 112 – 113; 2. ಅದೇ ಪು. 116. 3. ಅದೇ ಪು. 160
4. ಅದೇ ಪು 161 5. ಅದೇ ಪು. 21-22 6. ಅದೇ ಪು. 33
7. ಅದೇ ಪು. 44-45 8. ಅದೇ ಪು. 130 9. ಅದೇ ಪು. 51

ಮಾಡು ಕರ್ಮದ ಪರಿಯೆ ಸಾ॥ಕಿನ್ನು ಸಾಧಿಸಯ್ಯ ಜವನಗುಡಿಯ....[1] ಎಂದೂ ಬಿನ್ನವಿಸಿಕೊಳ್ಳುವಲ್ಲಿ ಅವನ ಸರ್ವಾರ್ಪಣಭಾವ ವ್ಯಕ್ತವಾಗುತ್ತದೆ. ಎನ್ನದೂರೆ ಅರುಹಾ'[2] ಹಾಗೂ 'ನಿನಗೆ ತಲೆಬಾಗಿವೆ ಶ್ರೀ ಗುರುವೆ[3] ಹಾಡಿನ "ಬಿಡದು ಕಾಣಯ್ಯ ಚನ್ನಯ್ಯ । ನೀ ಎನ್ನ ॥ ಬಿಡಿಸು ಬಿಡಿಸುಡಮ್ಮಯ್ಯ ||ಪ|| ಎಂಬಲ್ಲಿ ಭಕ್ತನ ಆರ್ತನಾದ, ಸರ್ವಾರ್ಪಣಭಾವ, ಭಗವಂತನಲ್ಲಿಯ ಅಚಲದೈವ ಶ್ರದ್ಧೆಯ ತೀವ್ರತೆ ಅನುಭವವೇದ್ಯವಾಗುತ್ತದೆ.

ರತ್ನಾಕರವರ್ಣಿಯ ಹಾಡುಗಳು ಕೀರ್ತನೆಗಳಂತೆಯೇ ರಸಾನುಭವದ ಮಡು ವಾಗಿರುವಂತೆಯೇ ಜೈನದರ್ಶನದ ತತ್ವನಿರೂಪಣೆಯ ಸರಳ–ಸುಲಭ ಉದಾಹರಣೆ ಆಗಿವೆ. "ಅರಿಹಂತನೆ ದೇವ[4] ಹಾಡಿನಲ್ಲಿ ಮೂಢತ್ರಯ, ಆರು ದೋಷ ಸಮ್ಯಕ್ತ್ವದ ಎಂಟು ಅಂಗಗಳು; 'ಸಮ್ಯಕ್ತ್ವವ ನಂಬಿ'[5] ಹಾಡಿನಲ್ಲಿ ಸಮ್ಯಕ್ತ್ವ ಧಾರಣಮಾಡಿದ ಶ್ರಾವಕನ ಹನ್ನೊಂದು ನೆಲೆಗಳ ಪ್ರಸ್ತಾಪವಿದೆ. ಸ್ಯಾದ್ವಾದದಂಥ ಗಂಭೀರ ವಿಷಯವೂ 'ಸ್ಯಾದ್ವಾದಸವಿ'[6] ಹಾಡಿನಲ್ಲಿ ತನ್ನ ಸರಳತೆಯಿಂದ ಆಕರ್ಷಕ ವಾಗಿ, ರೂಪತಾಳಿದೆ.

"ಆರೇನು ಮಾಡುವರು ಆರಿಂದಲೇನಹುದು
ಪೂರ್ವ ಜನ್ಮದ ಕರ್ಮವಿದು ಕಾಡುತಿರಲು" ಎಂದು ಆರಂಭವಾಗುವ

'ನಾ ಮಾಡಿದಷ್ಟು ನನಗೆ' ಎಂಬಲ್ಲಿ ಕರ್ಮಸಿದ್ಧಾಂತದ ಜಟಿಲತೆಯನ್ನು ಅಳಿಸಿ ಹಾಕಿ, ಸುಲಭ ಉದಾಹರಣೆಗಳ ಮೂಲಕ ಮೂಡಿರುವುದು. ವ್ಯಕ್ತಿಯ ಪುರು ಷಾರ್ಥಕ್ಕೆ ಅದರಿಂದ ಲಭಿಸುವ ಪ್ರಾಶಸ್ತ್ಯವನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದೆ. ಅದರಂತೆ ರತ್ನಾಕರವರ್ಣಿಯ ವೈಶಿಷ್ಟವೇನೋ ಎನ್ನುವಂತೆ.... ಭರತೇಶ ವೈಭವ ದಲ್ಲಿ ಪ್ರತಿಪಾದಿತ ಭೇದವಿಜ್ಞಾನವೂ ಅವನ ಹಾಡುಗಳಲ್ಲಿ ಅವಕಾಶ ಪಡೆದಿವೆ.

ದೇಹ ಕೆಟ್ಟರೆ ತಾನು ಕೆಟ್ಟೆನೆಂಬುವ ಮೂಢ ತಪ್ಪೆ
ದೇಹ ಕೆಟ್ಟರೆ ತಾನು ಕೆಡೆನೆಂಬುವ ಪ್ರೌಢ ಎಂದು ಆತ್ಮನಿಗಾವ ಭೇಧವಿಲ್ಲ[7]

ವೆಂದು ಆತ್ಮ ದೇಹ ಭಿನ್ನವೆಂಬ ಭೇದವಿಜ್ಞಾನವು ಅನೇಕ ಉದಾಹರಣೆಗಳಿಂದ ಪ್ರತಿಪಾದಿತವಾಗಿದೆ.

ಭೇದವಿಜ್ಞಾನ ರಾಜ್ಯದೊಳು
ವೇದನೆಯ ತಾಳು ಸುಬೋಧೆಯಿದು ಕೇಳು'

---

1. ಅದೇ ಪು. 73 2. ಅದೇ ಪು 181
3. ಅದೇ ಪು. 146 – 47 4. ಅದೇ ಪು. 7 5. ಅದೇ ಪು. 7
6. ಅದೇ ಪು. 14 7. ಅದೇ ಪು. 26 – 27

ಎಂಬ 'ಭೇದ ವಿಜ್ಞಾನ ರಾಜ್ಯ'ದ[1] ಸಾಲುಗಳು ಭಕ್ತ ಅರಿತಿರಬೇಕಾದ ಮೂಲಭೂತ ತತ್ವವನ್ನು ಅರುಹುತ್ತವೆ. ಜನಸಾಮಾನ್ಯರಿಗಾಗಿ ರಚಿತವಾದ ಈ ಹಾಡುಗಳಲ್ಲಿ ತಾತ್ವಿಕ ವಿವೇಚನೆಯಿದ್ದರೂ ಅದು ಪಾರಿಭಾಷಿಕ ಪದಗಳ ಭಾರದಿಂದ ತಾಗದೆ ಸೂಕ್ಷ್ಮವಿಶ್ಲೇಷಣೆಯ ಜಂಜಡದಿಂದ ಮುಕ್ತವಾಗಿದ್ದು, ಸಾಮಾನ್ಯ ಭಾಷೆಯ ಬಳಕೆಯಿಂದಾಗಿ ಸರ್ವರಿಗೂ ನಿಲುಕಲು ಸಮರ್ಥವಾಗಿದೆ.

ರತ್ನಾಕರವರ್ಣಿಯು ಜೀವನವನ್ನು ವಿವಿಧ ನಿಟ್ಟಿನಿಂದ ವಿವಿಧ ನಿಲುವಿನಲ್ಲಿ ಕಂಡುಕೊಂಡು ಅದನ್ನು ಸ್ಮರಿಸುತ್ತ ಸಂತೋಷಪಟ್ಟಿದ್ದಾನೆ. ದೇವನ ಅನನ್ಯ ಸ್ವರೂಪ ಭಕ್ತನ ದೃಷ್ಟಿಗೂ ತೃಪ್ತಿಯನ್ನು ನೀಡುವುದಾಗಿದೆ "ರೂಪನೋಡಿದರೆ ಬೆಳಗುವ ಮಾಣಿಕ್ಯ"[2] ವಾದ

ಆರೆಂದರಿಯರಲ್ಲಾ ಇವನಾರೆಂದರಿಯರಲ್ಲಾ
ಪರಮಶಾಂತಿ ಲೋಕಾಧಿಪನ || ಪಲ್ಲವಿ ||

ಎಂದು 'ಕ್ರೋಧ ಮದ ಮಾಯಾ ಲೋಭಗಳನ್ನು ಭೇದಿಸಿ ಕೇವಲಬೋಧ'ವನ್ನು ಪಡೆದವನು ಅವನೆಂಬುದು ತಿಳಿಯುತ್ತದೆ.

ಉಡದೆ ತೊಡದೆ ಸೊಬಗಿನ ಚೆಲುವ ದೇಹ
ವಿಡಿದು ನಿರ್ದೇಹಿಯಾದ ಚಿನ್ಮಯಾಂಗನಾ ....

ಎಂದು ಚಿನ್ಮಯಾಂಗನಧ್ಯಾನಿಸು'[3] ಎಂದು ಆರಂಭವಾಗುವ ಹಾಡು ಆ ಪರಂಜ್ಯೋತಿಯ ರೂಪ ವಿಶೇಷತೆಗಳನ್ನು ವಿವರಿಸುವದು. ದಾಸರು ಭಗವಂತನ ಅಂಗಾಂಗಗಳ ಲಾವಣ್ಯವನ್ನು ಕೊಂಡಾಡಿರುತ್ತಾರೆ. ಅದನ್ನೇ ಗಮನದಲ್ಲಿಟ್ಟು ಕೊಂಡು ಮಣಿಮಾಲೆ ವಸ್ತ್ರಗಳ| ನೆಣೆಸದೆ ಕಾಂತಿಯೇ ತಿಂ| ತಿಣಗೊಂಡ ಚೆಲುವ ರೂಪಿನ ಮೂಲೋಕನ ಭೂಷಣವೆ ಬಾ|[4] ಎಂಬಲ್ಲಿಯೂ ಆ ನಿರಾಕಾರ ರೂಪವನ್ನು ಸ್ಮರಿಸಿದ್ದಾನೆ. ಆ ದೃಷ್ಟಿಯಿಂದ ರತ್ನಾಕರನ "ತನುಚೈತ್ಯಾಲಯ[5] ಹಾಡು ವೈಶಿಷ್ಟ್ಯಪೂರ್ಣವಾಗಿದೆ.

ತನುವೆಂಬ ಚೈತ್ಯಾಲಯದೊಳಗಿಪ್ಪನಾ
ತನು ನೋಂಕಿಯು ನೋಂಕದವನಾ
ತನುವಿಲ್ಲದೆ ಪರಮನಾ ಸುಜ್ಞಾನವೇ
ತನುವಾದನುಪಮನಾ
ಶಾಶ್ವತ ಪೂರ್ಣವಾಗಿದನಾ ನಿರಂಜನ ಪುರುಷಾಕಾರನಾ

ಎಂದು ಮೊದಲಾಗಿ ಆರಂಭವಾಗುವ ನಿರಾಕಾರ ಸ್ವರೂಪಿಯಾದ ದೇವನ ವರ್ಣನೆ ದಾಸರ ಕೀರ್ತನೆಗಳಿಗಿಂತ ಭಿನ್ನವಾಗಿ ನಿಲ್ಲುವಂಥದು. ದಾಸರ ಕೀರ್ತನೆಗಳಲ್ಲಿ

1. ಅದೇ ಪು 113 2. ಅದೇ ಪು. 153 – 54 3. ಅದೇ ಪು 24-25
4. ಅದೇ ಪು. 51 – 52 5 ಅದೇ ಪು 23, 6 ಅದೇಪು. 31 – 32.

ಮೂಡಿನಿಂತ ಭಗವಂತನ ವೈವಿಧ್ಯಮಯ ಚಿತ್ರಣ ತಾತ್ವಿಕ ಹಿನ್ನೆಲೆಯಲ್ಲಿಯೇ ಇಲ್ಲಿ ಮಹತ್ವವನ್ನು ಕಳೆದುಕೊಂಡು ಬಿಡುತ್ತದೆ. ನಿರಾಕಾರಸ್ವರೂಪಿಯಾದ ಮುಕ್ತಾತ್ಮನಿಗೆ ಅಂಗಾಂಗಗಳ ಸೌಂದರ್ಯವನ್ನು ಆರೋಪಿಸಿ ವರ್ಣಿಸಲು ತಾತ್ವಿಕ ಅಡ್ಡಿಯಿರುವಾಗಲೂ ಅವನ ಪರಮ ಶಾಂತ ಪರಂಜ್ಯೋತಿ ಸ್ವರೂಪವನ್ನು ಕಂಡಿರಿಸುವುದು ಮೋಹಕವಾಗಿದೆ.

ಭಗವಂತನ ಅನುಗ್ರಹಕ್ಕೆ ಪಾತ್ರನಾಗಬಯಸುವ ಭಕ್ತ ತನ್ನ ಶುದ್ಧ ಚಾರಿತ್ರದಿಂದ ತನ್ನ ಆತ್ಮಕಲ್ಯಾಣವನ್ನುಂಟು ಮಾಡಿಕೊಳ್ಳಬೇಕು. ಭಕ್ತನಾದವನು ಇತರರಿಗಾಗಿ ಉಪದೇಶವನ್ನು ನೀಡದೆ ತನಗೆ ಅನ್ವಯವಾಗುವ ವಿಷಯಗಳನ್ನು ಪ್ರಸ್ತಾಪಿಸುವದರ ಮೂಲಕ ಕೇವಲ ಸಾರ್ವತ್ರಿಕ ಉಪದೇಶದ ಸ್ವರೂಪತಾಳುವ ಬದಲು ತನ್ನನ್ನು ಸಮಾವೇಶಗೊಳಿಸಿಕೊಳ್ಳುವುದರಿಂದ ಅದು ಪ್ರತಿಯೊಬ್ಬನಿಗೂ ಪ್ರಸ್ತುತವೆನಿಸುತ್ತದೆ. ಸಾತ್ವಿಕವಾದ ಜೀವನವನ್ನು ನಡೆಸಲು ಮಾನವ ಅನುಸರಿಸಬೇಕಾದ ಮಾರ್ಗ ಇಲ್ಲಿ ಪ್ರಸ್ತಾಪಗೊಳ್ಳುತ್ತದೆ.

"ಆರದೆಂದಾರ್ಜಿಸಿಡುತಿಹೆ ಧನವ ಮನುಜ

ಆರಿಗೂ ಸ್ಥಿರವಲ್ಲ ಯಾಕೆ ಬರಿಯಾಸೆ" ಎಂದು 'ಯಾಕೆ ಬರಿಯಾಸೆ' [1] ಎಂಬ ಹಾಡಿನಲ್ಲಿ ಸ್ಥಿರವಲ್ಲದ ಸಂಪತ್ತಿಗಾಗಿ ಆಸೆಪಡುವ ಮಾನವನನ್ನು ಎಚ್ಚರಿಸುವ ಪ್ರಯತ್ನವಿದೆ. 'ಹುತ್ತವ ಬಡಿದಲ್ಲಿ ಫಲವೇನು' ಎಂಬ ಹಾಡಿನ ಇಹಪರವೆರಡರ ಚಿಂತನೆಯಿಲ್ಲದೆ ಬಹುಚಿಂತೆಯ ಮಾಡಿ ಫಲವೇನು, ತಾನುಣ್ಣ ಪರರಿಗಿಕ್ಕದೆ ಹೊನ್ನ ಕಾದಿರ್ದ ಹೀನನ ಸಿರಿಯಿದ್ದು ಫಲವೇನು,[2] ಎಂದು ಮೊದಲಾಗಿ ಪ್ರಯೋಜನಕ್ಕೆ ಬಾರದ ವಿಷಯಗಳನ್ನು ಪ್ರಸ್ತಾಪಿಸಿ, ತಿಳಿದುದನ್ನು ಆಚರಿಸುವುದಗತ್ಯವೆಂದು ಪ್ರತಿಪಾದಿಸಿದ್ದಾನೆ. ಅಲ್ಲದೆ "ಹೀನಸಮಿತ್ತುಗಳ ಅಗ್ನಿಗಿರಿಸು [3] ಎಂಬಲ್ಲಿ ತ್ಯಾಜ್ಯ ವಿಷಯಗಳನ್ನು ತೊರೆಯುವುದನ್ನು, ವ್ರತಸಮಿತಿಗಳನ್ನು ಅನುಸರಿಸುವ ಮಾರ್ಗವನ್ನು ಪ್ರತಿಪಾದಿಸುತ್ತಾನೆ. ಅದರಂತೆ ಹಿರಿಯರನು ಬೈಯಬೇಡ [4] ಎಂಬುದು 'ಋಷಿಗಳ ನಿಂದಿಸಿ ಹಸಗೆಡಬೇಡ। ಸಸಿಸಿರು ಸಮತಾಭಾವದೊಳು' ಎಂದು 'ನಿಂದಕನಿಗೆ ಇಹಪರದೊಳ ದುಃಖವು। ಬಂದು ನೋಯಸುತಿಹುದು ಅನುದಿನವು' ಎಂಬುದರ ಮನವರಿಕೆಯನ್ನು ಮಾಡಿಕೊಡುತ್ತದೆ. 'ಸಂಗವ ತೊರೆಯುವುದೇ ದೀಕ್ಷೆ' [5] ಎಂದೂ ಮೈಯ ದಂಡಿಸಿದೊಡಿಲ್ಲ [6] ಎಂಬಲ್ಲಿ 'ದೃಷ್ಟಿಗಳೆರಡನು ಮುಚ್ಚಿ ತನ್ನಾತ್ಮನ ತಾ ಕಾಂಬುದು ಇಷ್ಟೇ ಕಾಣಿರೊ ಮುಕ್ತಿಗಿಷ್ಟ

1. ಪು. 20 2. ಪು. 40 – 41 3. ಪು. 69
4. ಪು. 42-43 5. ಪು. 172
6. ಪು. 40

ಕಾಣಿರೊ | ಎಂಬ ಸುಲಭ ಉಪಾಯವನ್ನು ಉಪದೇಶಿಸಿದ್ದಾನೆ. ಬಾಳುವಾಗ ಸರ್ವಜನ ಬಂಧುಗಳೆಲ್ಲ ಕೆಟ್ಟಾಪ | ತ್ತಲ್ಲಿರುವಾಗ ಮಾತನಾಡುವದಿಲ್ಲ' [1] ಎಂಬಲ್ಲಿ ಸಮಾಜದ ಸೂಕ್ಷ್ಮ ನಿರೀಕ್ಷಣೆಯ ಫಲವಾಗಿ ಹೊರಹೊಮ್ಮಿದ ಉಪದೇಶ ವ್ಯಕ್ತವಾಗಿದೆ.

ಮೋಹ ಆಶೆ–ಚಿಂತೆ ಮಾನವನನ್ನು ಸದಾ ಕಾಡುತ್ತಿರುವವು. ಅದರಲ್ಲಿ 'ಹೊಟ್ಟೆಯ ಚಿಂತೆ ಹೊರಗಣ ಜನದ ಚಿಂತೆ। ಉಟ್ಟುಡುವ ಚಿಂತೆ ಬಂಗಾರಗಳನು ತೊಟ್ಟುಕೊಳ್ಳುವ ಚಿಂತೆ ಹಟ್ಟಬಾಗಿಲ ಚಿಂತೆ| ಎಷ್ಟು ಪೇಳುವೆ ಕೆಟ್ಟಮನಕೆ ಹಂಬಲವ' ಎಂಬಲ್ಲಿ [2] ಮಾನವನನ್ನು ಕಾಡುವ ವಿವಿಧ ಚಿಂತೆಗಳನ್ನು ಪ್ರಸ್ತಾಪಿಸಲಾಗಿದೆ. 'ಚಿಂತೆಯ ಮೇಲೆ ಚಿಂತೆಯು ಬರುವದು ನಿ | ಶ್ಚಿಂತನಾಗಿರು ಮನವೆ| ಒಂದು ಪರಿಹಾರವಾಗುವಷ್ಟರಲ್ಲಿ ಇನ್ನೊಂದು ಚಿಂತೆ ಎದುರಾಗುವುದನ್ನು ನೆನೆದು ಚಿದಂಬರ ಪುರುಷನನ್ನು ಧ್ಯಾನಿಸು, [3] ವಿಷಯಸುಖ ವಿಷ [4] ವೆಂದು ತಿಳಿದು ರಾಗ ದ್ವೇಷವ ಬಿಟ್ಟು 'ಲೋಕವೆಲ್ಲವು ಸಟೆ ಸಂಭ್ರಮಕೆ ಮರುಳಾಗಿ | ವ್ಯಾಕುಲದೊಳಾಡುತಿದೆ ಕಂಡ್ಯ" [5] ಎಂದೂ, ಇದು ಮೂರುದಿನದ ಬದುಕು ಎಂಬುದನ್ನು ಮನವರಿಕೆ ಮಾಡಿಕೊಡಲಾಗಿದೆ'. ಸಂಸಾರದ ಈ ಅಸಾರತೆಯನ್ನು ರತ್ನಾಕರ ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಾನೆ.

'ಆವುದಾತ್ಮನಿಗೆ ಧ್ರುವವಸ್ತು ಎಲ್ಲರೊಳು | ಭಾವಿಸೆಲೋ ದೇಹ ಮೊದಲಾದ ಭಾಗ್ಯದೊಳು | ಎಂದು ಮನೆ ಹೊಲ ವಸ್ತು ವಾಹನ ಸೌಭಾಗ್ಯ ಸಕಲ ಸಂಪದ ಭೋಗಗಳೆಲ್ಲ ಅಸ್ಥಿರವೆಂಬುದನ್ನೂ, ಸದ್ಧರ್ಮವೊಂದೆ ಧ್ರುವವೆಂದೂ ತಿಳಿಸಿ[6] ಸಂಸಾರದ ಅಸಾರತೆಯನ್ನು ಮೋಹನಿರಸತೆಯ ಅಗತ್ಯತೆಯನ್ನು ವಿವರಿಸಿದ್ದಾನೆ.

ಅನುಭಾವ ಸಾಹಿತ್ಯದಲ್ಲಿ ಭಕ್ತನ ಆತ್ಮಶೋಧನೆ, ಅಂತರಂಗ ವಿಮರ್ಶೆ ಪ್ರಮುಖ ಅಂಶವಾದುದರಿಂದ ಅದು ಅವನ ಆಧ್ಯಾತ್ಮಿಕ ನಿಲುವನ್ನು ಸ್ಪಷ್ಟಪಡಿಸುವ ಮಹತ್ವದ ಆಧಾರವಾಗುತ್ತದೆ. ಶ್ರದ್ಧಾಭಕ್ತಿಪೂರ್ವಕ ತನ್ನ ಸುಖ–ದುಃಖವನ್ನು ಭಗವಂತನಲ್ಲಿ ಅರಿಕೆ ಮಾಡಿಕೊಂಡ ಭಕ್ತ ತನ್ನಂತೆಯೇ ಸಂಸಾರದಲ್ಲಿ ಪರಿತಪಿಸುತ್ತಿರುವ ಜೀವಿಗಳ ಉದ್ಧಾರಕ್ಕಾಗಿಯೂ ಪ್ರಯತ್ನಿಸುತ್ತಾನೆ. ಸಾಧಕನ ಪ್ರಾಮಾಣಿಕ ಅನ್ನಿಸಿಕೆಗಳಿಂದಾಗಿ ಆ ಪ್ರಯತ್ನ ಯಾವಕಾಲಕ್ಕೂ ಪ್ರಸ್ತುತವಾಗುತ್ತದೆ. ರತ್ನಾಕರವರ್ಣಿಯ ಅನೇಕ ಹಾಡುಗಳಲ್ಲಿ ಅವನ ಅಂತರಂಗವನ್ನು ಬಿಚ್ಚಿಡುವ, ಪ್ರಾಮಾಣಿಕ ಸಾತ್ವಿಕ ಬದುಕಿಗಾಗಿ ಪರಿತಪಿಸುವ ಕಳಕಳಿ ವ್ಯಕ್ತವಾಗಿದೆ.

---

1. ಪು. 149 2. ಅದೇ ಪು. 29 3. ಅದೇ ಪು. 88
4. ಅದೇ ಪು. 99-100 5. ಅದೇ ಪು. 166-67 6. ಅದೇ ಪು. 29-30

ಈ ಹಾಡುಗಳು ವ್ಯಕ್ತಿನಿಷ್ಠವಾದರೂ ಮಾನವಕುಲಕ್ಕೆ ಅವುಗಳ ಪ್ರಯೋಜನೆ ಅನುಪಮವಾದುದು.

ಇಂದ್ರಿಯಕ್ಕೆ ಸಿಕ್ಕಿ ನೊಂದೆನಯ್ಯ ಗುರುವೆ ಮಾ| ಹೇಂದ್ರಕೀರ್ತಿ ಕಾಯೊ ಕರುಣದ ಕರುವೆ। ಎಂದು ಆರಂಭವಾಗುವ 'ಕಾಯೋಗುರುವೆ' [1] ಹಾಡು ಇಂದ್ರಿಯಗಳ ದಾಸನಾಗಿ ಮನುಷ್ಯನೆಸಗುವ ವ್ಯಾಪಾರಗಳನ್ನು ಸ್ಮರಿಸಿ ರಾಗ ದ್ವೇಷಗಳಿಂದ ಸುಜ್ಞಾನಮೂರ್ತಿ ದಿವ್ಯಯೋಗಿ ಮುಕ್ತಿಗಾಣಿಸೋ ಎಂದು ಮುಕ್ತ್ಯಾಯವಾಗುವಲ್ಲಿ ಭಕ್ತನ ಪರಿತಪಿಸುವ ಭಾವ ಅದಕ್ಕಾಗಿ ನೊಂದು ಸರಿಯಾದ ಮಾರ್ಗವನ್ನವಲಂಬಿಸುವ ತವಕ ಕಂಡುಬರುತ್ತದೆ. ಹಾಡಿನಲ್ಲಿ ಹೆಂಗಳ ಮೋಹಕೆ ಮರುಳಾಗಿ ಕಡೆ| ಗಣ್ಣನೋಟಕೆ ಮಾರುಹೋಗಿ 'ಅಂಗಜಬಾಣಕೆ ನೊಂದೆ ಎಂದು ಭಕ್ತ ತನಗಾದ ಅರಿವನ್ನು ಇತರರೊಂದಿಗೆ ಹಂಚಿಕೊಳ್ಳುತ್ತಾನೆ. "ಎಂದಿಗೆ ಹಿಂಗುವುದು ಸಂಸಾರ ಪಾಶಾ"[2] ಎಂದು 'ದೇಹವೆಂಬ ಸೆರೆಮನೆಯೊಳೆನ್ನ ಕೂಡಿ ಮೋಹವೆಂಬ ಸೊಕ್ಕು ನದಿಗೆ ಮರುಳು ಮಾಡಿ ಕರ್ಮದಾಹಗೊಳಿಸಿ ಕಾಡುತಿಹುದು........ ಎಂದು ಹೇಳುವಲ್ಲಿಯೂ ಮಾಯೆ–ಮೋಹಗಳ ಕಾಟಕ್ಕೆ ಬೇಸತ್ತ ಜೀವ ಅವುಗಳಿಂದ ಬಿಡುಗಡೆಗಾಗಿ ಹಾತೊರೆಯುತ್ತದೆ.

ಲೌಕಿಕದ ಸಂತೋಷದಲ್ಲಿಯೇ ಸಮಯ ಕಳೆಯುವ ಜೀವ ತನ್ನನ್ನೇ ಪರೀಕ್ಷೆಗೊಳಪಡಿಸಿ ತನ್ನ ನಿಲುವನ್ನೂ ಪರಾಮರ್ಶಿಸುವ ಸಂದರ್ಭ 'ಹೊತ್ತು ಕಳೆದೆಯಲ್ಲಾ'[3] ಎಂಬ ಹಾಡಿನಲ್ಲಿ ಮೂಡಿ, ಆಲೆದಾಡಿ, ತಿಂದುಂಡು ಹರಟೆ ಹೊಡೆದು ಕ್ಷಣಿಕ ಸುಖ ಸಂತೋಷವನ್ನು ನಂಬಿ ನಚ್ಚಿದ ಮನ ವಾಸ್ತವವನ್ನು ಗ್ರಹಿಸಿ ಪರಿತಪಿಸುತ್ತಿದೆ. ಮನದ ಚಂಚಲಸ್ವಭಾವವನ್ನು ನಾನಾಪರಿಯಾಗಿ ಅವಹೇಳನಗೈದು 'ಹರಿದಾಡದಿರು ಕಪಿಯಂತೆ[4] ಎಂದು ಎಚ್ಚರಿಸುವನು. ಅದನ್ನೇ ಇನ್ನೊಂದು ಹಾಡಿನಲ್ಲಿ ಕಂಡಕಡೆಗೆ ಹರಿವ ಮನವೆಂಬುದೊಂದು ಹುಚ್ಚುಗುದುರೆ[5] 'ಸತಿಸುತ ಪಿತರೆಂದು ಮತಿಗೆಟ್ಟು ನಿನ್ನಿಂದ| ಗತಿಗತಿಯೊಳು ದುಃಖವತಿಯೊಳು ನೊಂದೆ ಯತಿಪತಿಸುತ ಜನಪಾದವ ನಂಬಿ ಅತಿಮತಿಯಾದೆನೆಲೆ ವೈರಿ ತನುವೆ' ಎಂದು ಸಾರಿದ್ದಾನೆ.

ಕೀರ್ತನೆ–ಹಾಡುಗಳು ಸಮಷ್ಟಿಬದುಕನ್ನು ಮೇಲೆತ್ತುವ ಉದಾತ್ತ ಉದ್ದೇಶವನ್ನು ಹೊಂದಿದವುಗಳು. ಈ ಉದ್ದೇಶ ಸಾಧನೆಯಲ್ಲಿ ವ್ಯಕ್ತಿಯ ಅರೆಕೊರೆಗಳಂತೆಯೇ ಸಮಾಜದಲ್ಲಿ ರೂಢಗತವಾದ ಕೆಲ ಅನಿಷ್ಟಗಳನ್ನು ಕಂಡು ಸಾತ್ವಿಕ

---

1. ಅದೇ ಪು. 33. 2. ಅದೇ ಪು. 45–46
3. ಅದೇ ಪು. 70-71 4. ಅದೇ ಪು. 104 5. ಅದೇ ಪು. 164

ಮನವೂ ಸಿಡಿದೇಳುವುದುಂಟು. ಸಮಾಜದ ಈ ಲೋಪ- ದೋಷಗಳನ್ನು ಚುಚ್ಚಿ, ವಿಡಂಬಿಸಿ, ಹೇಳುವಲ್ಲಿ ಟೀಕೆ ಮಾಡುವ ಪ್ರಯತ್ನಕ್ಕಿಂತ ತನ್ಮೂಲಕ ಸಮಾಜ ಸುಧಾರಣೆಯೇ ಪ್ರಮುಖ ಗುರಿಯಾಗಿ ಕಂಡುಬರುತ್ತದೆ. 'ಕರುಣವಿಲ್ಲದ ಧರ್ಮಕರ್ಮ' 1 ಹಾಡಿನಲ್ಲಿ 'ನಿಜವರಿಯದ ಮನುಜ ದನುಜ' 'ದರುಶನವಿಲ್ಲದ ಮಾನವ ದಾನವ' ನೆಂದೂ ಸಾರುವಲ್ಲಿ ಕವಿರತ್ನಾಕರ ಹಿಂಜರಿಯುವದಿಲ್ಲ. ಅವನ ಕಟೂಕ್ತಿಗಳು ಚಾಟಿ ಏಟನಂತಿದ್ದರೂ ಅವು ಸಮಾಜವನ್ನು ಸರಿಯಾದ ದಾರಿಗೆಳಸುವ ಉದ್ದೇಶದಿಂದ ಹೊರಹೊಮ್ಮಿದುವಾಗಿವೆ. ಅದರಂತೆ 'ಬಡವರ ಬಾಯ್ಗಳ ಬಡಿಯದಿರು' 2 ಎಂಬಲ್ಲಿ ಬಡವರನ್ನು ಗೋಳು ಹೊಯ್ದುಕೊಳ್ಳುವವರು ನರಕವನ್ನು ಹೊಂದುವರೆಂದೂ, 'ಹೊನ್ನು ಹೆಣ್ಣು ಮಣ್ಣು ನಿನ್ನನೆ ವಂಚಿಸಿ ಹೋಗುವ ದೆಚ್ಚರಿಕೆ' ಎಂಬಲ್ಲಿಯೂ ಸಾಮಾಜಿಕ ಸ್ವಾಸ್ಥ್ಯದ ಕಳಕಳಿ ವ್ಯಕ್ತವಾಗಿದೆ. ಕುಲದ ಪ್ರಶ್ನೆಗ ರತ್ನಾಕರನೂ ಸ್ಪಂದಿಸದೆ ಉಳಿದಿಲ್ಲ. 'ಡಂಬಕ ಹೊಲೆಯರಿಗೆ ತಮಗೆಲ್ಲಿಯ ಕುಲವೊ' ಎಲುಚರ್ಮಮಾಂಸದ ಪೊಡ್ಡು ತಿರುಗುವ ಮನುಜರಯಿಂಥಾ। ಕುಲಗೆಟ್ಟ ಹೊಲೆಯರಿಗೆ ತಮಗೆಲ್ಲಿಯ ಕುಲವೊ'। 3 ಎಂದು ಕುಲವನ್ನಾಡುವ ಡಂಭಿಕರನ್ನು ಹಳಿಯುವಲ್ಲಿ ರತ್ನಾಕರ ಯಾರಿಗೂ ಹಿಂದೆ ಬಿದ್ದಿಲ್ಲ. ಜೀವನದ ವಿವಿಧ ಮುಖಗಳ ಪರಿಚಯ, ಲೋಕಾನುಭವಗಳ ಹಿನ್ನೆಲೆಯಲ್ಲಿ ಜನತೆಯ ಮೌಢ್ಯ, ಕುಂದುಕೊರತೆ ಲೋಪ-ದೋಷಗಳನ್ನು ಕಟೂಕ್ತಿಯ ಮೂಲಕ ಹೊರಗೆಡುವಿದ್ದಾನೆ.

ರತ್ನಾಕರನ ಹಾಡುಗಳ ವಿವೇಚನೆಯ ಅನೇಕ ಸಂದರ್ಭಗಳಲ್ಲಿ ದಾಸರ ಕೀರ್ತನೆಗಳ, ಶರಣರ ವಚನಗಳ, ಭಾವ, ಆಶಯ, ಸಾಲುಗಳು ಮನದ ಮುಂದೆ ಸುಳಿದು ಹೋಗುತ್ತವೆ. ಮುಕ್ತ ಮನದ, ಸ್ವತಂತ್ರ ದೃಷ್ಟಿಯ ಕವಿಯಾದ ರತ್ನಾಕರವರ್ಣಿ ಕೀರ್ತನೆ- ವಚನಗಳ ನಿಕಟ ಪರಿಚಯಹೊಂದಿ, ಅವುಗಳಿಂದ ಪ್ರಭಾವಿತನಾಗಿರಬೇಕು. ಆದುದರಿಂದ ಅವನ ಅನೇಕ ಹಾಡುಗಳು ಮತ್ತು ಕೀರ್ತನೆಗಳಲ್ಲಿ ಸಮಾನ ಅಂಶಗಳು ಸ್ಪಷ್ಟವಾಗುತ್ತವೆ:

1. ಅದೇ ಪು. 125 2. ಅದೇ ಪು. 144 3. ಅದೇ ಪು. 53.

I.	ಅಹಾ ಪುಣ್ಯವಲಾ ನರದೇಹವಿಡಿದು ಜಿನಮತ ದೊಳಗುದಿಸುವುದಾಹಾ ಪುಣ್ಯವಲಾ ॥ [1]	ಕಲಿಯುಗದೊಳು ಹರಿನಾಮವ ನೆನೆದರೆ ಕುಲಕೋಟಿಗಳುದ್ಧರಿಸುವವೈ ॥
	ಮನುಜ ಜನ್ಮಕೆ ಬಂದು ವೈಮರೆಯಬೇಡ ಜಿನಜಿನಾಯೆನ್ನಿರೊ ನಿಮ್ಮ ತನುಮನವ ಜನವೆರ್ಥಕೆ ಕೆಡಿಸದೆ ಜಿನಜಿನಾಯೆನ್ನಿರೊ [2]	ಸುಲಭದ ಮುಕ್ತಿಗೆ ಸುಲಭವೆಂದೆನಿಸುವ ಜಲರುಹನಾಭನ ನೆನೆಮನವೆ —ಪುರಂದರದಾಸ
II.	ಮೋಸದಿಂದಾದ ಪಾಪಕೆ ಬೆಚ್ಚಲೇಕೆ ಜಿ ನೇಶನ ಮತದೊಳುಂಟದು ಪರಿಹಾರ ॥ [3]	ತಲ್ಲಣಿಸದಿರು ಕಂಡ್ಯ ತಾಳು ಮನವೇ ಸ್ವಾಮಿ ಸಿಲ್ಲದಲೆ ರಕ್ಷಿಸುವ ಸಂದೇಹಬೇಡ —ಕನಕದಾಸ
	ಚಿತ್ರವ ಕಂಡು ಚಿದ್ರೂಪನ ಮರೆಯದಿರು ಮನವೆ ಉಪದ್ರವಕೆ ಬೆಚ್ಚದಿರು ತನುವೆ ॥ [4]	
III.	ಆರೇನು ಮಾಡುವರು ಆರಿಂದಲೇನಹುದು ಪೂರ್ವಜನ್ಮದ ಕರ್ಮವಿದು ಕಾಡುತಿರಲು [5]	ಆರೇನು ಮಾಡುವರು ಆರಿಂದಲೇನಹುದು ಪೂರ್ವಜನ್ಮದ ಕರ್ಮವಿದು ಬೆನ್ನಬಿಡದು —ಪುರಂದರದಾಸ
IV.	ವ್ಯೆಯು ದಂಡಿಸಿದೊಡಿಲ್ಲ [6]	ಯಾಕೆ ಈ ದೇಹವ ದಂಡಿಸುವೆ —ಪುರಂದರದಾಸ

1. ರ. ಹಾ. ಪು 30 2. ಅದೇ. ಪು. 156 3. ರ. ಹಾ ಪು 161 4. ಅದೇ ಪು. 89 5 ಅದೇ ಪು. 26. 6 ಅದೇ. ಪು. 40.

V. ಎಷ್ಟು ಪೇಳುವೆ ಕೆಟ್ಟಮನಕೆ
ಆವಾಗಲೂ ಚಿಂತೆ ಜೀವಕೆ ತನ್ನ
ಭಾವನೆ ಹಿಡಿದು ನಿಶ್ಚಿಂತನಾದಲ್ಲದೆ [1]

VI ಹಿರಿಯರನು ಬೈಯಬೇಡ :
ಋಷಿಗಳ ನಿಂದಿಸಿ ಹಸಗೆಡಬೇಡ
ಸಸಿನಿರು ಸಮತಾಭಾವದೊಳು
ಹಿಂದೆ ಋಷಿಗಳು ನಿಂದಿಸಿ ಹಲವರು
ಸಂದರು ನಾರಕ ಮೇದಿನಿಗೆ.... [2]

VII ಎಲ್ಲಿಯ ಕುಲ :
ಇಂದ್ರಿಯ ಸೂತತ ದುರ್ಗಂಧ ಮಲಮೂತ್ರ
ನಿಂದನಿಂದ ಠಾವಿನಲಿ ನಿಜವ ನಾನರಿಯೆ

ಒಂದೇ ಬಚ್ಚಲ ಕುಳಿಯೊಳು ತಿಂದೆ ಮೇಲೆ
ಮಾಂಸವ ಇಂತಾ
ಅಂಧಕ ಹೊಲೆಯರಿಗೆ ತಮಗೆಲ್ಲಿಯ
ಕುಲವೊ [3]

ಏಕೆ ಚಿಂತಿಸುತಿರುವಿ ಕೋತಿ ಮನವೆ
ಶ್ರೀಕೃಷ್ಣರಾಯನ ಸ್ತುತಿಸಲೊಲ್ಲದಲಿ
— ಪುರಂದರದಾಸ

ದಾಸರನಿಂದಿಸಬೇಡ :
ದಾಸರನಿಂದಿಸಬೇಡ : ಮನುಜಾ ಹರಿ
ದಾಸರ ನಿಂದಿಸಬೇಡ ॥
ರಾಮನ ನಿಂದಿಸಿ ರಾವಣ ಕೆಟ್ಟ

ಆತನೊಲಿದ ಕುಲ :
ಕುಲಕುಲವೆನ್ನುತಿಹರೊ
ಕುಲವಾವುದು ಸತ್ಯಸುಜನರಿಗೆ
— ಕನಕದಾಸ

೨. ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದನೆಲೆಯನೇನಾದರೂ ಬಲ್ಲಿರ ||
ಹುಟ್ಟದ ಯೋನಿಗಳಿಲ್ಲ, ಮೆಟ್ಟದ
ಭೂಮಿಗಳಿಲ್ಲ ಅಟ್ಟು ಉಣ್ಣದ ವಸ್ತುಗಳಿಲ್ಲ
— ಕನಕದಾಸ

---

1. ಅದೇ ಪು. 29
2. ಅದೇ ಪು. 42–43
3. ಅದೇ ಪು. 52

ಹೀಗೆ ಇನ್ನೂ ಅನೇಕ ಹಾಡುಗಳಲ್ಲಿ ಭಾವ, ಭಾಷೆ, ವಸ್ತು ನಿರೂಪಣೆಯಲ್ಲಿ ರತ್ನಾಕರವರ್ಣಿ ದಾಸರ ಕೀರ್ತನೆಗಳ ಪ್ರಭಾವಕ್ಕೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಆದರೆ ಇಂಥ ಎಲ್ಲ ಸಂದರ್ಭಗಳಲ್ಲಿ ಅವನು ಕೀರ್ತನೆಗಳನ್ನೇ ಸಂಪೂರ್ಣವಾಗಿ ಅವಲಂಬಿಸಿ, ಅನುಕರಣಶೀಲತೆಯನ್ನಷ್ಟೇ ತೋರಿದ್ದಾನೆನ್ನಲಿಕ್ಕಾಗದು; ಈ ಕೆಲವು ಅಂಶಗಳನ್ನು ಗುರುತಿಸಬಹುದಾಗಿದೆ.

೧. ಕೀರ್ತನಗಳ ಜನಪ್ರಿಯತೆ, ಜನಮನದ ಮೇಲಿನ ಅವುಗಳ ಪ್ರಭಾವ ರತ್ನಾಕರನಿಗೂ ಮನವರಿಕೆಯಾಗಿದ್ದು, ಅದೇ ಮಾಧ್ಯಮದ ಮೂಲಕ ತನ್ನ ಭಕ್ತಿ ಭಾವವನ್ನೂ ತೋರ್ಪಡಿಸುವ, ತನ್ಮೂಲಕ ಸಮಾಜದಲ್ಲಿ ನೈತಿಕ ಮೌಲ್ಯಗಳ ಪ್ರತಿಷ್ಠಾಪನೆಗಾಗಿ ಪ್ರಯತ್ನಿಸುವಲ್ಲಿ ಪ್ರಾಮಾಣಿಕ ಹಂಬಲ ಸ್ಪಷ್ಟವಾಗುತ್ತದ

೨. ಕೆಲವು ಕೀರ್ತನೆಗಳ ತಲೆಬರಹವನ್ನೊ, ಒಂದೆರಡು ಸಾಲುಗಳನ್ನೊ ಯಥಾವತ್ತಾಗಿ ಸ್ವೀಕರಿಸಿದ್ದರೂ ನಿರೂಪಣೆಯಲ್ಲಿ ಸ್ವಾತಂತ್ರ್ಯವಹಿಸಿ ತನ್ನತನವನ್ನು ಕಾಪಾಡಿಕೊಂಡಿದ್ದಾನೆ.

೩. ದೈವಭಕ್ತಿ, ಆತ್ಮಚಿಂತನೆ, ಸದಾಚಾರ, ಮಾನವ ಹಿತಸಾಧನೆಗಳೇ ದಾಸ–ಶರಣರ ಗುರಿಯಾದುದರಿಂದ ಅವನ್ನೇ ಪ್ರತಿಪಾದಿಸಲು ಹೊರಟ ರತ್ನಾಕರನಲ್ಲೂ ಈ ವಿಷಯಗಳ ಪ್ರತಿಪಾದನೆ ಬಂದಾಗ ಸಹಜವಾಗಿಯೇ ಸಮಾನ ಅಂಶಗಳು ಒಡೆದು ಕಾಣಹತ್ತುವವು.

೪. ಹೆಣ್ಣು ಹೊನ್ನು ಮಣ್ಣುಗಳ ಮೋಹ, ಸಂಸಾರದ ಅಸಾರತೆ, ಮಾನವ ಸಾಮಾನ್ಯ ಚಿಂತೆ ವ್ಯಾಕುಲಗಳು ಸಾರ್ವತ್ರಿಕವಾಗಿದ್ದು ಇವುಗಳನ್ನು ಕುರಿತ ಭಾವನೆಗಳು ಏಕರೂಪವಾಗಿ ಕಂಡುಬರುವುದು ಸ್ವಾಭಾವಿಕವೆಂಬುದನ್ನು ಮರೆಯಲಿಕ್ಕಾಗದು.

೫. ಈ ಧರೆಯಲಿ ಶೃಂಗಾರಕವಿಯ ಆರಾಧಕ ಸಮುದಾ ಧೀಶನೊಳೈಕ್ಯ ಸಾಧನವ [1] ಎಂಬಲ್ಲಿ ಬರುವ 'ಐಕ್ಯ' ಕಲ್ಪನೆಯು ಪರಿಸರದ ಪ್ರಭಾವವೆಂಬುದಾಗಿ ತಿಳಿಯುತ್ತದೆ. ಆದರೆ ಇನ್ನಿತರ ಹಾಡುಗಳು ಜೈನದರ್ಶನಕ್ಕೆ ಅನುಗುಣವಾಗಿಯೇ ಕರ್ಮಸಿದ್ಧಾಂತ, ಅನೇಕಾಂತವಾದ, ಅಹಿಂಸೆ, ರತ್ನತ್ರಯ, ಸಮ್ಯಕ್ತ್ವಗಳ ಪ್ರತಿಪಾದನೆಗಾಗಿ ಮೀಸಲಾಗಿರುವುದು ಸ್ಪಷ್ಟವಾಗುತ್ತದೆ.

೬. ಕರ ತಂದಾರೊ ನಿನ್ನ| ನರಜನ್ಮವೆಂಬ ಪಟ್ಟಣಕೆ ಹಲವು ದೂರಿಂದ ಕರತಂದಾರೊ ನಿನ್ನ॥ [2] 'ಇದ್ದಿತೊ ಬಿದ್ದಿತೊ ಬಿದ್ದಿತಲ್ಲಾ ಕಾಡಿ| ಉದ್ದವ

1. ರ. ಹಾ. ಪು. 24-25: 2 ಅದೇ ಪು. 74

ನೇರಿತು ಮನವೆಂಬ ಹಂಸ [1] – ಹಾಡುಗಳ ಆಡುನುಡಿಯ ಸೊಗಸು, ನೇರ ಸಂಬೋಧನೆಯ ರೀತಿ ರತ್ನಾಕರನ ಸ್ವಂತಿಕೆಗೆ ನಿದರ್ಶನವಾಗಿವೆ.

ಒಟ್ಟಿನಲ್ಲಿ ಶರಣ – ದಾಸರ ಅನುಭಾವ ಸಾಹಿತ್ಯಕ್ಕೆ ಮನಸೋತ, ಅಲ್ಲಲ್ಲಿ ನೇರ ಪ್ರಭಾವಕ್ಕೆ ಒಳಗಾದ ರತ್ನಾಕರವರ್ಣಿ ಜೈನ ಕೀರ್ತನ ಸಾಹಿತ್ಯ ಪ್ರಕಾರದ ಕೊರತೆಯನ್ನು ನಿವಾರಿಸಿದುದಲ್ಲದೆ, ಭಕ್ತಿಪಾರಮ್ಯ, ನೀತಿಬೋಧೆ, ತತ್ವಪ್ರಚಾರ, ಆತ್ಮಾನುಭವವನ್ನು ಪರಿಣಾಮಕಾರಿಯಾಗಿ ವಿಶದಪಡಿಸಿದ್ದಾನೆ.

1. ಅದೇ ಪು. 34

ಭಾಷಾ ನಿರೂಪಕ

● ವಿಲ್ಯಂ ಮಾಡ್ರ

ಸಾಮಾನ್ಯವಾಗಿ ಭಾಷಾನ್ವೇಷಕ ಅನ್ವೇಷಿತ ಭಾಷೆಗೆ ಹೊರಗಿನವನಾಗಿರುತ್ತಾನೆ. ಕಾರಣ, ಮೊತ್ತ ಮೊದಲು ಆ ಭಾಷೆ ಆತನಿಗೆ ಕೇವಲ ಸದ್ದು (Noise). ಆತ ಒಂದು ಭಾಷಾಸಮುದಾಯವನ್ನು ಪ್ರವೇಶಿಸಿ ಅದರ ಸದಸ್ಯನಂತೆ ಬಾಳಿದಾಗ ಮಾತ್ರ ಆ ಸದ್ದು ಕಾಲಕ್ರಮೇಣ ಧ್ವನಿ (Sound) ಯಾಗಿ ಪರಿಣಮಿಸುತ್ತದೆ. ಮೆಲ್ಲಮೆಲ್ಲನೆ ಆ ಭಾಷೆಯ ಮೂಲಕ ಸಮಾಜ ವ್ಯಕ್ತಗೊಳಿಸುವ ಅರ್ಥವನ್ನು ಆತ ತಿಳಿಯತೊಡಗುತ್ತಾನೆ; ಭಾಷಾನಿಯಮಗಳನ್ನು ಅರಿತುಕೊಳ್ಳಬಲ್ಲವನಾಗುತ್ತಾನೆ; ಮಾತ್ರವಲ್ಲದೆ, ಅವುಗಳನ್ನು ಸ್ವಭಾಷಾನಿಯಮಗಳೊಂದಿಗೆ ಹೋಲಿಸಿನೋಡಲು ಪ್ರಯತ್ನಿಸುತ್ತಾನೆ. ಈ ಭಾಷಾಧ್ಯಯನದ ಕ್ರಿಯೆ ಪರಿಪೂರ್ಣಗೊಳ್ಳಬೇಕಾದರೆ ದೀರ್ಘಾವಧಿಯ ಕಾಲ ಬೇಕಾಗುತ್ತದೆ. ಆ ಭಾಷಾ ಸಮಾಜಕ್ಕೆ ಸೇರಿದ ವ್ಯಕ್ತಿ– ನಿರೂಪಕ (Informant) ನ – ಸಹಾಯದಿಂದ ಮಾತ್ರ ಈ ಕಾಲಾವಧಿಯನ್ನು ಆತ ಬಹಳಷ್ಟು ಮೊಟಕುಗೊಳಿಸಬಹುದು.

ಇನ್ನೂ ನೇರವಾಗಿ ಹೇಳಬೇಕಾದರೆ, ಭಾಷಾನ್ವೇಷಣೆ ಕಾರ್ಯದಲ್ಲಿ ನಿರೂಪಕನ ಪಾತ್ರ ಅತ್ಯಂತ ಪ್ರಮುಖವಾದುದು. ಆತನಿಲ್ಲದೆ ದತ್ತಸಂಗ್ರಹ ಅಸಾಧ್ಯ. ಭಾಷೆಯ ವಿವಿಧ ಮಾದರಿಗಳನ್ನು (Samples) ಅವುಗಳ ಪುನರಾವರ್ತಿತ ಪಾಠಗಳನ್ನು ಹಾಗೆಯೇ ಹೇಳಬಹುದಾದ ಮಾದರಿಗಳನ್ನು ಕ್ಷೇತ್ರಭಾಷಾವಿಜ್ಞಾನಿಗೆ ದೊರಕಿಸಿ ಕೊಡುವುದೇ ನಿರೂಪಕನ ಪ್ರಪ್ರಥಮ ಕಾರ್ಯ. ಆತ ಭಾಷಾಪ್ರಯೋಗಗಳ ಬಳಕೆ, ಅವುಗಳ ಅರ್ಥವಿವರಣೆ ಮುಂತಾದವುಗಳನ್ನು ಸ್ವ ಅಥವಾ ಅನ್ಯಭಾಷೆಯಲ್ಲಿ ಕೊಡಬೇಕಾಗುತ್ತದೆ. ಅನಿರೀಕ್ಷಿತವಾಗಿ ಭೇಟಿಯಾದವನೂ ನಿರೂಪಕನಾಗಿರಬಹುದಾದರೂ ಹೆಚ್ಚಾಗಿ ಆತ ಕ್ಷೇತ್ರಭಾಷಾವಿಜ್ಞಾನಿಯನ್ನು ಪದೇ ಪದೇ ಭೇಟಿಯಾಗಿ ಆತನಿಗೆ ಭಾಷಾದತ್ತವನ್ನು ಒದಗಿಸಿಕೊಡುವ ವ್ಯಕ್ತಿಯಾಗಿರುತ್ತಾನೆಯಲ್ಲದೆ ಭಾಷಾವಿಶ್ಲೇಷಣೆಯಲ್ಲಿ ಸದಾ ಸಹಭಾಗಿಯಾಗಿರುತ್ತಾನೆ.

ಭಾಷಾವೈಜ್ಞಾನಿಕ ಸಂಶೋಧನೆಯಲ್ಲಿ ನಿರೂಪಕರು ಅನಿವಾರ್ಯ. ಭಾಷಾವಿಶ್ಲೇಷಣೆಯಲ್ಲಿ ಇವರು ಭಾಷಾವಿಜ್ಞಾನಿಗಳಿಗೆ ಸಹೋದ್ಯೋಗಿಗಳು (Collaborators)). ಈ ಕಾರಣಗಳಿಂದಲೇ ಭಾಷಾವೈಜ್ಞಾನಿಕ ಲೇಖನ

ಹಾಗೂ ಪುಸ್ತಕಗಳಲ್ಲಿ ನಿರೂಪಕರನ್ನು ಸ್ಮರಿಸಿಕೊಳ್ಳುವುದನ್ನು ನಾವು ಕಂಡೇ ಕಾಣುತ್ತೇವೆ. ಭಾಷಾರಚನೆಯನ್ನು ಕುರಿತು ಸಾಮಾನ್ಯ ನಿಯಮಗಳನ್ನು ರೂಪಿಸಬೇಕಾದರೆ ಭಾಷಿಕ ದತ್ತಸಂಗ್ರಹಣೆ ಅತ್ಯಾವಶ್ಯಕ. ನಿರೂಪಕರ ಸಹಭಾಗಿತ್ವದಿಂದ ಈ ಸಂಗ್ರಹಣೆ ಕಾರ್ಯ, ಸಾಧ್ಯ.

ಭಾಷಿಕ ದತ್ತವನ್ನು ಭಾಷಾಸಮಾಜದ ಎಲ್ಲ ಸದಸ್ಯರಿಂದ ಪಡೆದುಕೊಳ್ಳುವುದು ಅಸಾಧ್ಯ. ಹೀಗೆ ಪಡೆದುಕೊಂಡಲ್ಲಿ ವಿಶ್ಲೇಷಕನಿಗೆ ಏಕತೆಗಿಂತ ಭಿನ್ನತೆಗಳೇ ದೊರಕುವುದು ಹೆಚ್ಚು ಸಾಧ್ಯ. ಕೆಲವೊಮ್ಮೆ ಹೆಂಗಸರ ಮಾತು ಗಂಡಸರ ಮಾತಿಗಿಂತ ಭಿನ್ನವಾಗಿರುವುದು ಉಂಟು (ಉದಾ:— ಲೂಯಿಸಿಯಾನದ ಕೋಸಾತಿ ಭಾಷೆ); ಒಂದೇ ಪ್ರದೇಶದಲ್ಲಿ ಹಲವಾರು ಉಪಭಾಷೆಗಳಿರುವ ಸಾಧ್ಯತೆ ಇದೆ. ಉದಾ:— ಧಾರವಾಡದಲ್ಲಿ ಬ್ರಾಹ್ಮಣರ ಭಾಷೆ ಲಿಂಗಾಯತರ ಭಾಷೆಗಿಂತ ಭಿನ್ನವಾಗಿರಬಹುದು; ಮಂಗಳೂರಿನಲ್ಲಿ ಕ್ರೈಸ್ತರ ಕೊಂಕಣಿ ಹಿಂದೂಗಳ ಕೊಂಕಣಿಗಿಂತ ಭಿನ್ನವಾಗಿದೆ); ಮುದುಕರ ಭಾಷೆ ಇಂದಿನ ತರುಣರ ಭಾಷೆಗಿಂತ ಕೆಲವು ಮಟ್ಟದಲ್ಲಿ ಭಿನ್ನವಾಗುವ ಸಂಭವ ಇದೆ. (ಉದಾ:— ಬಡಗ ಭಾಷೆ) ಸರ್ವಭಿನ್ನತೆಗಳನ್ನೂ ಭಾಷಾವಿಜ್ಞಾನಿ ತನ್ನ ಗಮನಕ್ಕೆ ತಂದುಕೊಂಡು ವಿಶ್ಲೇಷಣೆ ಮಾಡಬೇಕು. ಆದರೆ ಆರಂಭದಲ್ಲಿಯೇ ಅವುಗಳನ್ನು ತಂದು ಕಲೆ ಹಾಕಿದರೆ ಆತನ ಭಾಷಾವಿಶ್ಲೇಷಣೆಯಲ್ಲಿ ವ್ಯವಸ್ಥೆಗಿಂತ ಅವ್ಯವಸ್ಥೆಯೆ ಹೆಚ್ಚಾದೀತು. ಭಾಷಾವಿಶ್ಲೇಷಣೆಯ ಉದ್ದೇಶ ವ್ಯಾಪ್ತಿಗಳನ್ನು ಗಮನಿಸಿ ಭಾಷಾ ವೈವಿಧ್ಯವನ್ನು ಅಭ್ಯಾಸ ಮಾಡಿಕೊಳ್ಳಬೇಕಾಗುತ್ತದೆ.

ಸಂಗ್ರಹಿತ ಭಾಷಾದತ್ತದ ಪರಿಷ್ಕರಣ ಭಾಷಾನಿರೂಪಕನ ಇನ್ನೊಂದು ಮಹತ್ವವಾದ ಕಾರ್ಯ. ಭಾಷಾನ್ವೇಷಕನು ಬಹು ವಿಶಾರದನೂ ಕುಶಲನೂ ಆಗಿದ್ದರೂ ಮಹತ್ವವುಳ್ಳ ಭಾಷಾಂಶಗಳೆಲ್ಲವೂ ಆತನು ಮಾಡಿದ ಪ್ರಥಮ ದತ್ತಾಭಿಲೇಖ (Data recording) ದಲ್ಲಿ ಸಂಪೂರ್ಣ ಹಾಗೂ ಪರಿಪೂರ್ಣವಾಗಿ ದೊರೆಯುವುದು ದುಸ್ಸಾಧ್ಯ. ಸ್ವಭಾಷೆಗಿಂತ ಅನ್ವೇಷಿತ ಭಾಷೆ ಎಷ್ಟೊಂದು ಭಿನ್ನವಾಗಿರುತ್ತದೊ ಅಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ದತ್ತಾಭಿಲೇಖದಲ್ಲಿ ತಪ್ಪುಗಳು ನುಸುಳಿಕೊಳ್ಳುವುದು ಹಾಗೂ ಉಳಿದುಕೊಳ್ಳುವುದು ಸಾಧ್ಯ. ಉದಾಹರಣಾರ್ಥವಾಗಿ ಅನೇಕ ಉಚ್ಚರಣಾತ್ಮಕ ವ್ಯತ್ಯಾಸಗಳು (Phonetic differences) ಸರಿಯಾಗಿ ಕೇಳದೆ ಹೋಗಬಹುದು ಅಥವಾ ವ್ಯತ್ಯಾಸಗಳಿಲ್ಲದ ಸ್ಥಳಗಳಲ್ಲಿ ವ್ಯತ್ಯಾಸಗಳನ್ನುಂಟು ಮಾಡಬಹುದು, ಉದಾಹರಣೆಗೆ ಅಪೂರ್ಣ ವ್ಯತ್ಯಾಸ (Under-differentiation) ಮತ್ತು ಅಧಿಕ ವ್ಯತ್ಯಾಸ (Over-differentiation)ದಿಂದುಂಟಾಗುವ ತಪ್ಪುಗಳು ನೋಡಿ: Gleason

1966:272, 351–5; 272–82, 351). ಇಂತಹ ಸಂದಿಗ್ಧ ಪರಿಸರಗಳಲ್ಲಿ ನಿರೂಪಕನ ಸಹಾಯ ಅತ್ಯಗತ್ಯ.

ಒಂದು ಭಾಷೆಯನ್ನಾಡುವವರೆಲ್ಲರೂ ಆ ಭಾಷೆಯ ಉತ್ತಮ ನಿರೂಪಕರಾಗಲಾರರು. ಅವರನ್ನು ಭಾಷಾಕ್ಷೇತ್ರದಿಂದ ಆರಂಭಿಸಿಕೊಳ್ಳಬೇಕಾಗುತ್ತದೆ. ಹೀಗೆ ಆರಿಸಿಕೊಳ್ಳುವಾಗ ಕೇವಲ ನಿರೂಪಕನ ಗುಣಗಳನ್ನು ಮಾತ್ರವಲ್ಲದೆ ಅನ್ವೇಷಕನ ಸ್ವಭಾವವನ್ನೂ ಪರಿಗಣಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ, ನಿರೂಪಕರನ್ನು ಆರಿಸಿಕೊಳ್ಳುವಾಗ ಅವರ ಆರೋಗ್ಯ, ಸಾಮರ್ಥ್ಯ, ಭಾಷಾಪ್ರಭುತ್ವ, ಸಾಂಸ್ಕೃತಿಕ ಅನುಭವ ಅಂತೆಯೇ ಭಾಷಾಧ್ಯಯನದ ಸ್ವರೂಪ, ಸಂದರ್ಭ, ಪರಿಸರ ಇತ್ಯಾದಿ ವಿಷಯಗಳತ್ತ ಸೂಕ್ತ ಗಮನಕೊಡಬೇಕಾಗುತ್ತದೆ. ಯಾವ ನಿರೂಪಕ ಹೆಚ್ಚು ಸಮರ್ಥ ಹಾಗೂ ಪ್ರಾಮಾಣಿಕನೆಂಬುದನ್ನು ಗುರುತಿಸುವಲ್ಲಿ ಆ ಕ್ಷೇತ್ರದ ಜನರ ಸಲಹೆಯನ್ನು ಪಡೆದುಕೊಳ್ಳುವುದು ಲೇಸು.

ಒಮ್ಮೆ ಆರಿಸಿಕೊಂಡ ನಿರೂಪಕರನ್ನು ಸುಲಭದಲ್ಲಿ ಕೈಬಿಡುವಂತಿಲ್ಲ; ಬಿಟ್ಟರೆ, ಸಹಕಾರವಿಲ್ಲದೆ ಅಧ್ಯಯನ ಕಾರ್ಯವನ್ನೇ ಸ್ಥಗಿತಗೊಳಿಸಬೇಕಾದೀತು. ಈ ಕಾರಣಕ್ಕಾಗಿ ಬಹು ಜಾಗರೂಕತೆಯಿಂದ ಹಾಗೂ ತಾಳ್ಮೆಯಿಂದ ನಿರೂಪಕರನ್ನು ಆರಿಸಿಕೊಳ್ಳುವುದು ಉತ್ತಮ.

ಆರಿಸಿಕೊಳ್ಳುವ ನಿರೂಪಕರಿಗೆ ಕ್ಷೇತ್ರಭಾಷಾವಿಜ್ಞಾನಿಯ ಜೊತೆ ಕೆಲಸ ನಿರ್ವಹಿಸಲು ಸಾಕಷ್ಟು ಕಾಲಾವಕಾಶ ಇರಬೇಕು. ಅವರು ಅನೇಕ ಕಾರ್ಯ ನಿರ್ವಹಣೆಗಳಲ್ಲಿ ತೊಡಗಿದ್ದಾದರೆ ಅವರಿಂದ ಅಪೇಕ್ಷಿತ ಸಹಾಯ ದುರ್ಲಭವಾಗಬಹುದು. ನಿರೂಪಕರ ಸಲುವಾಗಿ, ನಿರರ್ಗಳವಾಗಿ ಮಾತಾಡಬಲ್ಲವರಾಗಬೇಕು.

ಪ್ರಸ್ತುತ ನಿರೂಪಕ ಆರಿಸಿಕೊಂಡ ಭಾಷೆಯನ್ನು ಚೆನ್ನಾಗಿ ಮಾತಾಡುತ್ತಾನೆಯೇ? ಆತ ತನ್ನ ಮಾತಿನಲ್ಲಿ ಅನ್ಯ ಭಾಷಾಪದಗಳನ್ನು ಬಳಸುತ್ತಾನೆಯೇ? ಬಳಸಿದರೆ, ಯಾವ ಪ್ರಮಾಣದಲ್ಲಿ? ಆತನ ಉಚ್ಚಾರ ಹೇಗೆ? ಆತನು ಉತ್ತಮ ಮಾತುಗಾರನೆ? ಕಥೆಗಾರನೆ? ಭಾಷಣಕಾರನೆ? ಗಾದೆ, ಒಡಪು, ನುಡಿ ನಾಣ್ಣುಡಿಗಳನ್ನು ಬಲ್ಲವನೆ? ವಿವರಗಳನ್ನು ನೀಡಬಲ್ಲವನೆ? ಇವೇ ಮುಂತಾದ ಪ್ರಶ್ನೆಗಳಿಗೆ ಸರಿಯಾದ ಉತ್ತರ ತೃಪ್ತಿಕರ ಮಾಹಿತಿ ಸಿಕ್ಕಿದರೆ ಮಾತ್ರ ಆ ನಿರೂಪಕನನ್ನು ಆರಿಸಿಕೊಳ್ಳಬೇಕು.

ಶಿಫಾರಸು ಪಡೆದುಕೊಂಡು ಬಂದಿರುವ ನಿರೂಪಕರಿಗೆ ಹೆಚ್ಚಿನ ಆದ್ಯತೆಕೊಡಬೇಕೆಂದಿಲ್ಲ. ಅವರ ಬಗೆಗೆ ಕೂಲಂಕುಷ ಮಾಹಿತಿ ಪಡೆದುಕೊಳ್ಳುವುದು ಉತ್ತಮ ಇದರಿಂದಾಗಿ ಜಾತೀಯ, ಕೌಟುಂಬಿಕ ಹಾಗೂ ಇತರ ಪಕ್ಷಪಾತಗಳು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ಪಕ್ಷಪಾತಗಳಿಗೆ ಭಾಷಾವಿಜ್ಞಾನಿ ಅವಕಾಶ

ಕೊಡುವುದು ಅಪರಾಧ. ಉತ್ತಮ ಸೂಕ್ತ ನಿರೂಪಕರು ಸಿಗುವುದು ಬಹಳ ಕಷ್ಟದ ಕೆಲಸ.

ಗುಡ್ಡ ಕಾಡು ಪ್ರದೇಶಗಳಲ್ಲಿ ಜನರ ವಸತಿಗಳನ್ನು ಗುರುತಿಸಿಕೊಳ್ಳುವುದೇ ಪ್ರಯಾಸದ ಕೆಲಸ. ಎಷ್ಟೋ ಅಲೆಮಾರು ಜನಾಂಗಗಳು ತಮ್ಮ ಬೇಟೆ ಪ್ರಾಣಿಗಳಾದ ಮಂಗ, ಹಂದಿ ಅಥವಾ ಜೇನುನೊಣ ಮುಂತಾದವುಗಳನ್ನು ಹುಡುಕಿಕೊಂಡು ವಾರಗಟ್ಟಲೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವುದುಂಟು. ಕೆಲವರು ತಮ್ಮ ಮಕ್ಕಳನ್ನು ಮುದಿಮಂದಿ ಜೊತೆ ಬಿಟ್ಟು ಮೀನು ಹಿಡಿಯಲು ದೂರ ಸ್ಥಳಗಳಿಗೆ ಹೋದರೆ ಹಲವಾರು ದಿನ ಕಳೆದರೂ ಮನೆಗೆ ಬರುವುದಿಲ್ಲ. ಕೆಲವೊಮ್ಮೆ ಸಿಕ್ಕ ಸಿಕ್ಕ ನಿರೂಪಕರ ಸಹಾಯ ಪಡೆದುಕೊಳ್ಳುವ ಸಂಭವಗಳೂ ಹುಟ್ಟುತ್ತವೆ (Peter 1955- 43). ಅನೇಕ ಸಲ ಕೇವಲ ಬೇಜವಾಬ್ದಾರಿಗಳಾದ ಸೋಮಾರಿಗಳಂತೆ ಅಲೆದಾಡುವ ವ್ಯಕ್ತಿಗಳು ನಿರೂಪಕರಾಗಿ ಸಿಗುವ ಸಂದರ್ಭಗಳೂ ಇರುತ್ತವೆ. ಇಂಥವರಿಂದ ಕ್ಷೇತ್ರಭಾಷಾವಿಜ್ಞಾನಿಗಳು ತೊಂದರೆಗಳಿಗೀಡಾಗುವ ಪ್ರಸಂಗಗಳೂ ಹುಟ್ಟುತ್ತವೆ. (Berreman 1962), ಇವೆಲ್ಲ ಕಾರಣಗಳಿಂದ ಕೆಲವೊಮ್ಮೆ ಭಾಷಾ ಅನ್ವೇಷಕರಿಗೆ ತಮ್ಮ ಕೆಲಸದ ಬಗೆಗೆ ಜಿಗುಪ್ಸೆ ನಿರಾಶೆಗಳೂ ಹುಟ್ಟುವುದುಂಟು.

ನಿರೂಪಕರನ್ನು ದೊರಕಿಸಿಕೊಳ್ಳಲು ಹಣ, ಕಾಣಿಕೆ, ಸೇವೆ (Services ಮೊದಲಾದವುಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಸರಿಯಾದ ವೇತನಕೊಟ್ಟರೆ ನಿರೂಪಕರು ಸಿಗುವ ಸಂಭವ ಹೆಚ್ಚು. ದತ್ತಸಂಗ್ರಹದಲ್ಲಿ ಸಾಕಷ್ಟು ಸಮಯವನ್ನು ಕಳೆದಾಗ ಅದಕ್ಕೆ ಸೂಕ್ತವಾದ ವೇತನಪಡೆಯಲು ನಿರೂಪಕರು ಹಿಂಜರಿಯುವುದು ಕಡಿಮೆ; ಆದರೆ ಹಣದಾಸೆಗಿಂತ ಭಾಷಾಭಿಮಾನ ಹಾಗೂ ಪ್ರೀತಿವಿಶ್ವಾಸಗಳೇ ನಿರೂಪಕರನ್ನು ಪಡೆಯಲು ಸಹಾಯಕಾರಿಯಾಗುತ್ತವೆ. ನಿರೂಪಕನ ವೇತನ ನಿರ್ಣಯಿಸುವಾಗ ಮನಸ್ಸಿಗೆ ಬಂದಂತೆ ವರ್ತಿಸಬಾರದು. ಇದರಿಂದ ಅನಾಹುತಗಳು ನಡೆಯುವುದೇ ಹೆಚ್ಚು (Goldstein : 169 f n, 13). ಸ್ಥಳೀಯ ಪರಿಸ್ಥಿತಿ ಹಾಗೂ ಪದ್ಧತಿಗಳನ್ನು ಗಮನಿಸಿ ವೇತನವನ್ನು ನಿಗದಿ ಪಡಿಸಬೇಕೇ ಹೊರತು ಅನ್ವೇಷಕನ ಐಶ್ವರ್ಯವನ್ನು ಅವಲಂಬಿಸಿ ಸರ್ವಥಾ ಅಲ್ಲ! ಹೆಚ್ಚು ಕಡಿಮೆ ಒಬ್ಬ ಶಾಲಾ ಅಧ್ಯಾಪಕ, ಗುಮಾಸ್ತ, ಈ ದರ್ಜೆಯ ನೌಕರಿಗೆ ಕೊಡುವ ವೇತನವನ್ನು ನಿರೂಪಕರಿಗೆ ಕೊಡುವುದು ಸೂಕ್ತ. ಆದರೆ ಎಂದೆಂದಿಂಗೂ ಮನೆಯಾಳಿಗಿಂತ, ದಿನಗೂಲಿಯಾಳಿಗಿಂತ ಕಡಿಮೆ ವೇತನ ಅತನಿಗೆ ನಿಗದಿ ಮಾಡಬಾರದು. ಹೀಗೆಂದಮಾತ್ರಕ್ಕೆ ಒಮ್ಮೆಂದೊಮ್ಮೆಲೇ ಆರಂಭದಲ್ಲಿಯೇ ಹಿರಿಯ ವೇತನವನ್ನು ಕೊಡುವುದು ಒಳ್ಳೆಯದಲ್ಲ. ಹೀಗೆ ಮಾಡಿದ್ದಲ್ಲಿ ಉತ್ತಮ ನಿರೂಪಕರ ವೇತನವನ್ನು ಹೆಚ್ಚಿಸುವುದಾಗಲಿ ನಿರುಪಯುಕ್ತ ನಿರೂಪಕರ ವೇತನವನ್ನು

ಇಳಿಸುವುದಾಗಲಿ ಬಹಳ ತೊಂದರೆಯ ಕೆಲಸವಾಗುತ್ತದೆ. ಆದುದರಿಂದ ಆರಂಭದಲ್ಲಿ ಸಾಧಾರಣ ವೇತನವನ್ನಿತ್ತು ಅರ್ಹತೆ ಹಾಗೂ ಉಪಯುಕ್ತತೆಗಳನ್ನು ಅವಲಂಬಿಸಿ ಅದನ್ನು ಏರಿಸುತ್ತಾ ಹೋಗುವುದು ಸಮಂಜಸ (Notes and Queries, 6th ed. 44; Pidington,556, Karpales et al.9).

ವೇತನವನ್ನು ಸ್ವೀಕರಿಸಲು ಒಪ್ಪದಿದ್ದಲ್ಲಿ ನಿರೂಪಕರಿಗೆ ಸೂಕ್ತ ಬಹುಮಾನಗಳನ್ನು ಕಾಲಕಾಲಕ್ಕೆ ಕೊಟ್ಟು ಅವರ ಸಹಕಾರ ಪ್ರೇಮಗಳನ್ನು ದೀರ್ಘಕಾಲದವರೆಗೆ ಉಳಿಸಿಕೊಳ್ಳಬೇಕು (Gold Stein 172, f.n. 16 & 17) ಅನ್ವೇಷಕನೂ ಭಾಷಾಕ್ಷೇತ್ರದ ಸದಸ್ಯರ ಅವಹೇಳನೆಗೆ ಪಾತ್ರರಾಗಬೇಕಾದೀತು; ಅಥವಾ ಆತ ಸಂಶಯಾಸ್ಪದ ವ್ಯಕ್ತಿಯೆಂದು ಅವರು ಪರಿಗಣಿಸಬಹುದು. ಆ ಜನರ ಕೌಟುಂಬಿಕ ಹಾಗೂ ಸಾಮಾಜಿಕ ವಿಷಯಗಳನ್ನು ಅನ್ಯರತ್ತ ಸಾಗಿಸುವ ದ್ರೋಹಿ ಎಂಬ ಶಂಕೆ ಅವರು ಪರಸ್ಪರ ಪಸರಿಸಬಹುದು. ಹೀಗಾದ್ದಲ್ಲಿ ಆತನ ಕೆಲಸ ನಿಂತಂತೆಯೇ!

ಒಂದು ಭಾಷೆಯ ವಿಶ್ಲೇಷಣೆ ಮಾಡುವಾಗ ಆ ಭಾಷೆಯನ್ನು ಎಲ್ಲ ರೀತಿಯಿಂದಲೂ ಪ್ರತಿನಿಧಿಸುವಂತೆ ನಿರೂಪಕರನ್ನು ಸಂಖ್ಯಾ ದೃಷ್ಟಿಯಿಂದ ಹಾಗೂ ವಿಷಯ ದೃಷ್ಟಿಯಿಂದ ನಿರ್ಣಯಿಸಿ ಆರಿಸಿಕೊಳ್ಳಬೇಕು. "ಒಂದು ಭಾಷೆಗೆ ಒಬ್ಬ ವಿಶ್ಲೇಷಕ, ಒಬ್ಬ ನಿರೂಪಕನೆಂಬ" ಸೂತ್ರ ಸಮಂಜಸವಾದುದಲ್ಲ. (Uhlenbeck 1960: 433.) ರೂಪರೇಖಾತ್ಮಕ ಹಾಗೂ ರಚನಾತ್ಮಕ ಅಧ್ಯಯನಕ್ಕೆ ಸಾಮಾನ್ಯವಾಗಿ ಒಬ್ಬ ಅರ್ಹ ನಿರೂಪಕನಿದ್ದರೆ ಸಾಕಾಗಬಹುದು. ಆದರೆ, ಉಪಭಾಷಾ ಅಧ್ಯಯನಕ್ಕೆ ಸಾಮಾಜಿಕ-ಭಾಷಾವೈಜ್ಞಾನಿಕ (Socio-lingustic) ಅಧ್ಯಯನಕ್ಕೆ ಹಲವಾರು ನಿರೂಪಕರು ಬೇಕಾಗುತ್ತಾರೆ. ಭಾಷಿಕ ಅಂಶಗಳನ್ನು (Linguistic features) ವಯಸ್ಸು, ಜಾತಿ, ಕಸಬು ಮೊದಲಾದ ಸಾಮಾಜಿಕ ಘಟಕಗಳಿಗೆ ಅನ್ವಯಿಸಿ ವೈಜ್ಞಾನಿಕ ಅಧ್ಯಯನ ನಡೆಯಿಸುವಲ್ಲಿ ನಿರೂಪಕರ ವೈವಿಧ್ಯತೆ ಅನಿವಾರ್ಯ. ಒಬ್ಬನೇ ನಿರೂಪಕನನ್ನು ನೇಮಿಸುವುದರಿಂದ ಆತನ ವಂಚನೆ ಮೋಸಗಳಿಗೆ ಅನ್ವೇಷಕನು ಗುರಿಯಾಗಬೇಕಾದ ಪ್ರಸಂಗಗಳು ಉದ್ಭವಿಸಬಹುದು. ಒಬ್ಬೊಬ್ಬರಲ್ಲಿ ಒಂದೊಂದು ಭಾಷಿಕ ಕಲೆ ಹೆಚ್ಚಿನ ಮಟ್ಟದಲ್ಲಿ ಇರಬಹುದಾದುದರಿಂದ ಅನೇಕ ನಿರೂಪಕರನ್ನು ಆರಿಸಿಕೊಳ್ಳುವುದು ಉತ್ತಮ. ಒಬ್ಬ ಒಳ್ಳೆಯ ಕಥೆಗಾರನಾಗಿರಹುದು, ಇನ್ನೊಬ್ಬ ಪದಬಳಕೆಯಲ್ಲಿ ನಿಪುಣನಾಗಿರಬಹುದು, ಮಗದೊಬ್ಬ ಗಾದೆ, ಒಗಟು, ಹಾಡುಗಳಲ್ಲಿ ಜಾಣನಾಗಿರಬಹುದು. ಇವೆಲ್ಲರ ಸಹಾಯದಿಂದ ಅನ್ವೇಷಕನ ದತ್ತ ಸಂಗ್ರಹಣೆಗೆ ಬೆಲೆ ಹಾಗೂ ತೂಕ ಬರುತ್ತದೆ.

ಒಂದೇ ಸಮಯಕ್ಕೆ ಎಲ್ಲ ನಿರೂಪಕರು ಒಂದೇ ಸ್ಥಳದಲ್ಲಿ ಸೇರಬೇಕಾಗಿಲ್ಲ. ಗುಂಪಿನಲ್ಲಿದ್ದು ಮಾತನಾಡಲು ಕೆಲವರು ನಾಚುತ್ತಾರೆ ಅಥವಾ ಇಷ್ಟ ಪಡುವುದಿಲ್ಲ. ಕೆಲವೊಮ್ಮೆ ಅವರೊಳಗೆ ವೈರತ್ವ ಇರಬಹುದು. ಅಥವಾ ಇತರರು ಜೊತೆಗೆ ಇದ್ದಾಗ ಅನ್ವೇಷಕನನ್ನು ತಿದ್ದುವುದು ನಿರೂಪಕರಿಗೆ ಕಷ್ಟ ಸಾಧ್ಯವಾಗಬಹುದು. ಆದರೆ ಅಗತ್ಯಬಿದ್ದಾಗ ಕ್ಷೇತ್ರಭಾಷಾವಿಜ್ಞಾನಿ ಎಲ್ಲ ನಿರೂಪಕರನ್ನು ಸೇರಿಸಿ ಚಹಾದ ಅಥವಾ ಊಟದ ಸಂದರ್ಭವನ್ನು ಕಲ್ಪಿಸಿ ಅವರ ಸಂಭಾಷಣೆ ಇತ್ಯಾದಿಗಳನ್ನು ರೆಕಾರ್ಡ್ ಮಾಡಿಕೊಳ್ಳಬಹುದು. ಒಟ್ಟಿನಲ್ಲಿ ನಿರೂಪಕರ ಸಂಖ್ಯೆಯನ್ನು ಅಧ್ಯಯನದ ರೀತಿ ಹಾಗೂ ಅಗತ್ಯತೆಗಳಿಗೆ ಅನುಗುಣವಾಗಿ ಮಾಡುವುದು ಸೂಕ್ತ.

ನಿರೂಪಕರು ಭಾಷಾ ಸಮಾಜವನ್ನು ಪ್ರತಿನಿಧಿಸಬೇಕಾದುದರಿಂದ ಅವರು ಅನುಭವಸ್ಥರಾಗಿರಬೇಕು. ಈ ದಿಸೆಯಿಂದ ಸಣ್ಣ ಮಕ್ಕಳನ್ನು ನಿರೂಪಕರನ್ನಾಗಿ ಆರಿಸುವುದು ಸಮಂಜಸವಲ್ಲ. ಸಂಗ್ರಹಗಾರನಿಗೆ ಇದರಿಂದ ಎಷ್ಟೋ ರೀತಿಯ ಮಾಹಿತಿಯನ್ನು ದೊರಕಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಅಷ್ಟೇ ಅಲ್ಲದೆ, ಅವರ ಆಸಕ್ತಿ ಅತಿ ತೀವ್ರದಲ್ಲಿ ಕುಂದಿಹೋಗುತ್ತದೆ. ಕ್ಷೇತ್ರಭಾಷಾವಿಜ್ಞಾನಿಯ ಗುರಿ ಅಧ್ಯಯನದ ಸ್ವರೂಪ ಇತ್ಯಾದಿಗಳನ್ನು ಗ್ರಹಿಸಿಕೊಳ್ಳುವುದು ಎಳೆವಯಸ್ಸಿನವರಿಗೆ ದುಸ್ಸಾಧ್ಯ. ಸಣ್ಣ ವಯಸ್ಸಿನವರನ್ನು ನಿರೂಪಕರನ್ನಾಗಿ ಆರಿಸಿಕೊಂಡರೆ ನಡುವಯಸ್ಸಿನವರ ಅಭಿಮಾನಕ್ಕೆ ಧಕ್ಕೆಯುಂಟಾಗಬಹುದು. ಆದರೆ ಕೆಲವೊಂದು ವಿಷಯಗಳಲ್ಲಿ ಸಣ್ಣವಯಸ್ಸಿನ ನಿರೂಪಕರು ಹೆಚ್ಚು ಪ್ರಯೋಜನಕಾರಿಯಾಗುವುದುಂಟು. ಪ್ರಶ್ನೆಗಳ ಪುನರಾವರ್ತನೆಯಿಂದ ಅವರು ಬೇಸರಿಸಿಕೊಳ್ಳುವದಿಲ್ಲ; ಅನ್ವೇಷಕನಿಗೂ ಸಂಕೋಚವಾಗುವುದಿಲ್ಲ. ಜವಾಬ್ದಾರಿಗಳು ಅವರಿಗೆ ಕಡಿಮೆ ಇರುವುದರಿಂದ ಅವರು ಸುಲಭದಲ್ಲಿ ಸಿಗಬಲ್ಲರು.

ಮುದಿವಯಸ್ಸಿನವರಿಗೆ ಅನುಭವ ಹೆಚ್ಚು ಇರಬಹುದಾದರೂ ಅವರಿಗೆ ಇಳಿವಯಸ್ಸಿನ ತೊಂದರೆಗಳು ಅನೇಕ: ಕಿವಿ ಸರಿಯಾಗಿ ಕೇಳದಿರುವುದು, ಮಂದ ದೃಷ್ಟಿ, ಅನಾರೋಗ್ಯ, ಕೂತಲ್ಲಿಯೇ ನಿದ್ರೆಹೋಗುವುದು, ಏಕಾಗ್ರತೆಯಲ್ಲಿ ಬಹುಕಾಲ ಮುಂದುವರಿಯುವುದರಲ್ಲಿ ಅಸಹಾಯಕತೆ, ಗಟ್ಟಿಯಾಗಿ ಉಚ್ಚಾರ ಮಾಡಲು ಅಶಕ್ಯನಾಗಿರುವುದು ಮೊದಲಾದ ಹಲವಾರು ಊನಗಳು ಅವರಲ್ಲಿರುವುದು ಸಹಜ. ಆದ್ದರಿಂದ ಬಹುಮಟ್ಟಿಗೆ ಮಧ್ಯವಯಸ್ಕರನ್ನು (ಸು. ೩೦–೩೭ ವರ್ಷಗಳು) ನಿರೂಪಕರನ್ನಾಗಿ ಆರಿಸುವುದು ಒಳಿತು.

ವಯಸ್ಸಿನ ದೃಷ್ಟಿಯಿಂದ ನಿರೂಪಕರು ತರುಣರಿದ್ದರೆ ಒಳಿತಾದರೂ ಲೈಂಗಿಕ ದೃಷ್ಟಿಯಿಂದ ಅವರು ಗಂಡಸರಾದರೂ ಸರಿ; ಹೆಣ್ಣಾದರೂ ಸರಿಯೆ. ಹೆಣ್ಣುಗಳ

ಮಾತಿನಲ್ಲಿ ಹಳೆಯ ರೂಪಗಳು ಧಾರಾಳವಾಗಿ ಸಿಗುತ್ತವೆಂಬ ನಂಬಿಕೆ ಸದಾ ಸತ್ಯವಾಗಬೇಕಾಗಿಲ್ಲ. (Atwood, 1962: 118) ಎಂಬುದನ್ನೂ ಇಲ್ಲಿ ಗಮನಿಸಬೇಕು. ಹೆಚ್ಚಾಗಿ ಭಿನ್ನಲಿಂಗಿಗಳಿಗಿಂತ ಸ್ವಲಿಂಗಿ ನಿರೂಪಕರನ್ನು ನೇಮಿಸಿಕೊಳ್ಳುವುದು ಹೆಚ್ಚು ಅನುಕೂಲಕರ. ಎಷ್ಟೋ ಸಲ ಸ್ತ್ರೀಯರ ಸ್ವರ ಏರಿಳಿತಗಳು ಸೂಕ್ಷ್ಮವಾಗಿ ಭಿನ್ನಗೊಳ್ಳುತ್ತವೆ. ಅವನ್ನೆಲ್ಲ ನಮೂದಿಸಿಕೊಳ್ಳುವುದು ಕಷ್ಟಕರ. ಪ್ರಾರಂಭದಲ್ಲಿ ಇದರಿಂದಾಗಿಯೇ ಅನ್ವೇಷಕನು ತನ್ನ ಕೆಲಸದ ಬಗೆಗೆ ಹೆದರಿಕೊಳ್ಳುವ ಸಂಭವವಿರುತ್ತದೆ. ಕೆಲವೊಂದು ಜನಾಂಗಗಳಲ್ಲಿ ಪುರುಷರೊಂದಿಗೆ ಸ್ತ್ರೀಯರು ನೇರವಾಗಿ ಮಾತಾಡುವುದು ಕೂಡಾ ನಿಷಿದ್ಧ. ಅನ್ವೇಷಕನು ಸರಿಯಾಗಿ ಉಚ್ಚಾರವನ್ನು ತಿಳಿದುಕೊಳ್ಳಲು ನಿರೂಪಕನ/ಳ ಉಚ್ಚಾರಾಂಗಗಳ ಚಲನವಲನೆಯನ್ನು ಸೂಕ್ಷ್ಮವಾಗಿ ನೋಡಬೇಕಾಗುತ್ತದೆ. ಕೆಲವರು ಈ ಕ್ರಿಯೆಯನ್ನು ಅಪಾರ್ಥದಲ್ಲಿ ತಿಳಿದುಕೊಳ್ಳುವ ಸಂಭವವೂ ಇದೆ. ಸಂಸ್ಕೃತಿಯು ಅಂತೆಯೇ ದೇಹದ ಕೆಲವೊಂದು ಭಾಗಗಳನ್ನು ಕುರಿತು ವಿಭಿನ್ನಲಿಂಗಿಗಳು ಪರಸ್ಪರ ಮಾತನಾಡುವುದು ಕೆಲವೊಂದು ಸಮಾಜಗಳಲ್ಲಿ ನಿಷಿದ್ಧ (taboo). ಇವೇ ಮೊದಲಾದ ಕಾರಣಗಳಿಂದಾಗಿ ಅನಗತ್ಯವಾಗಿ ಅಭಿನ್ನಲಿಂಗಿ ನಿರೂಪಕರನ್ನು ಆರಿಸುವುದು ಸೂಕ್ತವಲ್ಲ.

ನಿರೂಪಕನು ನಿರರ್ಗಳವಾಗಿ ಮಾತನಾಡಬಲ್ಲವನಾಗಿರಬೇಕು. ಆತನ ಸಂಸ್ಕೃತಿಯ ವಿವಿಧ ಮುಖಗಳ ಸಾಕಷ್ಟು ಪರಿಚಯ ಆತನಿಗಿರಬೇಕು. ಆ ಸಮಾಜದ ಜನರ ದಿನನಿತ್ಯದ ಆಗುಹೋಗುಗಳನ್ನು ಜೀವನ ಮೌಲ್ಯಗಳನ್ನು ವಿವರಿಸುವಷ್ಟು ಬುದ್ಧಿವಂತಿಕೆ ಆತನಲ್ಲಿರಬೇಕು. ಮಂದ ನಿರೂಪಕನಿಂದ ದತ್ತ ಸಂಗ್ರಹ ಕಾರ್ಯಕ್ಕೆ ಹೇಳಲಾರದ ಹಾನಿಯಾದೀತು. ಆತನ ಬುದ್ಧಿಮಟ್ಟವನ್ನು ತಿಳಿದುಕೊಳ್ಳಲು ಆತನಿಗೆ ಹೂ, ಗಿಡಮರಬಳ್ಳಿ, ಪ್ರಾಣಿಪಕ್ಷಿ, ವಸತಿ ಉಡಿಗೆ ತೊಡಿಗೆ, ಅಂಗಾಂಗ, ದಿನನಿತ್ಯದ ಬಳಕೆಯ ವಸ್ತುಗಳು, ಪಾತ್ರೆಗಳು, ಸಾಮಾನುಗಳು, ಸಾಂಬಾರು ಜೀನಸು, ಹಣ್ಣುಹಂಪಲು, ಕಾಯಿಪಲ್ಯ, ಅಡುಗೆ ವೈವಿಧ್ಯ ಇತ್ಯಾದಿಗಳ ಹೆಸರುಗಳ ಪಟ್ಟಿಯನ್ನು ಮಾಡಲು ಹೇಳಬೇಕು. ಇವೆಲ್ಲವುಗಳನ್ನು ಗಮನಿಸಿ ನಿರೂಪಕನ ಅರ್ಹತೆಯನ್ನು ಅಳೆಯಬಹುದು. ಆತ ಸದಾ ಚುರುಕು ಸ್ವಭಾವದವನಾಗಿದ್ದು ಉತ್ಸಾಹಪೂರ್ಣನಾಗಿರಬೇಕು. ಸೋಮಾರಿತನ ಆತನಲ್ಲಿರಬಾರದು. ಕೆಲಸದವೇಳೆ, ಪ್ರಮಾಣ ಮುಂತಾದವುಗಳಲ್ಲಿ ಆತ ಬಹಳ ಪ್ರಾಮಾಣಿಕನಾಗಿರಬೇಕು.

ಎಲ್ಲ ಅರ್ಹತೆಗಳಿಗಿಂತಲೂ ಹೆಚ್ಚಾಗಿ ಭಾಷಿಕ ಅರ್ಹತೆಗಳು ನಿರೂಪಕನಲ್ಲಿರಬೇಕು. ಪ್ರಪ್ರಥಮತಹ ಭಾಷಾಕ್ಷೇತ್ರದ ಭಾಷೆ ಆತನಿಗೆ ಮಾತೃಭಾಷೆ/ಪ್ರಥಮ ಭಾಷೆಯಾಗಿರಬೇಕು. ಆತನ ಉಚ್ಚಾರ ಸುಸ್ಪಷ್ಟವಾಗಿರಬೇಕು. ಕಂಠ ಶುಭ್ರ

ವಾಗಿರಬೇಕು. ನಿರೂಪಕನು ತಕ್ಕಮಟ್ಟಿಗೆ ವಿಶ್ಲೇಷಣ ಶಕ್ತಿಯನ್ನು ಪಡೆದಿರಬೇಕು. ಆಗ ಆತ ಅನ್ವೇಷಕನಿಗೆ ಯೋಗ್ಯ ಸಲಹೆಗಾರನೂ ಆಗಬಲ್ಲ.

ಉತ್ತಮ ನಿರೂಪಕರು ಹುಟ್ಟುವುದಿಲ್ಲ; ಅವರನ್ನು ತರಬೇತಿಕೊಟ್ಟು ಸಿದ್ಧಗೊಳಿಸಬೇಕು. ಈ ಸಿದ್ಧತೆಯ ಸ್ವರೂಪ ವ್ಯಾಪ್ತಿಗಳು ನಿರೂಪಕ ಹಾಗೂ ಅನ್ವೇಷಕರ ಅರ್ಹತೆಯನ್ನು ಅವಲಂಬಿಸುತ್ತದೆ. ಭಾಷಾಧ್ಯಯನದ ಸ್ವರೂಪ, ಗುರಿ ಸಾಧನೆಗಳು, ಕೆಲಸದ ವೇಳೆ ಹಾಗೂ ಸ್ಥಳ, ಮಾಹಿತಿ ಕೊಡುವ ವಿಧಾನ, ಮಾಹಿತಿಯ-ಸ್ವರೂಪಲಕ್ಷಣ ಮೊದಲಾದವುಗಳ ಬಗೆಗಿನ ವಿವರ ಅನ್ವೇಷಕನು ನಿರೂಪಕನಿಗೆ ಗೊತ್ತು ಮಾಡಬೇಕು. ಒಟ್ಟಿನಲ್ಲಿ ಅನ್ವೇಷಕನ ವಿಚಾರಧಾರೆ ನಿರೂಪಕನು ತಿಳಿದುಕೊಳ್ಳಬೇಕು. ಭಾಷಾವಿಶ್ಲೇಷಣೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ನಿರೂಪಕರ ಜೊತೆಗೆ ಕೆಲವೊಮ್ಮೆ ಚರ್ಚಿಸಬಹುದಾದರೂ ಅವುಗಳಿಂದ ಆತನ ತಲೆಕೆಡಿಸಬೇಕಾಗಿಲ್ಲ. ಏಕೆಂದರೆ, ಭಾಷಾ ವಿಶ್ಲೇಷಣೆಯ ಪೂರ್ಣ ಜವಾಬ್ದಾರಿ ಭಾಷಾವಿಜ್ಞಾನಿದ್ದು, ನಿರೂಪಕನದ್ದಲ್ಲ.

ಸಾಮಾನ್ಯವಾಗಿ ನಿರೂಪಕನು ಅನ್ವೇಷಕನೊಂದಿಗೆ ಕೆಲಸ ಮಾಡುತ್ತಿರುವಾಗಲೇ ತರಬೇತಿ ಪಡೆದುಕೊಳ್ಳುತ್ತಾನೆ. ಆದರೂ ಪ್ರಾರಂಭದಲ್ಲಿ ಕೆಲವು ದಿನಗಳ ಸಾಮಾನ್ಯ ತರಬೇತಿ ಕೊಡುವುದು ಒಳ್ಳೆಯದು.

ಸಾಹಿತ್ಯ ಸೂಚಿ

ATWOOD, ELMER BAGBY. *The Regional Vocabulary of Texas* Austin : University of Texas Press, 1962.

BERREMAN, GERALD D. *Behind Many Marks :Ethnography and Impression Management in a Himalayan Village. Ithaca,* N. Y. : Society for Applied Anthropology, 1962.

GLEASON (JR.), H. A. *An Introduction to Descriptive Linguistics, Calcutta: Oxford & IBH Publishing Co., 1966.*

GOLDSTEIN, KENNETH S. A *Guide for Field Workers in Folklore*, Hatboro, Pa. ; Folklore Associates 1964.

KARPELES, MAUD and ARNOLD BAKE Associates *Manual for Folk Music Collectors*, London, 1957.

KURATH, HANS. *Handbook of the Linguistic Geography of New England.* Providence, R. I : Brown University, 1939.

Notes and Queries on Anthropolgy: 6th ed. Revised and Rewritten by a Committee of the Royal Anthropological Institute of Great Britain and Ireland, London, 1951

OSGOOD, CORNELIUS. *Ingalik Material Culture.* New Haven, Conn : Yale University Press, 1940.

PIDDINGTON, RALPH. *An Introduction to Social Anthropology*, 2Vols. Edinburgh 1950/57.

PIKE, EUNICE V. *Not Alone.* Chicago : Moody Press, 1956.

SAMARIN, WILLIAM J. *Field Linguistics: A Guide to Linguistic Field Work* New york : Holt Rinehart and Winston.

. UHLENBECH, E. M. "The study of the So-called Exotic Languages and General Linguistics" *Lingua*, 9. 417–34, 1960.

ಓಲೆಗರಿಯಲ್ಲಿ ದೊರೆತ
ವಿಘ್ನೇಶ್ವರ ಚೌಪದ ಹಾಗೂ ಕವಿ ಪರಿಚಯ

● ಶ್ರೀಧರ ಎಚ್. ಜಿ.

ಶರಣಾಜನ ಸರ್ವೇಶ ವಿಘ್ನೇಶ ತ್ರಾಹಿ
ಮರೆ ಹೊಕ್ಕವರ ಕಾಯುವ ದೇವೇಶ ತ್ರಾಹಿ ॥

ಶೇಷ ಭೂಷಣನೊಲುಮೆ ನಿಮಗಾಗಿ ಬಾಳಿ
ಕೇಶವನ ಸೌಭಾಗ್ಯ ಸಿಂಪದವ ತಾಳಿ |
ದೇಶದೊಳಗುಳ್ಳ ಜಾಣಂಗೆಲ್ಲ ಹೇಳಿ
ಲೇಸಹುದು ಗಣಪತಿಯ ಚೌಪದನ ಕೇಳಿ ॥೧॥

ರನ್ನ ಕೆತ್ತಿಸಿದ ಮಂಟಪದ ಕಂಬಗಳಾ
ಹೊನ್ನ ಗೋಪುರದ ಪ್ರಭೆಯೆತ್ತಿ ಕಳಸಗಳಾ |
ತನ್ನ ಪ್ರತಿಬಿಂಬೆಸೆವ ವಜ್ರಭಿತ್ತಿಗಳಾ
ಹೊನ್ನಿನಾಲಯದಿಂದೆಸೆವ ಪೌಳಿಗಳಾ ॥೨॥

ಗಗನ ಗಂಗೆಜಲದಿ ಮಜ್ಜನವ ಮಾಡಿ
ಝಗ ಝಗಿಸುವಾಭರಣ ವಸ್ತ್ರಗಳ ಸೂಡಿ
ಅಗಿಲಃ ಚಂದನ ಗಂಧಲೇಪನವ ಮಾಡಿ
ನಗುಮುಖದ ಗಣಪಯನು ಎಸೆದಿಹ ಪರಿಯನೋಡಿ॥೩॥

ಸುರಿಗೆಶಾವಂತಿಗೆ ಮಲ್ಲಿಗೆ ಮೊಲ್ಲೆಗಳನು
ಮರುಗ ಮುಡಿವಾಳ ಪಚ್ಚೆಯದ ತೆನೆಗಳನು
ಕರಿಕೆ ಮೊದಲಾದ ಬಿಲ್ವ ಪತ್ರೆಯನು
ತರತರದಲರ್ಪಿಸುವೆ ನಿಮ್ಮ ಪೂಜೆಯನು ॥೪॥

ಉಭಯ ಪಕ್ಕದಲಿ ಪ್ರಜ್ವಲಿಸುವ ದೀಪಗಳಾ
ಶುಭದೀಪ ಧೂಪವಾಸನೆಯ ಕಂಪುಗಳಾ
ರಭಸದಿಂ ಭೋರಿಡುವ ವಾದ್ಯ ಶಬ್ದಗಳಾ
ಅಭಯ ಕರದಲಿ ಕೊಡುವ ಕುಸುಮದಿಂಡುಗಳಾ ॥೫॥

ನೆನಗಡಲೆ ಮಾವಿನ ಹಣ್ಣುರಸಧಾಳಿ
ಹಲಸು ದಾಳಿಂಬ ತೆಂಗಿನಕಾಯಿ ಫಲ ಕದಳಿ

ಚಿನಿಪಾಲು ಮೊದಲಾದ ಕರ್ಬೂಜವ ಸೀಳಿ
ಮನವೊಲಿದು ನೈವೇಧ್ಯ ನೀಡುವ ಭಕ್ತಾಳಿ ॥೬॥

ತರಗು ಚಕ್ಕುಲಿ ಕರಚಿಕಾಯಿ ಲೋಲಾಡಿ
ಸುಲಿದ ಸೂಸಲು ಲಡ್ಡಿಗೆಯ ಕೈನೀಡಿ
ಪರಿಕರಂಗಳನ್ನೆಲ್ಲ ಬೇಗ ಸವಿನೋಡಿ
ಚರಣ ಕಮಲಕೆ ಎರಗುವೆನು ಕೃಪೆಮಾಡಿ ॥೭॥

ಕೆಂಡಸಕ್ಕರೆ ಛತ್ರ ಕಜ್ಜಾಯಗಳನು
ಉಂಡಲಿಗೆ ಮೋದಕವು ಕಾಯ ಕಡುಬುಗಳು
ಮಂಡಿಸಿದ ಶಾಲ್ಯಾನ್ನಗೃತ ಶಾಬಗಳನು
ಉಂಡು ಸಂತೋಷದಲಿ ಕೊಡುವ ವರಗಳನು ॥೮॥

ಕರಿಮುಖನೆ ಕಾಳಿಯ ಅರಸುಕುಮಾರ
ಚರಣ ದಂದುಗೆ ಗೆಜ್ಜೆ ಘಲಿರೆಂಬ ಧೀರ
ತರಣಿ ಶತಕೋಟಿ ತೇಜಂಗೈವ ತಾರ
ಪರುಷಧರ ಹರಳ ಏಕದಂತ ಗಂಭೀರ ॥೯॥

ಬಾಲಶಶಿ ಮರುಳಿ ಉದರದ ಫಣಿಯರಾಜ
ಸಾಲು ಮಣಿಗಳಲೆಸೆವ ಮುಕುಟದ ತೇಜ
ಬಾಳ ಸಿಂಧೂರ ಲೇಪನದ ಸುರಭೋಜ
ಪಾಲಿಸೈಮತಿಯ ಭಕ್ತರಿಗೆ ಗಣರಾಜ ॥೧೦॥

ಈ ಪರಿಯಃ ಷೋಡಶ ಉಪಚಾರಗಳ ಮಾಡಿ
ಧೂಪ ದೀಪಾರುತಿಯನೆತ್ತುತಿಹ ರೂಢಿ
ಭಾಪುರಗ ಸಂಹರಣನೆಂದು ಕೊಂಡಾಡಿ
ಈ ಪರಿಯ ಭಕ್ತಿರಸದೊಳಗೆ ಮುಳುಗಾಡಿ ॥೧೧॥

ಭೃಂಗ ಕುಂತಳದ ಬಡನಡುವಿನಬಲೆಯರು
ಪೊಂಗಳಸ ಕುಚದ ಸುಲಿಪಲ್ಲ ಜಾಣೆಯರು
ಶೃಂಗರಿಸಿ ರತ್ನ ತಳಿಗೆಗಳ ಪಿಡಿದಿಹರು
ಮಂಗಳಾರುತಿಯನು ಬೆಳಗಿಸಿ ಪಾಡುವರು ॥೧೨॥

ವಿದ್ಯೆಗಧಿಪತಿ ವೇದಶಾಸ್ತ್ರ ಸಂಪನ್ನ
ಮುದ್ದು ಶಂಕರನಣುಗ ಮೂಷಿಕವಾಹನ
ತಿದ್ದೆನ್ನ ಮಂದಮತಿಯನು ಸುಪ್ರಸನ್ನ
ಉದ್ಧರಿಸು ವಿಘ್ನೇಶ ನಂಬಿದನೊ ನಿನ್ನ ॥೧೩॥

ವರಭಾದ್ರಪದ ಶುದ್ಧ ಶುಕ್ಲಪಕ್ಷದ ಚೌತಿಯಲ್ಲಿ
ಸುರನರ ನಾಗಲೋಕದ ಅರಮನೆಗಳಲ್ಲಿ
ಹರಿಹರ ಬ್ರಹ್ಮಗೊಲಿದವ ಕರುಣದಲ್ಲಿ
ಸುರರೊಲಿದು ಮೆರೆದರು ವಿಘ್ನೇಶನೊಲುಮೆಯಲ್ಲಿ ॥೧೪॥

ಬನ್ನಿ ನೋಡುವ ನಮಿಸಿ ಸಡಗರವ
ಚನ್ನ ಗಣಪತಿಯು ಒಲಿದೀವ ವರವ ॥೧೫॥

ಕುರುಹಿಂದ ಕಂಬ ಬೋಧಿಗೆ ಇಂದ್ರನೀಲ
ಮರಕತದ ತೊಲೆ ಪರುಳಿ ಜಂತಿ ಬಹುಕುಶಲ
ವರರತ್ನ ಬೆಲಿಗೆ ವೈಡೂರ್ಯ ವಿಧಿಶಾಲ
ಸಿರಿವಜ್ರ ಭಿತ್ತಿ ಚಿತ್ರದಾಶಾಖಿಲ ॥೧೬॥

ಗೋಮಿ ಧನಿಕಟ್ಟು ಪುಷ್ಯರಾಗಗಳು
ನೇಮದ ಲೋಹ ಮೌಕ್ತಿಕದ ಕುರುಜುಗಳು
ಆ ಮಹಾಮಕರ ತೋರಣ ಕುರುಜುಗಳು
ಹೇಮಕಳಶವನಿಟ್ಟು ಮೆರೆವ ಪ್ರವೇಣಿಗಳು ॥೧೭॥

ಸಾಧು ಕಸ್ತೂರಿ ಪುಣುಗು ಸಾರಣೆಗಳಿಂದಾ
ಮೇದಿನಿಯು ದಳಿಯು ಪನ್ನೀರು ಶ್ರೀಗಂಧಾ
ಬೀದಿ ಬಿತ್ತಿಗೆ ಚಾರು ಕುಂಕುಮವು ಛಂದಾ ॥೧೮॥

ಎಸೆವ ಮಣಿಗೃಹದೊಳಗೆ ಹೊಸಪಟ್ಟವಳಿಯ
ಕುಶಲ ಮೇಲ್ಕಟ್ಟು ಸಂಧರದ ಕಟ್ಟಳಿಯ
ದೆಸೆ ದೆಸೆಯಲ್ಲಿ ರಾಜಿಪ ಪ್ರಭಾವಳಿಯ
ಹೊಸ ಹೊನ್ನ ಗಂಟೆ ಘಳಿಲ್ಲೆಂಬ ಸರಪಣಿಯ ॥೧೯॥

ಆರಣೆಯ ಮಾಸದಲಿ ವರಚೌತಿಯಂದು
ಭೋರೆಂದು ಬಂದ ಮಣಿ ಮಂಟಪದೊಳಿಂದು
ಭೇರಿ ಮುರುಧಾಂಗ ದುಂದುಭಿ ಶಂಖ ಮುಂದು
ಭೋರಿಡುವ ಕಹಳೆ ಕುಶಲಗಳು ಒಂದೊಂದು ॥೨೦॥

ಪರಿಪರಿಯ ಸುಗಂಧವನೆಲ್ಲ ಸೂಡಿ
ಹರುಷದಲಿ ಗಣಪಗೆ ಲೇಪವನು ಮಾಡಿ
ಮೆರೆವ ಧವಳಾಕ್ಷತೆಯ ಹಣೆಗಿಟ್ಟು ನೋಡಿ
ಅರುಹಿಂದ ಕುಸುಮ ಸರಗಳ ತಂದು ಸೂಡಿ ॥೨೧॥

ಬೇಡಿದವರಿಗೆ ಬೇಡಿದಪ್ಪವರ ಮತಿಯು
ಈಡಾಡಿ ಕೊಡುವ ನಿಸ್ವಾನದುನ್ನತಿಯು
ಹಾಡಿ ಹೊಗಳುವ ವೇಧಶಾಸ್ತ್ರ ಸಂಗತಿಯು
ನೋಡೋಣ ಬನ್ನಿ ವಿಘ್ನೇಶ ಭೂಪತಿಯು ॥೨೨॥

ಕರಗು ಚಕ್ಕುಲಿ ದೋಸವಿನಿ ವೆಣ್ಣ್ಣಿನೂರೆ
ಸುರಿದ ಉಂಡುಲ್ಲಿಗೆ ರಾಸಿಯದೊಂದು ಬೀರೆ
ಮೆರೆವ ಹೊಳೆಲೆ ಸುಣ್ಣ ಕಪ್ಪುರದ ಚೂರೆ
ವರ ಮೂಷಕದ ಬೆಲ್ಲ ಸೂಸಲದೊಂದು ಬೀರೆ ॥೨೩॥

ನಿಂಬೆ ದಾಳಿಂಬ ಹಿರಳಿಯು ಖರ್ಜೂರ
ಇಂಬುಳ್ಳ ಫಲವಸು ತೆಂಗು ಶೃಂಗಾರ
ಸಂಭ್ರಮದ ಕದಲಿಗೊನೆ ಕಬ್ಬು ವಿಸ್ತಾರ
ಜಂಬು ನೇರಲು ರುದ್ರಾಕ್ಷಿ ಕಡಲೆ ಮನೋಹರ ॥೨೪॥

ಇಂತು ಸಂಭ್ರಮಗಳನು ಸಂತೋಷದಿಂದ
ಭ್ರಾಂತಿಯಲಿ ನೋಡಿ ತೆಗೆದನು ಸೊಂಡಿಲಿಂದ
ದಂತದಲಿ ಜಗಿಜಗಿದು ನುಂಗಿದಾನೊಂದ
ಸಂತೋಷ ಹಚ್ಚಮನದ ಹರುಷದಿಂದ ॥೨೫॥

ಸಡಗರವ ಪೇಳಲಳವಲ್ಲ ಮಾಣೆಯರಾ
ಉಡಿಗೆ ಘನ ದುಕೂಲವುನ್ನತದ ವಿಸ್ತಾರಾ
ಕಡಿರಮ್ಯ ಕಾಣಿಸುವ ಸೊಬಗು ಶೃಂಗಾರಾ
ಜಡಿವ ಆಭರಣವೊಂದೊಂದು ಅಪೂರಾ ॥ ೨೬ ॥

ನೀಲಪರೋಜಿ ಮಾಣಿಕ ಪುಷ್ಯರಾಗ
ಮೇಲಾದ ವಜ್ರ ವೈಡೂರ್ಯಗಳು ಈಗ
ಕೀಲಿಸಿದ ಘಂಟೆ ಚೌಕುಳಿ ಘಣೆಯು ಬೇಗ
ಬಾಲಕರು ಇಟ್ಟು ರಾಜಿಸಕುಶಲಭೋಗ ॥೨೭॥

ಕೆಳದಿಯು ಕೇರಿಕೇರಿಯಲಿರುವ ಮಾನಿನಿಯರು
ಬಹಳ ಹರುಷದಲಿ ಮಜ್ಜನವ ಮಾಡುವರು
ಬೆಳಗ್ಗೆ ಘನ ದುಕೂಲ ಮೆದುಬಟ್ಟೆಯುಟ್ಟವರು
ಜೋಳಿಯನು ತೊಟ್ಟು ತೊಡಿಗೆಗಳನುಟ್ಟವರು ॥೨೮॥

ಈರ ಮುದ್ರಿಕೆಯ ಕಾಲ ಕಡೆಯಲಿಟ್ಟವರು
ಭೋರೆಂಬ ಗೆಜ್ಜೆ ಅಂದಿಗೆಯನು ಇಟ್ಟವರು

ರನ್ನ ದೊಡ್ಯಾಣವನು ಕಟ್ಟಿಗೆ ಇಟ್ಟವರು
ಉನ್ನತದ ತೋಳ ಭಾವುರಿಯ ನಿಟ್ಟವರು ॥ ೨೯ ॥

ಹವಳದ ಸರ ಚೈನಾಲಿಗೆ ಚಿನ್ನ ಸರವು
ಗೌಳಸರ ಘನ ಕುಶಲ ಪಂಡೆದ ಸರವು
ನವರತ್ನ ಸೇರಿಸಿದ ಹೊಂಬಾಳೆ ಸರವು
ಜವಳಿ ವೊಲೆಗಳ ಮೇಲೆ ಮೌಕ್ತಿಕದ ಸರವು ॥ ೩೦ ॥

ಪಂಚ ಸರ ಪದಕ ಪೆಟ್ಟಿಗೆ ಕಂಠಮಾಲೆ
ಅಂಚು ಅಂಚಿಗೆ ಹರಳು ಸಿಗಿಸಿದ ವಾಲೆ
ಕೆಂಚೆಯರು ಇಟ್ಟು ಬರುವುದ ನೋಡು ಬಾಲೆ ॥ ೩೧ ॥

ಮಿಸುನಿಯ ಚಿನ್ನಕ್ಕೆ ಹಸುರ ಹಳದಿಗಳು
ಕುಶಲದಲ್ಲಿ ಕೀಲಿಸಿದ ಹೊಸ ಮೌಕ್ತಿಕದ ಮೇಲೆ
ಬಸಿದ ಕುಂಕುಮವಿಟ್ಟು ಬರುವ ಹೆಣ್ಣುಗಳು ॥ ೩೨ ॥

ಅಡಿಯಡಿಗೆ ನಿಂದು ಪಾತ್ರಗಳನಾಡಿಸುತಾ
ಕಡಿ ಸೊಬಗು ತಂತಿವಾದ್ಯಗಳ ಬಾರಿಸುತಾ
ಬಡಿವಾರ ಮಾಡಿ ಮೋಹರಿಯನು ನುಡಿಸುತಾ
ಬರುತಿರ್ದರು ರಾಜಬೀದಿಯೊಳರ್ದಿ ಜಡುತಾ ॥ ೩೩ ॥

ಕವಿಯ ಪರಿಚಯ

ಓಲೆಗರಿಯಲ್ಲಿ ದೊರೆತ ಈ ವಿಘ್ನೇಶ್ವರ ಚೌಪದಗಳನ್ನು "ಹುರುಳಿ ಸೆನಬೋವ ಗಿರಿಯಪ್ಪಯ್ಯಗಳ ಮಗ ಕೆಂಚಣ್ಣನು ಶಿರವಂತೆ ಪೇಟೆಯ ಅಂಗಡಿಯ ನರಸಪ್ಪ, ಅವರ ಸ್ತ್ರಿಯರು ರಂಗಮ್ಮ, ಇವರ ಕುಮಾರ ನಾರಾಯಣಗೆ ವಿದ್ಯಾಭ್ಯಾಸವ ಮಾಡಿಸಿ ಓದಿಸಲೆಂದು ಬರೆದಿರುವನು" "ಇದನ್ನು ದುಂದುಭಿ ಸಂವತ್ಸರದ ಚೈತ್ರ ಬ ೧೩ ಕ್ಕೆ ಬರೆಯಲು ಪ್ರಾರಂಭಿಸಿದಂತೆ" ತಿಳಿಸಿರುವನು. ಯಾವ ದುಂದುಭಿ ಸಂವತ್ಸರವೆಂದು ಖಚಿತವಾಗಿ ತಿಳಿಸಿಲ್ಲ. ಆದರೆ ಈತ ಲಕ್ಷ್ಮೀಶನ ಜೈಮಿನಿ ಭಾರತದ ಕೆಲವು ಸಂಧಿಗಳನ್ನು, ವಿದ್ಯಾಭ್ಯಾಸ ಮಾಡಿಸಲೆಂದು ಪ್ರತಿ ಮಾಡಿರುವುದರಿಂದ, ಲಕ್ಷ್ಮೀಶನ ನಂತರದವನು, ಪುರಂದರದಾಸರ ಹಾಗೂ ಕನಕದಾಸರ ಕೆಲವು ಕೀರ್ತನೆಗಳನ್ನು ಪ್ರತಿಮಾಡಿದ್ದರಿಂದ ಅವರಿಗಿಂತ ಈಚಿನವನು ಎಂದು ಖಚಿತವಾಗಿ ಹೇಳಬಹುದು. ವೈಷ್ಣವ ಮತದ ಅನುಯಾಯಿ. ಸುಮಾರು ೧೬೦೦ ರ ರ ಸಮಯದಲ್ಲಿದ್ದವನೆಂದು ಊಹಿಸಬಹುದು.

ಈತನ ಮೂಲಸ್ಥಳ ಸಾಗರ ತಾಲೂಕಿನ ಕಟೂರು ಹೋಬಳಿಯಲ್ಲಿರುವ ಹುರುಳಿ ಎಂಬ ಗ್ರಾಮ. ಇದು ಸಾಗರದಿಂದ ಸುಮಾರು ೩೫ ಮೈಲಿ ದೂರದಲ್ಲಿದೆ

ತಂದೆಯು ಶಿರವಂತೆಯಲ್ಲಿ ಶಾನುಭೋಗರಾಗಿದ್ದು ಜೊತೆಗೆ ಪಾಠ ಹೇಳುವ "ಅಯ್ಯ" ನವರೂ ಆಗಿದ್ದಿರಬೇಕು. 'ಗಿರಿಯಪ್ಪಯ್ಯ' ಎಂಬಲ್ಲಿ ಇದೇ ಸೂಚನೆ ಇದೆ. ಜೊತೆಗೆ ಕೆಂಚಣ್ಣನು ವಿದ್ಯಾಭ್ಯಾಸ ಮಾಡಿಸಲೆಂದೇ ಈ ಚೌಪದವನ್ನು ಬರೆದಿರುವದು ಈ ಮಾತಿಗೆ ಪುಷ್ಟಿ ನೀಡುತ್ತದೆ. ತಂದೆಯ ಅನಂತರ ಶಾನುಭೋಗ ವೃತ್ತಿಯನ್ನವಲಂಬಿಸಿ ಶಿರವಂತೆಯಲ್ಲಿ ಈತ ಬಹುಕಾಲ ಬದುಕಿರಬೇಕು. ಆದ್ದರಿಂದಲೇ ಶಿರವಂತೆಯಲ್ಲಿರುವ ಶ್ರೀ ವಿಘ್ನೇಶ್ವರ, ವೆಂಕಟೇಶ್ವರ, ವೀರಭದ್ರ ಹಾಗೂ ತ್ರಿಪುರಾಂತಕೇಶ್ವರ ದೇವರುಗಳನ್ನು ಸ್ಮರಿಸಿರುವನು. ಇಂದು ಶಿರವಂತೆಯು ಸಾಗರ–ಜೋಗ ರಸ್ತೆಯಲ್ಲಿ, ಸಾಗರದಿಂದ ಐದು ಮೈಲಿ ದೂರದಲ್ಲಿದೆ.

ರಾಗವಾಗಿ ಹಾಡುವುದಕ್ಕೆ ಅನುಕೂಲವಾಗಿರುವ ಆದಿ ಅಂತ್ಯ ಪ್ರಾಸಗಳಿರುವ ಈ ಚೌಪದಗಳಲ್ಲಿ ಕೆಂಚಣ್ಣನು ಉಲ್ಲೇಖಿಸಿದ ಬಗೆ ಬಗೆಯ ಹಣ್ಣು ಆಭರಣಗಳು ಗಮನಾರ್ಹವಾದವು. ಅವುಗಳಲ್ಲಿ ಕೆಲವು:

ಚಿನಿಪಾಲು—ಮದ್ದಲಸಿನ ಕಾಯಿ

ಹಿರಳೆ—ಹಿಪ್ಪು ನೇರಳೆ ಹಣ್ಣು

ಈರ ಮುದ್ರಿಕೆ—ಕಾಲಿನ ಮಧ್ಯದ ಬೆರಳಿಗೆ ಹಾಕುವ ಕಾಲುಂಗರದಂತಿರುವ ಗೆಜ್ಜೆಯಿರುವ ಆಭರಣ ಇದಕ್ಕೆ ಪಿಲ್ಲಿ ಎನ್ನುತ್ತಾರೆ. ಸ್ತ್ರೀಯು ವಿವಾಹವಾಗಿ ಗೃಹ ಪ್ರವೇಶ ಮಾಡುವಾಗ ಹೊಸ್ತಿಲು ದಾಟುವ ಸಂದರ್ಭದಲ್ಲಿ ಇದನ್ನು ವರನ ಕಡೆಯವರು ಕೊಡುವರು. ವಿಶೇಷವಾಗಿ ವಿವಾಹವಾದವರು ಮಾತ್ರ ಇದನ್ನು ಹಾಕಿಕೊಳ್ಳುವರು.

ಗೌಳಸರ—ಕುತ್ತಿಗೆಗೆ ಹಾಕುವ ನೆಲ್ಲಿಕಾಯಿಸರ ಅಥವಾ ಹವಳದ ಸರ.

ಪಂಡೆದ ಸರ—ಕುತ್ತಿಗೆಗೆ ಹಾಕುವ ಬಂಧಿಸರ.

ಹೊಂಬಾಳೆ ಸರ—ಹೊನ್ನಿನ ಬಳೆ ಕೈಗೆ ಹಾಕುವ ಆಭರಣ.

ತೋಳಬಾಪುರಿ—ತೋಳಿಗೆ ಹಾಕುವ ನಾಗಮುರಿ ಅಥವಾ ವಂಕಿ ಆಭರಣ.

ಜೈನಾಲಿಗೆ—ಚೈನುಸರ.

ಮೊಹರಿ—ತಂಬೂರಿಯಂತಿರುವ ವಾದ್ಯ.

ಇದೇ ರೀತಿ ಪುರುಷರ ಉಡಿಗೆ ತೊಡಿಗೆ ಆಭರಣಗಳನ್ನು ಕೆಂಚಣ್ಣ ಉಲ್ಲೇಖಿಸಿ ಸಿದ್ದರೆ ಸೊಗಸಾಗಿರುತ್ತಿತ್ತು.

ಹಳಗನ್ನಡ ಸಾಹಿತ್ಯದಲ್ಲಿ ಯುವ ಪಾತ್ರ ಚಿತ್ರಣ

● ಎ. ಮುರಿಗೆಪ್ಪ

ಆಗಿನ ಕವಿಗಳು ರಾಜಾಶ್ರಯವನ್ನು ಪಡೆದದ್ದರಿಂದ ಆಗಿನ ಸಾಹಿತ್ಯ ರಾಜಾಶ್ರಿತ ಸಾಹಿತ್ಯವಾಗಿ ಹಳಗನ್ನಡ ಸಾಹಿತ್ಯ ಅರಸರ ಕೃಪೆಯಿಂದ ಅರಸರಿಗಾಗಿ ನಿರ್ಮಿತವಾದ ಸಾಹಿತ್ಯವಾಗಿತ್ತು. ಅರಸನೆಂದರೆ ಧರ್ಮರಕ್ಷಕ, ಭೂಪಾಲಕ ಮತ್ತು ಪ್ರಜಾಪಾಲಕ ಎಂಬ ನಂಬಿಕೆಗಳೇ ಕಾರಣವಾಗಿ ಈ ಕೃತಿಗಳು ಐತಿಹಾಸಿಕ ಅಂಶವುಳ್ಳ ಪೌರಾಣಿಕ ಗ್ರಂಥಗಳಾಗಿವೆ ಹಾಗೂ ಧರ್ಮದ ಗಾಢಛಾಯೆಯ ಜೀವನ ಕ್ರಮದಿಂದಾಗಿ ಧಾರ್ಮಿಕ ಗ್ರಂಥಗಳಾಗಿ ಇರುವುದರಿಂದ ಈ ಕೃತಿಗಳ ವಸ್ತು ಒಂದು ಧರ್ಮ ಪ್ರಚಾರವಾಗಿರುತ್ತದೆ. ಅಥವಾ ಅಮಾನುಷ ಗುಣಗಳುಳ್ಳ ಪುರಾಣವೂ ಆಗಿರುತ್ತದೆ. ಹೀಗಾಗಿ ಇಲ್ಲಿನ ಪಾತ್ರಗಳು ಸಾಮಾನ್ಯವಸ್ತು, ಘಟನೆ ವ್ಯಕ್ತಿಗಳಿಂದ ಸಿಡಿದು ಧಾರ್ಮಿಕ, ಉದಾತ್ತ, ಗಂಭೀರ ವ್ಯಕ್ತಿಚಿತ್ರಣವಾಗಿದ್ದು ಬೋಧನಾ ಪ್ರಧಾನ ವಸ್ತುವಿನಿಂದ ತುಂಬಿರುತ್ತದೆ. ಇಲ್ಲಿಯ ಯುವ ಪಾತ್ರ ಚಿತ್ರಣವೆಂದಾಗ ಆದರ್ಶಗಳ ಸಂಕೀರ್ಣತೆಯೋ ಆಗಿರುತ್ತದೆ; ಅಪೇಕ್ಷಿತ ಅನುಕರಣೀಯ ವ್ಯಕ್ತಿ ಚಿತ್ರಣವಾಗಿರುತ್ತದೆ ಅಥವಾ ಇದಕ್ಕೆ ವಿರುದ್ಧವಾಗಿ ಅನಪೇಕ್ಷಿತ ಸಮಾಜ ಕಂಟಕಗಳ ಆಗರವೇ ಆಗಿರುತ್ತದೆ. ಸಕಲಗುಣ ಸಂಪನ್ನ, ಸಧೃಢ, ಸದಾಚಾರದಿಂದ ಕೂಡಿದ ಉಚ್ಚಶೀಲದ, ಉಚ್ಚ ಸಂಸ್ಕೃತಿಯ, ಕಲ್ಪನೆಯ ಸಾಕಾರ ಇದಾದ ಕಾರಣ ಆ ವಯಸ್ಸಿನ ಸಹಜಭಾವನೆಗಳಾಗಲಿ, ಆಚಾರ-ವಿಚಾರ-ಕಾಮನೆಗಳಿಗಾಗಲಿ ಇಲ್ಲಿ ಅವಕಾಶ ಕಡಿಮೆ. ರಾಜಕುಮಾರನ ಶೌರ್ಯ-ವೀರಗಾತೆಯೋ ಹೆಚ್ಚಿನ ಲೌಕಿಕ ಗ್ರಂಥಗಳಲ್ಲಿ ಕಂಡುಬರುತ್ತದೆ. ಆತನ ಶರೀರ, ಉಡಿಗೆ—ತೊಡಿಗೆ, ಶಸ್ತ್ರನೈಪುಣ್ಯತೆ, ಶಾಸ್ತ್ರಪಾರಂಗತತೆ, ದಿಗ್ವಿಜಯ ಇತ್ಯಾದಿ ವಿವರಣೆಗಳು ತುಂಬಿರುತ್ತವೆ. ಸ್ತ್ರೀಪಾತ್ರವಾದರೆ ಅವಳ ಸೌಂದರ್ಯ, ವಿದ್ಯೆ ಇತ್ಯಾದಿಗಳ ಹೆಗ್ಗಳಿಕೆಯೋ ಈ ಕೃತಿಗಳಲ್ಲಿ ಕಂಡುಬರುತ್ತದೆ. ಮೋಕ್ಷಸಾಧನೆಗಾಗಿ ಬೇಕು ಬೇಡಗಳ ತಕ್ಕಡಿಯಲ್ಲಿ ತೂಗಲ್ಪಡುವ ಸಾಮಗ್ರಿ ಧಾರ್ಮಿಕ ಗ್ರಂಥಗಳ ವಸ್ತುವಾಗಿರುತ್ತದೆ.

ಈಗಿನ ಸಾಹಿತ್ಯದಂತೆ ಯಾವುದೇ ವ್ಯಕ್ತಿಯನ್ನು ಅಥವ ಘಟನೆಯನ್ನು ವಾಸ್ತವಿಕವಾಗಿ ಚಿತ್ರಿಸದೆ ಮುಖ್ಯಪಾತ್ರದ ಗರಿಷ್ಟ ಅಂಶಗಳನ್ನು ಪಟ್ಟಿಮಾಡುವುದು. ಅದಕ್ಕೆ ಅನುಕೂಲವಾಗುವಂತೆ ಪಾತ್ರ ನಿರ್ಮಾಣ ಸಂಪ್ರದಾಯವಾಗಿ

ಈ ಕೃತಿಗಳಲ್ಲಿ ಮೂಡಿ ಬರುತ್ತದೆ. ಈ ದೃಷ್ಟಿಯಿಂದಾಗಿ ಈ ಕೃತಿಗಳ ಯುವ ಪಾತ್ರಗಳು ಆರೋಗ್ಯಕರ ವಾತಾವರಣವನ್ನು ನಿರ್ಮಿಸಬಹುದಾದ ಕೆಲವೊಂದು ಆದರ್ಶಗುಣಗಳನ್ನು ಸಾಕಾರಗೊಳಿಸುವ ಆದರ್ಶ ಪಾತ್ರಚಿತ್ರಣವಾಗಿ ಮೂಡಿ ಬರುತ್ತದೆ.

ಹಳಗನ್ನಡ ಸಾಹಿತ್ಯಕಾರರಲ್ಲಿ ಜೈನರೇ ಹೆಚ್ಚುಮಂದಿ. ಜೈನಕೃತಿಗಳೇ ಈ ಸಮಯದಲ್ಲಿ ಹೆಚ್ಚಾಗಿ ಬಂದವು. ಕನ್ನಡ ಸಾಹಿತ್ಯದ ಮೊದಲ ಗದ್ಯಕೃತಿ 'ವಡ್ಡಾರಾಧನೆ' ಒಂದು ಜೈನಗ್ರಂಥ. ಇದರಂತೆ ಪಂಪಭಾರತ, ಶಾಂತಿಪುರಾಣ ನೇಮಿನಾಥ ಪುರಾಣ, ಚಾವುಂಡರಾಯಪುರಾಣ, ಯಶೋಧರ ಚರಿತೆ, ಕಾದಂಬರಿ, ಜೈನರಾಮಾಯಣ ಇತ್ಯಾದಿ ಕೃತಿಗಳು ಸಹ ಜೈನಕೃತಿಗಳೇ. ಜೈನಕೃತಿಗಳ ಅಂತಿಮ ಗುರಿ ಮೋಕ್ಷ ಸಾಧನೆ. ಈ ಸಾಧನೆಗೆ ಕೇವಲ ಒಂದೇ ಜನುಮ ಸಾಲದು. ಭವಾವಳಿಗಳ ಸಾಲೇ ಬೇಕಾಗುತ್ತದೆ ಪ್ರತಿಯೊಂದು ಜೀವಕ್ಕೆ. ಪ್ರತಿಜೀವವೂ ತನ್ನ ಜೀವದ ಮೊದಲ ಹಂತದಲ್ಲಿ ಭೋಗಜೀವಿ. ಸಕಲ ಸುಖಗಳನ್ನು ಈ ಜೀವ ಅನುಭವಿಸುತ್ತದೆ. ಆಕಸ್ಮಿಕವಾಗಿ ವೈರಾಗ್ಯವನ್ನು ತಾಳುತ್ತದೆ. ಈ ಆಕಸ್ಮಿಕ ಘಟನೆಗಳು ಪೂರ್ವನಿರ್ಧರಿತವಾಗಿರಬಹುದು. ಈ ಕಾವ್ಯಗಳ ಯುವಪಾತ್ರ ಚಿತ್ರಣವೆಂದರೆ ಒಂದು ಪಾತ್ರದ ಸುಖಜೀವನದ ಚಿತ್ರಣ. ಅಥವಾ ಭೋಗಜೀವನದ ಚಿತ್ರಣ. ವಡ್ಡಾರಾಧನೆಯಲ್ಲಿ ಕೆಲಪಾತ್ರಗಳು ಭೋಗಜೀವನವನ್ನನುಭವಿಸಿ ಮುಂದಿನ ಜೀವನಕ್ಕೆ ಕಾಲಿಟ್ಟರೆ ಕೆಲಪಾತ್ರಗಳು ಈ ಗಡುವಿನಿಂದ ಒಮ್ಮೆಲೆ ಹಾರಿ ಹುಟ್ಟುತ್ತಲೆ ಕೊನೆಯ ಹಂತವನ್ನು ತಲಪುತ್ತವೆ. ಉದಾಹರಣೆಗೆ ಸಾಗರದತ್ತನೆಂಬೊಂ ಸೆಟ್ಟಿಯಾತನ ಭಾರ್ಯೆ ಸುಭದ್ರೆಯೆಂಬೂಳಾಯಿರ್ವರ್ಗಳಂ ಮಗಳು ಸುರುಪೆಯೆಂಬೊಳ್. ಮತ್ತಾ ಪೊಟಿಲೋಳ್ ಪೆಜನೋರ್ವಂ ಸೆಟ್ಟಿ ನಾಗದತ್ತನೆಂಬನಾತಂಗೆ ಸುರುಪೆಯಂ ಕೊಟ್ಟೊಡಾಯಿರ್ವರ್ಗಂ ಸುಕೇಶಿಯೆಂಬ ಮಗಳಾದಳ್ ಸುಕೇಶಿನಿ, ಮತ್ತು ನಾಗದತ್ತರ ಮಗಳು ಮೇಲಿನ ಪಠ್ಯದಲ್ಲಿರುವಂತೆ ಸೂರೂಪೆಯ ತಂದೆ ತಾಯಿ, ಸೂರೂಪೆಯ ಹುಟ್ಟು ಮುಂತಾದವು. ಪ್ರಸ್ತುತದಲ್ಲಿ ಅನಾವಶ್ಯಕ ಆದರೂ ಕತೆಯನ್ನು ಬೆಳೆಸುವ ರೀತಿ ಈ ತೆರನದು. ಇದರಿಂದಾಗಿ ಸುರೂಪೆಯ ಜನನ ಹಾಗೂ ಅವಳ ಮಗಳು ಸುಕೇಶಿನಿಯ ಜನನ ಕೇವಲ ನಾಲ್ಕಾರು ಶಬ್ದಗಳ ಅಂತರದಲ್ಲಿಯೇ ಆಗುತ್ತದೆ.

ವಡ್ಡಾರಾಧನೆಯ ಹೆಚ್ಚಿನ ಪಾತ್ರಗಳು ತಮ್ಮ ಸಂತ್ರಲ ಜೀವನದಿಂದ ದೂರವಾಗಿ ಸುಖಸಂಪತ್ತಿನಲ್ಲಿ ಮೆರೆಯುತ್ತವೆ. ತಮ್ಮ ಭಾವಿಜೀವನಕ್ಕೆ ಬೇಕಾಗುವ ಶಾಕ್‌ಟ್ರೀಟ್‌ಮೆಂಟಿಗಾಗಿ ತಮ್ಮ ಹಾಲಿ ಜೀವನವನ್ನು ಸೃಷ್ಟಿಸಿಕೊಳ್ಳುತ್ತವೆ. ಸುಕುಮಾರ ಸ್ವಾಮಿಯುಂ ಯೌವನನಾಗಿ ಅತ್ಯಂತ ರೂಪ

ಲಾವಣ್ಯ ಸೌಭಾಗ್ಯ ಕಾಂತಿಯಿಂದಂ ಕೂಡಿದನಾತಂಗೆ ಮೂವತ್ತೆರಡು ಬಳ್ವ ಮಾಡಂಗಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಲಾಸ ವಿಭ್ರಮಂಗಳನೊಡೆಯ ದೇವಗಣಿಕೆಯರನೆ ಪೋಲ್ವ ಮೂವತ್ತಿರ್ವರ್ ದಿವ್ಯಸ್ತ್ರಿಯರ್ಕಳ್, ಮೂವತ್ತೆರಡು ನಾಟಕಂಗಳೀ, ಮೂವತ್ತೆರಡುಕೋಟಿ ಕಸವರಮುಂ ಪಂಚರತ್ನಂಗಳೆಂಬಿನತವೊಳಂ ಕೂಡಿ ಭೋಗೋಪಭೋಗ ಸುಖಗಳನನುಭವಿಸುತ್ತ ಮಿರೆಯಿರ–" ಇದೇ ರೀತಿ "ಸೇಸೆಯಿಕ್ಕದ ಸರುಪಂಗಳೊತ್ತೆ ಸೈರಿಸಲಾರಂ ಮತ್ತೆ ಆವ ಕಾಲಮುಂ ಮಾಣಿಕದ ಬೆಳಗಿನೊಳಪೊರ್ದಂಟಿದಂ ಸೊಡರ ಬೆಳಗಿಂಗೆ ಸೈರಿಸದೆ ಕಣ್ಣ ನೀರ್ ಬರ್ಕುಂ–" ಎಂಬ ವಿವರಣೆಯನ್ನು ಓದಿದಾಗ ಅವನ ಭೋಗ ಜೀವನದ ಕಲ್ಪನೆಯೂ ಕೂಡಾ ಸಾಮಾನ್ಯರಿಗೆ ಕಷ್ಟಸಾಧ್ಯವಾಗುತ್ತದೆ.

ಈ ಕೃತಿಯ ಸ್ತ್ರಿ ಪಾತ್ರಗಳು ಈ ವಯಸ್ಸಿನಲ್ಲಿ 'ಅಂತ್ಯಂತ ರೂಪಲಾವಣ್ಯ ಸೌಭಾಗ್ಯ, ಶಾಂತಿ, ಹಾವಭಾವ ವಿಲಾಸವಿಭ್ರಮಂಗಳೊಡೆಯಳ್,ಪಲವುಂ ತಜಿದ ಶುಭಲಕ್ಷಣಂಗಳಿಂದಂ ಕೂಡಿದ ಮೆಯ್ಯನೊಡೆಯಳ್, ನವಯೌವನೆ ದೇವಗಣಿಕೆಯನೆ ಪೋಲ್ವಳ್' ಎಂಬುದಾಗಿ ಚಿತ್ರಿತವಾಗುವುದರಿಂದ ಅವಳ ಬೇಕುಬೇಡಗಳಾಗಲಿ, ವಾಸ್ತವಿಕ ಜೀವನಕ್ಕಾಗಲಿ ಇಲ್ಲಿ ಎಡೆಯಿಲ್ಲ. ಸ್ತ್ರೀ ಪಾತ್ರಗಳ ಪರಮೋಚ್ಚ ಗುರಿ ಮೋಕ್ಷ ಸಾಧನೆ.

ಅಂದಮಾತ್ರಕ್ಕೆ ಇಲ್ಲಿಯ ಯುವಪಾತ್ರಗಳು ಇಡಿಯಾಗಿ ಸಕಲಗುಣ ಸಂಪನ್ನರೆಂದೇನೂ ಅಲ್ಲ. ವಡ್ಡಾರಾಧನೆಯ ಗಜಕುಮಾರನನ್ನೂ ಇಲ್ಲಿ ಉದಾಹರಿಸಬಹುದು. ಜೈನಕೃತಿಗಳಲ್ಲಿ ಅಂತಿಮ ವೈರಾಗ್ಯ ಪ್ರಮುಖ ವಿಷಯ. ಈ ವೈರಾಗ್ಯ ಪೂರ್ವದಲ್ಲಿ ಯಾವುದೇ ಯುವಪಾತ್ರ ಯಾವುದಾದರೊಂದು ವಿಷಯದಲ್ಲಿ ಅತಿಯಾಗಿ ವರ್ತಿಸುತ್ತದೆ. ಉತ್ಕಟಾವಸ್ಥೆಯಲ್ಲಿ ಕಾರಣಾಂತರದಿಂದ ವೈರಾಗ್ಯ ಪ್ರಾಪ್ತಿಯಾಗುತ್ತದೆ. ವೈರಾಗ್ಯ, ತಾರುಣ್ಯದ ನಂತರವೇ ಬರಬೇಕೆಂಬುದೇನೂ ನಿಯಮವಲ್ಲ. ತಾರುಣ್ಯದಲ್ಲಿಯೇ ವೈರಾಗ್ಯ ಉಂಟಾಗಬಲ್ಲದು.

ಪಂಪಭಾರತದ ಯುವಪಾತ್ರ ಚಿತ್ರಣ ಬೇರೆ ರೀತಿಯದು. ಹೇಳಿಕೇಳಿ ಇದೊಂದು ಲೌಕಿಕ ಗ್ರಂಥ, ಇದು ರಾಜರ ಕಥೆ. ಶೌರ್ಯ, ಅಸೂಯೆ, ವೀರತ್ವ, ಮಾತ್ಸರ್ಯ, ಕ್ಷಾತ್ರೀಯತೆ, ಮೋಸಗಳ ಕಥೆ. ಇಲ್ಲಿಯ ಯುವ ಪಾತ್ರಗಳು ಕಟ್ಟಾಳುಗಳು "ತೋಳ್ಗಳ್ ಎಕ್ಕೆಯಿಂ ಅಮಳ್ ಬೆಳೆದಂತಿರೆ ಬಳೆದವು. ಮುಯ್ವಗಳ್ ಕುಳಾಚಳ ಶಿಖರಂಗಳಂ ಮುಸುಳಬಂದವು" ಎಂಬುದು ಧರ್ಮರಾಜನನ್ನು ಕುರಿತ ವಿವರಣೆಯಾದರೆ, "ಸರೋಜ ನಿಲಯಂ ಕುಳಗಿರಿಯಂ ಮನುಜಾಕೃತಿಯಾಗಿ, ಮಾಡಿದಂತೆ ದಶಸಹಸ್ರ ಮದೇಭ ಬಳಂ ನವಯೌವನಂ ಮನಂಗಳ– "ಹತ್ತು ಸಾವಿರಮತ್ತೇಭದ ಆನೆಗಳ ಬಲ ಭೀಮನ ಬಲ. ಅರ್ಜುನನಾದರೋ

'ವಿಮಳಚಂದ್ರಿಕೆ ಶರದದ ಚಂದ್ರನಂ ಬಾಳದಿನೇಶ ಬಿಂಬಮಂ ತಮೋಹಕಿರಣಂ, ನವಕೇಸರರಾಜಿ ಕಿಶೋರ ಹರಿಯಂ, ದಿಕ್ಕದಿಕ್ಕರಿಯುಂ ಅನೂನ ದಾನ ಪಶೋಭೆ ಮನಂಗೊಳೆಪೊರ್ದುವಂತೆ ಸುಂದರ ನವಯೌವನಂ ನೆರೆಯೆ ಗುಣಾರ್ಣವಂ ಒಪ್ಪಿ ತೋರಿದಂ.

ಈ ರೀತಿಯಾಗಿ ಪಂಪ ಅರಸುಕುಮಾರರ ಸಂಪತ್ತನ್ನು ವಿವರಿಸುವುದು ಕಂಡುಬರುತ್ತದೆ. ಅರಸುಕುಮಾರರಲ್ಲಿ ಸಹಜವಾಗಿ ಕಂಡುಬರುವ ಯೌವನ ಮದ ಮತ್ತು ಐಶ್ವರ್ಯಮದವನ್ನು ಗುರುತಿಸಿ ಯಥಾವತ್ತಾಗಿ ಚಿತ್ರಿಸುವಲ್ಲಿ ಪಂಪನ ಹೆಚ್ಚುಳಿಕೆ ಕಂಡುಬರುತ್ತದೆ. "ಪಾರ್ವನೆ ಎಂತು ಎನಗೆ ಕೆಳೆಯನು? ಅಂತಪ್ಪವಂ ಅಱಿಯೆನು ನೂಕು" ಎಂದು ದ್ರುಪದನ ಚಿತ್ರಣವನ್ನು ನೀಡುವಲ್ಲಿ ಆತನಲ್ಲಿರಬಹುದಾದ ಮಾನವಸಹಜ ದುರ್ಬಲತೆಯನ್ನು ಗುರುತಿಸಬಹುದು. 'ದ್ರೋಣನಂತಹ ಬಡ ಬ್ರಾಹ್ಮಣ ತನ್ನ ಗೆಳೆಯನಲ್ಲ' ಎಂದು ಹೇಳಿದ್ದರೆ ಸಾಕಿತ್ತು. 'ನೂಕು' ಎನ್ನುವ ಪದ ತನ್ನ ಸಹಜಾರ್ಥಕ್ಕಿಂತ ಹೆಚ್ಚಿನ ಅರ್ಥವನ್ನು ಈ ಸಂದರ್ಭದಲ್ಲಿ ಧ್ವನಿಸುವದು ಕಂಡುಬರುತ್ತದೆ. ದ್ರುಪದನಲ್ಲಿರುವ ಐಶ್ವರ್ಯ ಹಾಗೂ ಯೌವನಮದಗಳ ಸಮ್ಮಿಳನದ ಜೊತೆಯಲ್ಲಿಯೇ 'ತಾನುಕೊಟ್ಟ ಮಾತಿನಂತೆ ಅರ್ಧ ರಾಜ್ಯವನ್ನೆಲ್ಲಿ ನೀಡಬೇಕಾಗುವದೋ' ಎಂಬ ಭೀತಿಯೂ ಸೇರಿಕೊಂಡಿರುವದನ್ನು ಇಲ್ಲಿ ಗಮನಿಸಬಹುದು. ಆದ್ದರಿಂದಲೇ ದ್ರೋಣನನ್ನು ಕುರಿತು ನಿರಾಕರಣೆ ಅಷ್ಟೇ ಅಲ್ಲ. ದೈಹಿಕವಾಗಿಯೂ ಆತನನ್ನು ಸ್ವೀಕರಿಸಲಾರ ಆತನ ಇರುವಿಕೆ ತನಗೆಲ್ಲಿ ಅಪಾಯವನ್ನು, ಅವಮಾನವನ್ನು ಉಂಟುಮಾಡೀತೆಂಬ ಭಯ ದ್ರುಪದನಿಗೆ.

ಒಂದು ಕಡೆ ನಿರಾಕರಣೆಯಿದ್ದರೆ ಅದೇ ಸಮಯದಲ್ಲಿ ಇನ್ನೊಂದೆಡೆಗೆ ಗುರುವಾಗಿ ಸ್ವೀಕಾರ ಹಾಗೂ ಗುರುವಿನ ಬಗ್ಗೆ ಶ್ರದ್ಧೆ ದ್ರೋಣನನ್ನು ಕುರಿತಂತೆಯೇ ಕಂಡುಬರುತ್ತದೆ; ಗುರುಬಯಸಿದಲ್ಲಿ ಏನನ್ನಾದರೂ ಸಾಧಿಸಬಲ್ಲ, ಗುರುವಿಗಾಗಿ ತಮ್ಮ ಪ್ರಾಣವನ್ನೂ ಮುಡಿಪಾಗಿಡಬಲ್ಲ. ತರುಣರು ಆಗಿನ ಯುವಕರು. 'ಜವಂ ಪಿಡಿದೀಡಾಡುವ ಮಾಳ್ಕೆಯಂತೆ ಪಲರಂ ಕೊಂದಿಕ್ಕಿ ಮೆಯ್ಯುಮ್ಮಟ್ಟಿವೆಂದು ಮಾಣದೆ ಕಟ್ಟಿ ರಿಪುವಂ ದ್ರೋಣನಾ ಮುಂದೆ ಇಕ್ಕಿದಂ' ಈ ಶ್ರದ್ಧೆಯೇ ವೈರಿಗೆ ಮಾರಕವಾಗುತ್ತದೆ. ಈ ಶ್ರದ್ಧೆಯೇ ಕಾರಣವಾಗಿ ದ್ರುಪದನ ಸೊಕ್ಕಡಗುತ್ತದೆ. ಪಂಪಭಾರತದ ಯುವ ಪಾತ್ರಗಳಲ್ಲಿ ಶೂರತನವಷ್ಟೇ ಅಲ್ಲ, ಸರ್ವಕಾಲ, ಸರ್ವ ಸಮಾಜಕ್ಕೂ ಸಮಾನವಾಗಿರಬಹುದಾದ ಜಾತೀಯತೆ, ಮತಾಂಧತೆಯನ್ನು ಪ್ರದರ್ಶಿಸುತ್ತವೆ. "ಆದ ಮುಳಿಸಿಂದಂ ಆಗಳ್ ಬಗೆ ಬೆಳೆಯ ಪಿಡಿಯ ಗದೆಗಳಿಂ ಸುಯೋಧನೋಗ್ರ ವೃಕೋದರರ್ ಒಮೊರ್ದಲೆ ಶಿಖರ ಮುಳ್ಳೆರಡಗಮಂ ಇಳಿಪಂತಾದುದು" ಭೀಮಾ ದುರ್ಯೋಧನರು ಪ್ರದರ್ಶನವನ್ನು ನೀಡಿದನಂತರ

ಅರ್ಜುನನ ಬಿಲ್ವಿದ್ಯಾ ಪರಿಣತಿಯನ್ನು ಕಾಣಲು ತಯಾರಾದ ಪ್ರೇಕ್ಷಕರು– ಈತಂ ಗುಣಾರ್ಣವಂ ವಿಖ್ಯಾತಯಶಂ ವೈರಿಗಜಘಟಾ, ವಿಘಟನಂ, ಇಂತು ಈತನ ಸಾಹಸಂ ಉಪಮಾತೀತಂ ಇದಂ ನೋಡಿರಿ. ಎಂದು ಅಭಿಪ್ರಾಯ ಪಡುತ್ತಾರೆ. ಪ್ರೇಕ್ಷಕರಿಂದ ಮೆಚ್ಚಿಗೆಯನ್ನು ಪಡೆಯಬಲ್ಲ ಶೂರರು ಇವರಾದರೂ ಸಹ ಇತರರ ಶೂರತನವನ್ನು ಸಹಿಸುವ, ಮೆಚ್ಚುವ, ಸ್ವೀಕರಿಸುವ ಸಹನಾಭಾವವಾಗಲಿ, ಉದಾರತೆಯಾಗಲಿ ಇವರಲ್ಲಿ ಕಾಣಸಿಗದು. ಇತರರಲ್ಲಿ ಕೊರೆಯನ್ನು ಹುಡುಕುವ ಕೀಳು ಮನೋಭಾವವೇ ಇವರಲ್ಲಿ ಮೇಲಾಗುತ್ತದೆ. “ಏವದ ಮುಳಿಸಿನ ಕಾರಣ ಯಾವುದು ಕರ್ಣ ನೀಂ ನಿನ್ನ ತಾಯಿ ತಂದೆಯ ದೆಸೆಯಿಂ ಭಾವಿಸವೆ ನುಡಿವಂತು. ಯಾವುದು ನಿನಗಮರಿಕೇಸರಿಗಂ ಸಮಕಟ್ಟು ಅವುದು” ಕರ್ಣನ ಶಸ್ತ್ರ ನೈಪುಣ್ಯತೆಯನ್ನು ಶ್ಲಾಘಿಸುವುದಕ್ಕೆ ಬದಲಾಗಿ ಜಾತಿಹೀನತೆಯನ್ನು ಕೆದಕಿ ಜರಿಯುವದರಲ್ಲಿಯೇ ಮಗ್ನನಾಗುತ್ತಾನೆ ಭೀಮ. ಆತನ ಬಿಲ್ವಿದ್ಯಾ ಚತುರತೆಗಾಗಿ ಕರ್ಣನನ್ನು ಮೆಚ್ಚದೆ, ಹುಟ್ಟಿನ ಬೋನಿನೊಳಗೆ ದಬ್ಬುವಲ್ಲಿ ಭೀಮ, ಅರಸುಕುಮಾರರಿಗೆ ಸಹಜವಾದ ಮತ್ಸರ ಅಸೂಯೆಯನ್ನು ಪ್ರದರ್ಶಿಸುತ್ತಾನೆ. ಈ ಸಂದರ್ಭವನ್ನು ಬಳಸಿ ಭೀಮನನ್ನು ಕೆಣಕುವ ಸಾಹಸ ದುರ್ಯೋಧನನದು. ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ಕೌರವ ಯಶಪ್ರದನಾಗಿರುತ್ತಾನೆ. ದಾಯಾದಿಗಳ ಮನಸ್ಸನ್ನು ಕೆಣಕುವುದರ ಜೊತೆಗೆ ತನ್ನ ಪಡೆಯನ್ನು ಬಲಪಡಿಸಿಕೊಳ್ಳುವ ಮುತ್ಸದ್ದಿಯಾಗುತ್ತಾನೆ ಆತ. “ಬೀರಮೆ ಕುಲಮಲ್ಲದೆ ಕುಲಮೆಂಬುದುಂಟೆ, ಕುಲಮನಿಂತು ಪಿಕ್ಕದಿರಿಂ ನೀ ಒಲಿದು ಎಲ್ಲಿ ಪುಟ್ಟಿ ಬೆಳೆದಿರೊ ಕೊಡದೊಳಂ ಶರಸ್ತಂಭದೊಳಂ ಕುಲಂ ಇರ್ದುದೆ ಎಂದಾಗ ಭವಿಷ; ದ್ರೋಣ, ಕೃಪರು ತಲೆ, ತಗ್ಗಿಸಿರಬೇಕು. ಕರ್ಣನಿಗೆ ಸ್ಥಾನವನ್ನು ಕಲ್ಪಿಸುವುದರ ಮೂಲಕ ಕೌರವ ಕರ್ಣನನ್ನು ತನ್ನವನನ್ನಾಗಿಸಿಕೊಳ್ಳುತ್ತಾನೆ.

ಇಲ್ಲಿಯ ಸ್ತ್ರೀ ಪಾತ್ರಗಳು ಸಹಜ ಸುಂದರಿಯರು. ಶರೀರದ ಪ್ರತಿ ಅಂಗವೂ ಸೌಂದರ್ಯದ ಆಗರ ಬಾಹ್ಯಸೌಂದರ್ಯವರ್ಧಕಗಳಾಗಲಿ ಅಲಂಕಾರಗಳಾಗಲಿ ಇಲ್ಲಿ ಅನಾವಶ್ಯಕ. “ಹಾರಮಂತುಡಿಸದೆ ಮೊಲೆಯ ಬಿಣ್ಪಿನೊಳೆ ನಡುಬಳ್ಕಿದಪ್ಪುದು ತೊಡೆ ನಿತಂಬದ ಬಿಣ್ಪಿನೊಳೆ ನಡುಗುವುದಲ್ಲದೆ, ಏವುದು ಅಕ್ಕ ಕಟಿಸೂತ್ರಮಂ ಪೊಬಿಡು” ತೊಡೆಯ ಬಿಣ್ಪು ಪದಾಂಬುರುಹಕ್ಕೆ ತಿಣ್ಣಂ ನೂಪುರಮಂ ತೊಡಿಸುವದಕ್ಕೆ ಈ ತುಡುವೇವುದೋ ರೂಪವೇ ಸಾಲದೆ “ಈ ರೀತಿ ಸೌಂದರ್ಯವೆ ಭಾರವಾಗಿರುವಾಗ ಇತರ ಬಾಹ್ಯ ಅಲಂಕಾರಗಳ ಭಾರವಿನ್ನೇಕೆ? ಎನ್ನುವಷ್ಟು ಸುಂದರಿಯರಿರುವರು. “ದ್ರೌಪದಿಯ ಪಸದನಂ ಮದನನ ಬಾಳ್ ಮಸೆದುದು” – ಹತ್ತಾರು ಪುಟಗಳು ಹತ್ತಾರು ಪದ್ಯಗಳು ಹೇಳಬಹುದಾದ ವೃತ್ತಾಂತವನ್ನು ಕೇವಲ ಒಂದೇ ಒಂದು ಸಾಲಿನಲ್ಲಿ ಸಾಂದ್ರೀಕರಿಸಿರುವುದು ಪಂಪನ ಕಾವ್ಯರಚನಾ

ವೈಖರಿ. ಆಗಿನ ತರುಣರು ಎಷ್ಟು ಸುಂದರರೂ ಅಷ್ಟೇ ಛಲಗಾರರು, ಹಟಗಾರರು. ಅವರು ಕೈಕೊಳ್ಳುವ ಪ್ರತಿಜ್ಞೆಗಳೂ ಕಠೋರತಮ 'ಕಡಿವೆಂ ದುಶ್ಶಾಸನೋರಸ್ಥಲಮಂ ಆಗಳೇ ಪೋಳ್ದು ಆರ್ದು ಕೆನ್ನೆತ್ತರಂ ಪೊಕ್ಕು ಉಡೆವಂ ಪಿಂಗಾಕ್ಷನ ಊರುದ್ವಯಮಂ ಗದಾಘಾತದಿಂದ'. ಈ ಪ್ರತಿಜ್ಞೆಗಳು ಕೇವಲ ಮಾತುಗಳಾಗಿ ನಿಲ್ಲುವುದಿಲ್ಲ ಕ್ರಿಯೆಯಾಗಿ ಪರಿವರ್ತಿತವಾಗುತ್ತವೆ. ಸಮಯೋಚಿತ ಕರ್ತವ್ಯಪ್ರಜ್ಞೆ ಹಾಗೂ ಕಾರ್ಯತತ್ಪರತೆಯನ್ನು ಈ ಯುವ ಪಾತ್ರಗಳ ಮೂಲಕ ಗುರುತಿಸಬಹುದು. "ಬಳ್ಳುತುಂ ಅಳ್ಳುತ್ತಂ ಓರಡಿಗೆ ಒನ್ಮೊಮ್ಮೆ ಕುಳುತ್ತಂ ಏಟುತಿರೆ..............ಕಂಡು ಇಂತಾಗದು ಏಟುವೆಂದು ಒಡನೆ ಅಂದು ಅಯ್ವರುಮಂ ನಿಜಾಂಸಯುಗದೊಳ್ ಪೊತ್ತು" ನಡೆಯುತ್ತಾನೆ ಭೀಮ. ಪಂಪಭಾರತದ ಯುವಪಾತ್ರಗಳು ರಾಗ-ದ್ವೇಷಗಳಿಗೆ ತುತ್ತಾಗುತ್ತವೆ. ಕಾಮ-ಪ್ರೇಮಕ್ಕೆ ಈಡಾಗುತ್ತವೆ "ಪಿಡಿದು ಅಡಸಿತಿನಲ್ ಬಂದಿರ್ದೆಡೆಯೋಳ್ ನಿನಗಾಗಿ ಎನ್ನನೆ ಮದನಂ ತಿನೆ" -ಹಸಿವಿನ ಬಾಧೆಯನ್ನು ತೀರಿಸಿಕೊಳ್ಳಲು ಬಂದವಳು ಹಿಡಂಬೆ. ಆದರೆ ಭೀಮನನ್ನು ಕಾಣುತ್ತಲೇ ತಾನೆ ಕಾಮ ಬಾಧೆಗೆ ಒಳಗಾಗುತ್ತಾಳೆ. ಸಾಮ್ಯಸಾಮ್ಯತೆಯ ವೈಪರಿತ್ಯವಿದ್ದರೂ ಸಹ ಹಿಡಂಬಿಯ ವಯಸ್ಸಿಗೆ ಸಹಜವಾಗಿ ಭೀಮನ ಯೌವನದಿಂದ ಆಕರ್ಷಿತಳಾಗುವುದು ಸಹಜವಾಗಿ ಬಿಡುತ್ತದೆ. ಧರ್ಮರಾಜನ ಅಣತಿಯಂತೆ ಮದುವೆಯಾಗುತ್ತಾರೆ ಭೀಮ ಮತ್ತು ಹಿಡಂಬಿಯರು. "ಎಲ್ಲಿ ಕೊಳಂ, ಎಲ್ಲಿ ತಣ್ಪುಳಿಲ್, ಎಲ್ಲಿ ಲತಾಭವನಂ, ಎಲ್ಲಿ ತಾರಾಗೃಹಂ ಅಂತು ಅಲ್ಲಿಯೇ ತೊಡರ್ದು, ಅಲ್ಲಿಯೇ ನಿಂದು ಅಲ್ಲಿಯೇ ಆಕೆ ಮರುದಾತ್ಮಜನೊಳ್ ರಮಿಯಿಸಿದಳ್" ಎಂಬ ಸಾಲುಗಳನ್ನು ಓದುತ್ತಿದ್ದಾಗ ಮಧುಚಂದ್ರದ ಕಲ್ಪನೆ ಆಗದಿರದು.

ಶೌರ್ಯಕ್ಕೆ ಇನ್ನೊಂದು ಹೆಸರು ಅಭಿಮನ್ಯುವಿನದು. ಗೆಳೆಯರೊಡನಾಡಿ ಆಡಿ ಕುಪ್ಪಳಿಸಿ ಯೌವನವನ್ನನುಭವಿಸಬೇಕಾದ ಸಮಯದಲ್ಲಿ ಸಮರಾಂಗಣದಲ್ಲಿ ಅತಿರಥ ಮಹಾರಥರ ಮುಂದೆ ಯುದ್ಧದಲ್ಲಿ ತೊಡಗಿ ಪ್ರಾಣತೆತ್ತವನಾತ. ಆತನ ಶೂರತನವನ್ನು ಅಲ್ಲಿಯೇ ಕಾಣಬೇಕು. 'ಕರಮೆರಡುಂ ಪಟಿವುದವೂ ಕರದಿಂದಂ ತನ್ನ ಕುನ್ನಗೆಯ್ಯೊಳಿ ಕೊಂಡುದ್ಧುರ ರಥ ಚಕ್ರದಿನಿಟ್ಟಂ ತರಿಪಿ ನರಪ್ರಿಯ ತನುಜನ ಕ್ಷೋಹಿಣಿಯಂ' ತಾನೆಷ್ಟು ಶೂರನೋ ಅಷ್ಟೇ ತೀವ್ರವಾಗಿ ಕ್ಷತ್ರಿಯ ಧರ್ಮವನ್ನು ಅರಿತವನು ಅಭಿಮನ್ಯು "ಕ್ರಮಮಂ ಕೆಯ್ಕೊಳಲೆಂದು ಪುಟ್ಟರಣದೊಳ್ ಸಾವನ್ನೆಗಂ ಮಾಣ್ದೊಡೆ ಕ್ರಮುಕ್ರಮುಕ್ಕುಂ" ಅಂತೆಯೇ ತನ್ನ ದೊಡ್ಡಪ್ಪನಾದ ಧರ್ಮರಾಜನಿಗೆ ಕ್ಷತ್ರಿಯಧರ್ಮವನ್ನು ಪರಿಚಯಿಸಿಕೊಡುತ್ತಾನೆ.

ಜೈನರಾಮಾಯಣದ ಕೌಸಲ್ಯೆಯೂ ಸಹ ಇತರ ಯಾವುದೇ ಕಾವ್ಯದಲ್ಲಿ ಬರುವ ಸ್ತ್ರೀ ಪಾತ್ರದಂತೆ ಸರ್ವಾಂಗ ಸುಂದರಿ "ತೋರುಮೊಲೆಗಳ ಮೊಗಂಗಳ್

ರಾರಾಜಿಸೆ ಕರ್ಪುರವೆತ್ತು ಮೋಹನ ಘೂರ್ಣಿವಾರ್ಗಂಗಳಂ ಕಾಂಚನ ಭೃಂಗಾರಿಗಳಂ ಪೋಲ್ತುವು” “ಸೀತೆಯಾದರೋ ಮದನ ಮೋಹನ ದೀಪಕಳಿಕೆಯಂತೆಯುಂ, ಕಾಮಕಲ್ಪ ಲತೆಯಂತೆಯುಂ ನಿರಂತರರೊಸೀಸಚುಯುಮುನಪ್ಪುಕೇಯ್ದು ಭರತ ಶಾಸ್ತ್ರಾದಿ ಸಕಲ ಕಲೆಯೊಳತಿ ಪರಿಣತಿಪಡೆದವಳು” — ಈಕೆ ಕೇವಲ ಸುಂದರಿಯಷ್ಟೇ ಅಲ್ಲ ಸಕಲ ಕಲೆಗಳಲ್ಲಿಯೂ ಪರಿಣಿತೆ. ಇವಳ ಸೌಂದರ್ಯವನ್ನು ಸೀತೆಯ ಸ್ವಯಂವರ ಸಂದರ್ಭದಲ್ಲಿ ಕಂಡ “ಮತ್ತೊರ್ವ ಭೂಪಾಳಂ ಪಾವಡದರ್ಂತೆ ಬೆಱಗಾದರ್ಂ”

ಜೈನರಾಮಾಯಣದಲ್ಲಿ ಬರುವ ರಾಮ ಲಕ್ಷ್ಮಣರು ಅಸಮಾನ್ಯ ಶೂರರು. ಶಸ್ತ್ರ ಶಾಸ್ತ್ರ ಪಾರಂಗತರು. “ರಣದೋಳ್ ರಾವಣನಂ ಓವಂಗೆ ಪೊಸತಿಕ್ಕಲ್ ತಾರಾಶೈಲಕ್ಕೆ ಸಾಮಾನ್ಯರೆ ರಾಮಲಕ್ಷ್ಮಣರ್ ಪ್ರಾಕೃತ ವಿಕ್ರಮರ್ ವಿದ್ಯಾವಿಭವ ಸಕಲಶಾಸ್ತ್ರ ಪರಿಣತರಾದರ್”. ತಾವು ಪ್ರಾಪ್ತವಯಸ್ಕರಾಗುತ್ತಲೇ ತಂದೆಯ ಭಾರವನ್ನು ಇಳುಹಬೇಕೆಂಬ ಕರ್ತವ್ಯಪ್ರಜ್ಞೆ ರಾಮನಲ್ಲಿದೆ. “ಜನವಿನುತವೆಗಾನೆ ಮೊಗಮಿಕ್ಕುವುದೆ ಅದರಿಂ ದೇವರೀ ಬೆಸನನೆಮಗೆ ದಯೆಗೆಯ್ವುದು”. ಕೇಳುವಲ್ಲಿಯೂ ವಿನಯದ ಸಾಕಾರಮೂರ್ತಿ ರಾಮ. ತಂದೆಯ ಭಾರವನ್ನು ಇಳುಹಬೇಕೆಂಬ ವಿನೀತ ಭಾವವಿದೆಯೆ ವಿನಹ ಹಕ್ಕನ್ನು ಚಲಾಯಿಸಬೇಕೆಂಬ ಅಹಂಭಾವ ಇಲ್ಲಿಲ್ಲ. ರಾಮ ಲಕ್ಷ್ಮಣರಿಗೆ ಪರಸ್ಪರರಲ್ಲಿ ಅಷ್ಟೇ ವಿಶ್ವಾಸ, ಗೌರವ. ಯಾವುದೇ ವಿಷಯಕ್ಕೆ ಒಬ್ಬರನ್ನೊಬ್ಬರು ಬಿಟ್ಟುಕೊಡಲಾರರು. ಅಂತೆಯೇ ಲಕ್ಷ್ಮಣನನ್ನು ಕುರಿತು ‘ಕಿಡಿಕಿರಿದಾದೊಡಂ ಸುಡದೆ ಕಾನನಮಂ .... ಜವಂಗೆ ಪೊಸತಿಕ್ಕನೆ ವಿಕ್ರಮಶಾಲಿ ಲಕ್ಷ್ಮಣಂ “ಭರತನೂ ಸಹ ಅಷ್ಟೇ ವಿನಯಶಾಲಿ. ರಾಮನಲ್ಲಿ ಅತೀವ ಗೌರವವನ್ನೂ ಭಕ್ತಿಯನ್ನೂ ಇರಿಸಿಕೊಂಡವನು. ಪರಿಸ್ಥಿತಿಯೇ ಕಾರಣವಾಗಿ ಭರತ ಪಟ್ಟಗಟ್ಟಿಸಿ ಕೊಳ್ಳಬೇಕಾದ ಸಂದರ್ಭದಲ್ಲಿ ಭರತ, ಲಕ್ಷ್ಮಣರಿಗೆ ರಾಮನಲ್ಲಿರುವ ಭಕ್ತಿಯಿಂದಾಗಿ ಮೂಡುವ ಭಾವನೆಗಳು ಹಾಗೂ ಎಲ್ಲವನ್ನು ನಿರ್ಲಿಪ್ತನಾಗಿ ಸ್ವೀಕರಿಸುವ ರಾಮನ ಮನೋಸ್ಥಿತಿಯನ್ನು ಕೆಳಗಿನಂತೆ ಕಾಣಬಹುದು’ ಭರತಂ ಲಜ್ಜಾಭೀತಂ, ...ಲಕ್ಷ್ಮಣಂ ಕೋಪಾರಸಾವೇಶಂ.... .... ಪಾರಿಜಾತ ಕಡಲ ನಡುವೆ ಕೈವಂದವೊಲ್ ರಾಮನಿರ್ದಂ.

ಶೌರ್ಯಗಳ ಆಗರವೇ ಆಗಿದ್ದರೂ ಸಹ ಗುರುಹಿರಿಯರಲ್ಲಿ ವಿನಯಭಾವ ರಾಮನದು. ಹಿರಿಯರ ಆಜ್ಞಾಪರಿಪಾಲನೆಯೇ ರಾಮನ ಏಕೈಕ ಗುರಿ. ಮಗನೆನಿಪಂಗೆ ಮಾತೃ ಪಿತೃ ಭಕ್ತಿಯೇ ಕೃತ್ಯಮಹತ್ರಿಗಂ ಪರತ್ರಿಗಂ, ಧರ್ಮಾಧರ್ಮಗಳ ಮಂಥನವೇ ಈ ಪಾತ್ರಗಳ ಜೀವನವಾಗಿಬಿಡುತ್ತದೆ. ತಾನು ಕಾಡಿಗೆ ಹೋಗಬೇಕೆಂಬ ನೋವು ರಾಮನಿಗಿಲ್ಲ ಆದರೆ ಇದನ್ನು ಕೇಳಿ ತಂದೆ ಬಳಲುತ್ತಾರೆ ಎಂಬ ಅಳಲು ರಾಮನದು. ಎನಗೆ ಬೆಸಸಿದೆಡೆ ಸಾಲದೆ ಜನನಿಯುಂ ಧರೆಯುಂ ನೆನ್ನ

ತಮ್ಮಂಗಾನೀಯೆನೆ ಬೇಸವೇಜ್ಜದೆ ಮಜ್ಜನಕನಲ್ಲಿವರೆಮಿಂತಿದಾವುವು ಗಹನಂ’ ತನ್ನ ಹಿರಿಯರು ಬಳಲಬಾರದು ತನ್ನ ವಂಶ ಭಾದಿಸಲ್ಪಡಬಾರದು ಎಂಬ ಕಾಳಜಿ ರಾಮನಿಗಿರುವುದು ‘ರಘುವಂಶಜರ್ ತೊದಳ್ನುಡಿದೊಡವಾಹವಕ್ಕೆ ಪಿಡಿದಿರ್ದೊಡಮೆಂತೊ ಜಗಕ್ಕೆ ಜೀವನಂ’

ಪತಿಯನ್ನು ಅನುಸರಿಸುವದೇ ತನ್ನ ಧರ್ಮ ಎಂದರಿತವಳು ಸೀತೆ ಅಂತೆಯೇ ಆತನ ಕಷ್ಟ ಸುಖಗಳೆರಡಲ್ಲಿಯೂ ಪಾಲಾಗಲು ಮುಂದುವರಿಯುತ್ತಾಳೆ. ‘ಸುಚರಿತೆ ಸೀತೆ ನಿನ್ನೊಡನೆ ಬರ್ಪವಳಿರ್ಪವಳಲ್ಲಳಿರ್ಪುದೇನುಚಿತಮೆ ಎಂದುಕೌಸಲ್ಯೆ ಸೀತೆಯು ಪರಿಯನ್ನು ಎತ್ತಿಹಿಡಿಯುತ್ತಾಳೆ. ‘ಆದನಂತೆಗೆಯ್ವನ್’ ಎನ್ನುವವ ರಾಮ ತಾನೆಷ್ಟು ಕಷ್ಟಪಟ್ಟರೂ ಸಹ ಅದಕ್ಕೆ ಕಾರಣೀಭೂತರನ್ನು ರಾಮನೆಂದೂ ದೂಷಿಸಲಾರ. ಆದ್ದರಿಂದಲೆ ಮುಂದೆ ತನ್ನ ತಪ್ಪಿನ ಅರಿವಾಗಿ ಅಡವಿಗೆ ಬಂದ ಕೈಕೆಯನ್ನು ಕಂಡು ‘ಇದಿರೆಳ್ದು ಪರಿದು ಕೈಕೆಯ ಪದಾಂಬುಜಕ್ಕೆಜಿಗೆ ರಾಘವಂ’ ಎಂಬಲ್ಲಿ ರಾಮನ ಸದ್ಗುಣ ಪರಕಾಷ್ಟಕ್ಕೇರುತ್ತದೆ.

ಹಳಗನ್ನಡ ಸಾಹಿತ್ಯವನ್ನು ಇಡಿಯಾಗಿ ನೋಡಿದಾಗ ಮಾನವ ಸಹಜ ಗುಣಗಳನ್ನು ಅದುಮಿಟ್ಟು ಆದರ್ಶವನ್ನು ಗುರಿಯಾಗಿಸಿಕೊಂಡ, ಆರೋಗ್ಯಕರ ಸಮಾಜದ ಕಲ್ಪನೆಯೊಂದರ ನಿರ್ಮಾಣಕ್ಕೆ, ಅಂತಿಮ ಮೋಕ್ಷ ಸಾಧನೆಗೆ ಮಾದರಿಯಾಗಬಲ್ಲ ಪಾತ್ರಗಳಾಗಿ ಇಲ್ಲಿಯ ಯಾವ ಪಾತ್ರಗಳು ಮೂಡಿ ಬಂದಿವೆ. ಮಾನವ ಸಹಜದೌರ್ಬಲ್ಯಗಳನ್ನು ಬದಿಗಿಟ್ಟು ವಸ್ತುವನ್ನು ಕೇಂದ್ರವಾಗಿರಿಸಿ, ಆದರ್ಶ ಪಾತ್ರ-ಸನ್ನಿವೇಶಗಳಷ್ಟನ್ನೆ ನಿರ್ಮಿಸುವ ಸಾಧ್ಯತೆಯಿದ್ದಾಗಲೂ ಸಹ, ವ್ಯಕ್ತಿ ದೌರ್ಬಲ್ಯಗಳಾದ ದ್ವೇಷ, ಅಸೂಯೆ, ಮೋಸಗಾರಿಕೆಯ ಚಿತ್ರಣದ ಸಳಕು ಅಲ್ಲಲ್ಲಿ ಕಂಡುಬರುತ್ತದೆ.

ಮೋರಟಗಿ ಸಿದ್ಧಲಿಂಗಪ್ಪ ನಿರೂಪಿಸಿದ ದೇಶಿಕಶ್ರೇಷ್ಠನ ಸ್ತೋತ್ರ

● ಬಿ. ಆರ್. ಹಿರೇಮಠ

ಗದುಗಿನ ಜಗದ್ಗುರು ಶ್ರೀ ತೋಂಟದಾರ್ಯ ಸಂಸ್ಥಾನಮಠದ ಹಸ್ತಪ್ರತಿ ಭಾಂಡಾರದ ಕಾಗದಪ್ರತಿ (ಬಿ. ೧೮೬/೪)ಯೊಂದರಲ್ಲಿ ಈ ಸ್ತೋತ್ರವಿದೆ. ಕನ್ನಡ ಸಾಹಿತ್ಯದಲ್ಲಿ ಸ್ತೋತ್ರಸಾಹಿತ್ಯಕ್ಕೂ ಒಂದು ವಿಶಿಷ್ಟಸ್ಥಾನವಿದೆ. ಈ ಸ್ತೋತ್ರ ಸಾಹಿತ್ಯ ಕನ್ನಡದಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಚಿತವಾಗಿದೆ. ಪ್ರಸ್ತುತ ಕೃತಿ ಈ ಸ್ತೋತ್ರಸಾಹಿತ್ಯವರ್ಗಕ್ಕೆ ಸೇರುತ್ತದೆ.

ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿ ಮೋರಟಗಿ ಎಂಬ ಗ್ರಾಮವಿದೆ. ಈ ಗ್ರಾಮದ ವಿರಕ್ತಮಠದ ಅಧಿಪತಿಗಳಾಗಿದ್ದ ಶ್ರೀ ಬಸವಲಿಂಗ ಸ್ವಾಮಿಗಳನ್ನು ಕುರಿತ ಸ್ತೋತ್ರ ಇಲ್ಲಿದೆ. ಈ ಬಸವಲಿಂಗ ಸ್ವಾಮಿಗಳನ್ನು ಲೋಚನ ಬಸವಲಿಂಗ, ಲೋಚನ ಮುರಿಗೆಸ್ವಾಮಿಗಳೆಂದೂ ಕರೆಯುತ್ತಿದ್ದರು. ಇವರು ತೋಂಟದ ಸಿದ್ಧಲಿಂಗ ಯತಿಗಳ ಪರಂಪರೆಯವರೆಂದೂ ಈ ಮಠ ತೋಂಟದಾರ್ಯ ಪರಂಪರೆಯದೆಂದೂ ಷಟ್ಪದಿಗಳಿಂದ ವಿದಿತವಾಗುತ್ತದೆ. ಕೃತಿಯ ಆರಂಭದಲ್ಲಿ ಬರುವ "ಮೋಟಗಿ ಜೇಟಗಿ ತೋಂಟದಾರ್ಯ ಬಸವಲಿಂಗಾಯನಮಃ" ಎಂಬ ವಾಕ್ಯವೂ 'ಲೋಚನ ಮುರಿಗೆಸ್ವಾಮಿ', 'ಮೋಟಗಿ ತೋಂಟದಾರ್ಯ' ಎಂಬ ಪದಗಳೂ ಮೇಲಿನ ಅಭಿಪ್ರಾಯವನ್ನು ಬೆಂಬಲಿಸುತ್ತವೆ. 'ಜೇರುಟಗಿ ವಾಸ', 'ಬಸವ ಜೇರುಟಗಿ ಲಿಂಗೇಶ', 'ಮೋಟಗಿ ತೋಂಟದಾರ್ಯ' ಪದಗಳು ಈ ಬಸವಲಿಂಗಸ್ವಾಮಿಗಳು ಜೇರುಟಗಿ ಹಾಗೂ ಮೋರಟಗಿ ಮಠಗಳೆರಡಕ್ಕೂ ಅಧಿಪತಿಗಳಾಗಿದ್ದುದನು ಸ್ಪಷ್ಟಪಡಿಸುತ್ತವೆ.

ಈ ಕೃತಿಯನ್ನು ರಚಿಸಿದವ, ಮೋರಟಗಿ ಗ್ರಾಮದ ಸಿದ್ಧಲಿಂಗಪ್ಪ. ಈತನ ಕಾಲ ಸು. ೧೮೪೦. ಹೀಗಾಗಿ ಈ ಬಸವಲಿಂಗಸಸ್ವಾಮಿಗಳು ಸು. ೧೮೪೦ ಇಲ್ಲವೆ ಪೂರ್ವದಲ್ಲಿ ಈ ಎರಡೂ ಗ್ರಾಮಗಳ ಮಠಗಳ ಅಧಿಪತಿಗಳಾಗಿದ್ದರೆಂದು ಹೇಳ ಬೇಕಾಗುತ್ತದೆ. ಈ ಕೃತಿ 'ದೇಶಿಕಶ್ರೇಷ್ಠನಸ್ತೋತ್ರ' ವಲ್ಲದೆ 'ಗುರುಸ್ತೋತ್ರದ ಸಾಂದ್ಯ', 'ಪಂಚವಿಂಶತಿ ಸ್ತೋತ್ರ' ವೆಂಬ ಪರ್ಯಾಯ ನಾಮಗಳಿಂದಲೂ ಪ್ರಸಿದ್ಧಿ ಪಡೆದಿದೆ. ಈ ಕೃತಿಯಲ್ಲಿ ನಿರೂಪಿತವಾದ ಪೂರ್ವದ ವಿರಕ್ತಸಂಪ್ರದಾಯದ ಗುರುಪರಂಪರೆ ಹೀಗಿದೆ:

ತೋಂಟದ ಸಿದ್ಧಲಿಂಗೇಶ್ವರ
|
ನಿರಕ್ಷರಿ ಬೋಳಬಸವೇಶ್ವರ
|
ಗುಮ್ಮಳಾಪುರದ ಸಿದ್ಧಲಿಂಗ
|
ಗೂಳೂರ ಸಿದ್ಧಲಿಂಗ
|
ಗಗನದ ಸ್ವಾಮಿ
|
ಕಟ್ಟಿಗೆಹಳ್ಳಿ ಸಿದ್ಧಲಿಂಗ
|
ಮುರಿಗಾ ಶಾಂತವೀರ
|
ಮುರಿಗಾ ಗುರುಸಿದ್ಧದೇಶಿಕ
|
ಚೆನ್ನಬಸವ
|
ಸಿರಪೊಳಲ ಸಿದ್ಧಲಿಂಗೇಶ್ವರ
|
ಗುರುಪಾದಸ್ವಾಮಿ
|
ಇಮ್ಮಡಿ ಗುರುಪಾದಸ್ವಾಮಿ

ಈ ವಂಶಾವಳಿಯಲ್ಲಿಯ ಯಾವ ಗುರುಗಳೂ ಜೇರುಟಗಿ ಹಾಗೂ ಮೋರಟಗಿ ಮಠದವರಲ್ಲ. ಇದು ಪೂರ್ವದ ವಿರಕ್ತಸಂಪ್ರದಾಯ.

ಈ ಸ್ತೋತ್ರಕೃತಿಯಲ್ಲಿ ವಾರ್ಧಕ, ಭಾಮಿನಿ, ಪರಿವರ್ಧಿನಿ ಷಟ್ಪದಿಗಳನ್ನು ಬಳಸಲಾಗಿದೆ. ಹೀಗೆ ಈ ಕೃತಿ ಛಂದೋವೈವಿಧ್ಯದಿಂದ ಕೂಡಿದುದಾಗಿದೆ. ಇಲ್ಲಿ ಭಕ್ತಿ ಸ್ಥಾಯಿ. ಮೋರಟಗಿ ಹಾಗೂ ಜೇರಟಗಿ ಮಠಗಳ ಅಧಿಪತಿ ಬಸವಲಿಂಗ ಸ್ವಾಮಿಗಳನ್ನು ಕವಿ ಭಕ್ತಿಯ ತಾದಾತ್ಮ್ಯತೆಯಿಂದ ನಾನಾ ವಿಧವಾಗಿ ಸ್ತುತಿಸಿದ್ದಾನೆ. ಈ ಗುರುವನ್ನು ಎಷ್ಟು ನೆನೆದರೂ ಕವಿಗೆ ತೃಪ್ತಿಯಿಲ್ಲ. ಅಂದಿನ ಕಾಲದಲ್ಲಿ ಅತ್ಯಂತ ಪ್ರಭಾವಶಾಲಿಯೂ ಮಹಿಮಾಶಾಲಿಯೂ ಆಗಿದ್ದ ಈ ಬಸವಲಿಂಗ ಸ್ವಾಮಿಗಳು ಚಾರಿತ್ರಿಕ ವ್ಯಕ್ತಿಗಳಾಗಿದ್ದಾರೆ. ಹೀಗೆ ಚಾರಿತ್ರಿಕ ಮಹತ್ವವನ್ನು ಪಡೆದ ಈ ಕೃತಿಯ ಪೂರ್ಣಪಾಠ ಹೀಗಿದೆ:

† ಗುರು ಪ್ರಭು ಮಡಿವಾಳ ಚೆನ್ನಬಸವ
ಕರ ಜನ್ಮ ಹೇರಂಬ ವೀರೇಶ ನೀ ಒಲಿದು
ತರಳನವಗುಣ ಮಾತೆಪಿತರುಗಳು ನೋಡಿದೋಲ್ಗುರುಸ್ತೋತ್ರ ಸಾಗಿಸುವುದು ॥ಪ॥

ಹರ ತಾನೆ ಚರಸ್ವರೂಪವ ತಾಳಿ ಧರೆಗಿಳಿದ
ವರ ತೋಂಟದಾರ್ಯರ ಚರಣಸಂಭವರಾದ
ನೆರೆ ನಿರಕ್ಷರ ಬೋಳಬಸವೇಶ್ವರನ ಪರಮಶಿಷ್ಯರು ಗುಮ್ಮಳಾಪುರದಾ
ತರ ಸಿದ್ಧರಯ್ಯನಾ ಪದಪದ್ಮಭವರಾದ
ಸುರುಚಿರದ ಗೂಳೂರ ಸಿದ್ಧಲಿಂಗಯ್ಯರಡಿ
ಕರುಣವಂ ಪಡೆದ ಗಗನದಸ್ವಾಮಿ ವರ ಶಿಷ್ಯ ಕಟ್ಟಿಗೆಹಳ್ಳಿ ವರನಾ ॥೧॥

ಕರುಣರಸವಂ ಪಡೆದ ಮುರಿಗೆಸ್ವಾಮಿಯವರ
ಹರುಷದಭಯ ಪಡೆದ ಗುರುಸಿದ್ಧದೇಶಿಕನ
ಸರಸಾನುಭವ ಕಲಿತ ಚೆನ್ನಬಸವೇಶ್ವರನ ಪದ ತಾಮರಸದಿ ಭವರು
ಸಿರಪೊಳಲ ಸಿದ್ಧಲಿಂಗೇಶ್ವರನ ದಯ ಪಡೆದ
ಗುರುಪಾದಸ್ವಾಮಿಗಳನುಗ್ರಹವಂ ತಾಳ್ದ ಪರ
ತರದಿಮ್ಮಡಿ ಗುರುಪಾದಸ್ವಾಮಿಗಳ ಚಿರಸ್ತೋತ್ರವಂ ಪೇಳಿಂದ ಬಸವಲಿಂಗ ॥೨॥

ಶ್ರೀಗುರುವೆ ನಿಗಮತತಿಗಾದ್ಯನಂ ವೇದ್ಯನಂ
ಶ್ರೀಗುರುವೆ ತಾರಜಾರ್ದಂಗನಂ ಸಂಗನಂ
ಶ್ರೀಗುರುವೆ ಚರಲಿಂಗ ವೇಷನಂ ಭೂಷಣಂ ಪರಮಪಾವನ ಶಾಂತನಂ
ಶ್ರೀಗುರುವೆ ವೇದಜನ ಮರ್ದನಂ ವರ್ಧನಂ
ಶ್ರೀಗುರುವೆ ವೇದರುಚಿ ಸೀಳ್ದನಂ ಬಾಳ್ದನಂ
ಶ್ರೀಗುರುವೆ ಜೇರುಟಗಿ ವಾಸನಂ ಈಶನಂ ಬಸವಲಿಂಗೇಶ ಪಾಹಿ ॥೩॥

ಶ್ರೀಧವ ಪ್ರಾಣೇಶ ಶಕ್ರರರ್ಚಿಪ ಪದಪದ್ಮ
ಗೋಧರ ನೀಲದ ಮುನಪೂಷ್ಮರಾರ್ಯ ಮತಾರ (?)
ಕಾದವಾತ್ಮಂಗವಿಭರಾದ್ವರಾಜಿನ (?) ಫಲ ಸ್ಮರ ದರ್ಪ ವಿಧ್ವಂಸಕಾ
ಭೂಧರ ಭರಣ ಸ್ವರ್ಣದಿ ಜಟಾಧರ ನೋದಿ
ನೀಧರ ಜಾತ ವದನ ಸಾರಸಮಾಧುಪ
ವೇದಕಾತೀತ ಸಂಕಾಶ ಲೋಚನ ಬಸವಲಿಂಗೇಶ ರಕ್ಷಿಪುದೆಮ್ಮನು ॥೪॥

ಮರುತ ಪಶಿತವರ್ನಸ್ನಾಗೇಶ ಗುಣ ಮಾಕಾಂತ
ಶಿರ ಹೊಳೆಯುತಿಹಸುರ ಮೀನೇಕಚಕ್ರ ಭೂ
ಸುರ ಸೂತಮುಖಜಾತ ಹಯಧರ ವರೂಥಕಂ ಮೂರುಪುರ ವಿಧ್ವಂಸಕಾ

ಮೆರೆವರುಣ ಶಶಿಕೋಟಿಮಯ ಕಾಂತಿಗಳಿಂದೆ
ಶರಜನ್ಮ ಮುಖವನಜ ಭೃಂಗ ತ್ರಿಪದಗಳ ಮೌಳಿ
ಹರಪದಕೆ ಸುರವ್ರುಮನೆ ಹರುಷ ರತ್ನಾಕರ ನಮಸ್ತೆ ಗುರು ಬಸವಲಿಂಗ ॥೫॥

ಜಡಜಭವ ನತ ಪಾದ ಜಡಜ ಶರಮದಹರನೆ
ಜಡಜಾರಿ ಶಶಿಧರನೆ ಜಡಜಸಖನಿಭಗಾತ್ರ
ಜಡಜಗೃಹ ಮಣ್ಮನ ನುತಿ ಪಾತ್ರ ಮತ ಚೈತ್ರ ಜಡಜಾರಿ ಗರ್ವ ಹನನಾ
ಜಡಜಮಿತ್ರಾಗ್ನಿ ಶಶಿನೇತ್ರ ಧನಪತಿ ಮಿತ್ರ
ಜಡದೊಳಗೆ ಪುಟ್ಟಿದನ ಪುತ್ರಿರಮಣನ ಸುತನ
ಮಡದಿ ಅಯ್ಯಗೆ ಒಲಿವ ಒಡೆಯ ಲೋಚನ ಮಾರಿಗೆಸ್ವಾಮಿಃನಾಂ ಪೊಡ
ಮಡುವೆನು ॥೬॥

ಗೋಧರ ಧರ ಧರ ಗೋಪಾಲಗೋವಾಹನ
ಗೋಧರನೆ ಗೋವಾಹನ ನಮಿತ ಪಾದನೋಜಯುಗ
ಗೋಧರ ತನುಜಾತ ಗೋಕುಲೀಶ ಕುಧರಹತ ಗೋಜಾತ ಗೋಪಾಲ
ಗೋಧರ ಜನೋಜ ಸಖ ಗೋಪಾಕ್ಷ ಗುಹಪಕ್ಷ
ಗೋಧರ ವರಸುತ ಗೋವಮೌಳಿ ಗೋವರದ
ಗೋಧರ ಜೀವಧನ ವಸುಮಿತ್ರ ಲೋಚನ ಬಸವಲಿಂಗರಕ್ಷಿಪುದೆಮ್ಮನು ॥೭॥

ಹರಿಗಮನ ಹರಿಗಮನ ಹರಿಗಮನ ನತ ಪಾದ
ಹರಿಧರಗ ಹರಿಜ ವರ ರಮಣನೇನುವಾದ
ಹರಿ ವಿಲೋಚನ ವಿಲೋಚನ ವಿಲೋಚನ ವಿಲೋಚನ ಹರಿಜ ಹರಿಯುಧರನೆ
ಹರಿಜಧರಾವರ ಹರಿಜ ಹರಿ ವಾಮದಲಿ ತಾಳ್ದ
ಹರಿಧರನೆ ಹರಿಕರನೆ ಹರಿಹರನೆ ಹರಿ ಶಿರನೆ
ಹರಿಸುತನ ಪಾತ್ರಗೊರಮಿತ್ರ ಹರಿಪ ಲೋಚನ ಬಸವಲಿಂಗ ಜಯತು ॥೮॥

ಭಾವ ಭವ ಭಾವ ಭವ ಭವ ಹನನ ಶ್ರೀದೇವಿ
ಭಾವ ಭಾವಿತದೇವ ಭಾವಜನ ಪಿತ ನತನೆ
ಭಾವ ಭಾವಜ ಜನನಿಯಾಗ್ರಜನ ಶೀಘ್ರದಿಂ ಶುಭವದಿಂ ಶಿರ ತಳೆದ
ಭಾವ ಭಾವಜ ಪಿತನಗೋಜ ಚರಣದಿ ತಾಳ್ದ
ಭಾವ ಭವನಯ್ಯನನುಜೆಯ ರಮಣಗೊರೆದೆನ್ನ
ಭಾವಭವನದಿ ನಿಂದು ಭವರೋಗ ಸಂಹರಿಸಿ ಸಲಹು ಗುರು ಬಸವಲಿಂಗ ॥೯॥

ನಿಗಮಸನ್ನುತ ಪಾದ ನಿಗಮ ಸನ್ನುತಿ ಪಾತ್ರ
ನಿಗಮಾರಿ ಶಶಿಧರನೆ ನಿಗಮಶಯನ ಪದ
ನಿಗಮ ಕರ ಕರ್ಣದೊಳ್ ಧರಿಸಿದ ಮಹಾಗುರುವೆ ನಿಗಮಾರಿ ಗಮನ ಜನಕ
ನಿಗಮಾರಿ ನಿಗಮಾರಿ ನಿಗಮೇಶನ ಸಖ ಕಮಲ
ನಿಗಮೇಶನ ತನುಜನಿಗೆ ಒಲಿದು ಲಿಂಗವನಿತ್ತ
ನಿಗಮವೈರಿಯ ಗಮನ ಮಗನ ದಹಿಸಿದನೆ ಜಯ ನಿಗಮಾಸ್ವ ಬಸವಲಿಂಗ ॥೧೦॥

ಗುರುವೆ ಸಲಹೆನ್ನ ಬಸವಲಿಂಗ ಕರುಣದಾ
ಗರವೆ ಸ. ಹೆನ್ನ ಬಸವಲಿಂಗ ಭೃತ್ಯವರ
ಸುರದ್ರುಮನೆ ಸಲಹು ಬಸವಲಿಂಗ ಚೇರುಟಗಿ ಬಸವಲಿಂಗೇಶ ಶರಣು
ತರಳನಪರಾಧವ ನೋಡದಿರು ಗುರುವರನೆ
ನರತ್ವಕ್ಕು ದೇಹಿ ನಾಂ ನುಡಿವುದೆಲ್ಲವು ತಪ್ಪು
ಧರಣಿಯಲಿ ನಡೆವುದೆಲ್ಲವು ತಪ್ಪು ತಪ್ಪು ತಪ್ಪು ನೀನೊಪ್ಪಿಕೋ ಬಸವಲಿಂಗ ॥೧೧॥

† ಪದ ಸನ್ನುತ ಚರಣನೆ ಭವ
ಪದ್ಮ ಉಡುಪನೆ ಪದ್ಮ ಶಿರಧರ
ಪದ್ಮ ಶಶಿ ನಿಟಲಾಕ್ಷದೇವನೆ ಪದ್ಮಕರ ಧರನೆ
ಪದ್ಮಗಮನನ ಸುತನಿಗೊರೆದನೆ
ಪದ್ಮರಮಣನ ತನುಜ ದಹನನೆ
ಪದ್ಮಕರದಲಿ ಪಿಡಿದ ಲೋಚನ ಬಸವಲಿಂಗ ಜಯ ॥೧೨॥

ತುಂಗ ಚರ್ಮಾಂಬರನೆ ಗಂಗಾ
ಧರನೆ ಗಂಗೆಯ ತಾತನೆ ಭವ
ಭಂಗನೆ ಚರಲಿಂಗದೇವನೆ ಮಂಗಳಾತ್ಮಕನೆ
ತಿಂಗಳಿಂಗಳ ವರ ಪತಂಗನು
ಕಂಗಳಾಗಿಂಯೋ ಮೆರೆದ ಗುರು ಕೃ
ಪಾಂಗದಿಂದಲಿ ಎನ್ನ ರಕ್ಷಿಸು ಬಸವಲಿಂಗ ಜಯ ॥೧೩॥

ಚಕ್ರಕರಧೃತ ನಯನ ಪಾದನೆ
ಚಕ್ರಕರಧೃತ ತನುಜ ದಹನನೆ
ಚಕ್ರಕರಧೃತ ಪಿತನ ಮಸ್ತಕ ಕರದಿ ಪಿಡಿದವನೆ

---

† ॥ ಭಾಮಿನಿ ಷಟ್ಪದಿ ॥ (ಮೂ.)

ಚಕ್ರಧರನಜ ಚಕ್ರವಂದಿತ
ಚಕ್ರಕರಧೃತ ಶರವನೆಯ್ದಿದ
ಸುಕ್ರಮದಿ ಸಲಹೆನ್ನ ಲೋಚನ ಬಸವಲಿಂಗೇಶ ॥೧೪॥

ಸೋಮ ಸನ್ನುತ ಸೋಮ ವರದನೆ
ಸೋಮ ಸಖ ನಿಟಲಾಕ್ಷದೇವನೆ
ಸೋಮ ಶಿರಧರ ಸೋಮ ಕಂಧರ ಸೋಮ ಜಯ ಜಯತು
ಸೋಮನತ ಪದ ಪದಳಿಕಾಕ್ಷನೆ
ಸೋಮ ಹಿತಕರ ಸೋಮ ಸಂಹರ
ಸೋಮನಾಶನ ವಾಸವೋಟಗಿ ತೋಂಟದಾರ್ಯ ಜಯ ॥೧೫॥

ರಾಮ ಕಂಧರ ರಾಮ ನಯನವ
ರಾಮ ಚರಣದೊಳಿಟ್ಟ ಭೀಮನೆ
ರಾಮಸಖ ಫಾಲಾಕ್ಷ ಪರತರ ರಾಮನೆ ಪಾಹಿಮಾಂ
ರಾಮಕಂಧರ ಗಮನ ಜನಕನೆ
ರಾಮ ಸುತ ಸಂಹರನೆ ಸೋಮನೆ
ಶಾಮಲಾಂಗಿಯ ಸಂಗತಾಂಗನೆ ಬಸವಲಿಂಗ ಜಯ ॥೧೬॥

ಮರುತ ವೈರಿಯ ಮಗನ ಬೀಗನ
ವರ ತನುತ ಸುತರ ಮಣಿ ಜನಕನ
ಗರ್ವ ಮುರಿದನ ಸತಿಯಳನುಜನ ವರ ಶರೀರವನು
ಚರಣದಲಿ ಒರೆಸಿದನ ಶಿಷ್ಯನ
ಮೆರೆವ ಪಿತನಶನವನು ಎಸಗಿದ
ನರಿಯ ವಾಹನನೊಢೆಯ ಮಾಡಿದ ಬಸವಲಿಂಗ ಜಯ ॥೧೭॥

ಧರಣಿ ಧೂಳಿನ ಲೆಕ್ಕಕಧಿಕ
ದುರಿತಗಳ ನಾನಂತು ಮಾಡಿಯೆ
ಗುರುವೆ ನಿಮ್ಮಯ ಚರಣಕಮಲವ ಭರದಿ ಪಿಡಿಯಲ್ಕೆ
ಪರಮನೀವೆ ನಿಮ್ಮ ದಯದಲಿ
ಹರುಷದಭಯವ ಕೊಟ್ಟು ಕರುಣಿಸಿ
ಹರನೊಳೈಕ್ಯವ ಹೊಂದಿಸಿದ ಮೃಢ ಬಸವಲಿಂಗ ಜಯ ॥೧೮॥
ಹರಿಜಲವನಿಲವಗ್ನಿಕಂಠವೀ
ಧರಣಿಯಾತ್ಮನು ದೇಹವಾಗಿದಿ
ಪಂದಿ ಭೂತದ ಕಾಯವೆನುತಲಿವರ ಜಡಿಯುತಲಿ

ಹರನ ಮನ ಮಣಿತೀರ್ಥ ಭಸಿತವ
ವರ ಪ್ರಣಮ ಗುರುಲಿಂಗ ಜಂಗಮ
ಚಿರ ಪ್ರಸಾದಗಳಂಗವೆಸಗಿದ ಬಸವಲಿಂಗ ನಮೋ ॥೧೯॥

ಪಂಚವಿಷಯ ಕರಣ ನಾಲ್ಕರ
ಸಂಚರಿಸುವ ವಾಯು ದಶಗಳ
ವಂಚನುಳ್ಳ ವ್ಯಸನವೇಳರ ಧಾತು ಮಲತ್ರಯದ
ಮಿಂಚುದೇಹದ ಗುಣವ ತೇಜಿಸುತ
ಪಂಚವರ್ಣದ ಕಾಯವಾಗಿಸಿ
ಪಂಚಮುಖನ ನೆಲೆಯ ತಿಳುಪಿದ ಬಸವಲಿಂಗ ನಮೋ ॥೨೦॥

‡ ಜಯ ಜಯ ಶಂಕರ ಜಗದಾಧಾರನೆ
ಜಯ ಜಯ ಭವಹರ ಪಾಶ ವಿನಾಶನೆ
ಜಯ ಜಯ ಸುರಮುನಿ ಸ್ತೋತ್ರಕೆ ಪಾತ್ರನೆ ಜಯ ಜಯ ಗುರುರನೆ
ಜಯ ಜಯ ಹರಿಕರ ಹರಿ ಶಿರ ಧರನೆ
ಜಯ ಜಯ ಷಣ್ಮುಖ ತಾತನೆ ಖ್ಯಾತನೆ
ಜಯ ಜಯ ಗಂಗಾಚೂಡನೆ ಬಸವಲಿಂಗನೆ ಜಯ ಜಯತು ॥೨೧॥

ಪಾಹಿ ಬಸವಲಿಂಗ ಶಿವಾಧವ
ಪಾಹಿ ಬಸವಲಿಂಗ ಶಿವಕರ
ಪಾಹಿ ಬಸವಲಿಂಗ ಶಿವಾಧವ ಪಾಹಿ ಶಿವ ಶಿವನೆ
ಪಾಹಿ ಬಸವಲಿಂಗ ಶಿವ ಶಿರ
ಪಾಹಿ ಬಸವಲಿಂಗ ಶಿವಕರ
ಪಾಹಿ ಬಸವಲಿಂಗ ಗುರುವರ ಪಾಹಿ ಮತ್ಪಾಹಿ ॥೨೨॥

ಗರಳಗಳೊಡೆಯರ ಗಾನವ ಕೇಳ್ದಗೆ
ಗರಳಗಳೊಡೆಯ ಕಂಕಣಗೆಯ್ದಗೆ
ಸುರರನು ಸುಡುತ ಬರುತ ಗರಳವ ಕೊರಳೊಳು ತಳೆದನಿಗೆ
ವರಹರಗೆನ್ನಯ ಗರಳ ವಾಕ್ಯವ
ಭರದೊಳು ತಾ ಗರ ಮತಿ ಪೇಳಿದ
ವರಗುರು ಬಸವಲಿಂಗನ ಸ್ತೋತ್ರವ ರಸಿಕರು ತಿದ್ದುವುದು ॥೨೩॥

---

‡ ॥ ಪರಿವರ್ಧಿನಿ [ಷಟ್ಪದಿ] ॥ (ಮೂ.)

ಸುಧಾನದಿ ಧರಿಸಿದ ಶುಭನಾಮನಿಗೆ
ಸುಧಾಕರ ಶಿರದೊಳು ತಾಳಿದ ಗುರುವಿಗೆ
ಸುಧಾನಿಧಿಶಯನನ ನೇತ್ರವ ಚರಣದೊಳಿಟ್ಟಿಹ ಪರಶಿವಗೆ
ಸುಧಾಪಾನಿಯ ಸುರಸೇವಿತಗೆನ್ನಯ
ಸುಧಾ ಸದ್ವಚನದಿ ಲೇಸೆನಬಹುದೆ
ಸುಧಾಮಯನಾದ ಬಸವಲಿಂಗನೆ ಜಯವಪಜಯವುಂಟೆ ॥೨೪॥

ಗುರುವರ ಲೋಚನ ಬಸವಲಿಂಗನ
ಸುರುಚಿರತರ ವಿಂಶತಿ ಸ್ತೋತ್ರಂಗಳು
ಧರೆಯೊಳ್ ಬರೆದೋದಿಪರಿಗೆ ಮೋಕ್ಷದ ನಿಧಿಯನೆ ದೊರಕಿಪುದು
ಕರಿ ಭಲ್ಲೂಕ ಕೇಸರಿ ರಿಪು ತಸ್ಕರ
ಧರಣಿಪ ಫಣಿಯ ವೃಶ್ಚಿಕ ಭಯಗಳು
ಪರಿಹರವಕ್ಕುಮರಿ ಸಿದ್ಧಲಿಂಗನ ಗುರುಕರುಣಾಗುವುದು ॥೨೫॥ †

ಮೋಟಗಿ ಸಿದ್ಧಲಿಂಗಪ್ಪನವರು ನಿರೂಪಿಸಿದ ದೇಶಿಕಶ್ರೇಷ್ಠನ ಸ್ತೋತ್ರ ಸಂಪೂರ್ಣ ಮಂಗಳ ಮಹಾಶ್ರೀ ಶ್ರೀ ಶ್ರೀ ॥ □

---

† ಹಸ್ತಪ್ರತಿಯನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಗದುಗಿನ ಪರಮ ಪೂಜ್ಯ ತೋಂಟದಾರ್ಯ ಜಗದ್ಗುರುಗಳಿಗೆ ಭಕ್ತಿಪೂರ್ವಕ ನಮಸ್ಕಾರಗಳು.

□ ಚತುಃಪುತ್ರ ಗುರುಲಿಂಗ ಲಿಖಿಸಿದುದು (ಮೂ).

ಭಾವಗೀತೆ

● ವಿರೂಪಾಕ್ಷಪ್ಪ ಕೆರಿಯವರ

ಕವಿಯ ಹೃದಯದ। ಪರದೆ ತೆರೆದಿದೆ।
ಕವಿದ ಕತ್ತಲೆ। ಹರಿದಿದೆ
ದೇವ ಸೃಷ್ಟಿಗೆ।ಪುಷ್ಟಿ ಎರೆದಿದೆ।
ತಾಯ ಶಕ್ತಿಯ। ಚೇತನಾ ॥೧॥

ನೆಲದ ಅಗಲಕೆ। ಮುಗಿಲು ತಗಲಿದೆ।
ಬಿಗಿದ ಪರಧಿಯ। ಕಂಕಣ
ಹಗಲು ಇರುಳಿನ। ನಂಟು ಕಟ್ಟಿದೆ।
ಗಗನದಂಗಳ। ಚಿತ್ರಣ ॥೨॥

ನೀಲ ಮುಗಿಲಿಗೆ। ಮುತ್ತು ಮೆತ್ತಿದೆ।
ಚಲನ ಚಿತ್ರದ। ಸಂಭ್ರಮ।
ಕಣ್ಣು ಮಿಳುಕಿಸಿ। ಹೊಳೆವ ತಾರೆಗಳ।
ಹಬ್ಬದುಬ್ಬಿನ। ನಿಬ್ಬಣ ॥೩॥

ಮುಗಿಲ ಮುತ್ತಿಗೆ। ನೆಲದ ನೆತ್ತಿಗೆ।
ಹಗಲು ಹಸುರಿನ। ಹಚ್ಚಡ।
ಚಿಗುರದುರುಬಿಗೆ। ಹನಿಯ ಮಿನುಗಿನ।
ಬೆರಗ ನೇಸರ। ಅಕ್ಕಡ। ॥೪॥

ಕಣ್ಣು ಕೇಳದೆ। ಮಣ್ಣು ಮಹಿಮೆಯ।
ಬಣ್ಣಿಸಲು ಬಾಯ್। ತುಂಬಲಾಸ್ಯ।
ಬಣ್ಣ ಬಳಿದಿದೆ। ಕವನ ಕುಂಚದಿ।
ಅನ್ನ ನೀಡುವ। ಬಟ್ಟಲ। ॥೫॥

ಹೋಗಿಬಾರ! ಗೌರಾ!! ಬೆನ್ನ ಬಿಸಿಲ ಕೋಲ

● ಕಂಚ್ಯಾಣಿ ಶರಣಪ್ಪ

"ತಾವಿದ್ದ ಪಾತಳಿಯಲ್ಲಿಯೇ ಭವ್ಯತೆಯನ್ನು ಮಾಡಿ ತೋರಿಸುವುದು" ಜನಪದ ಸಾಹಿತ್ಯದ ವೈಶಿಷ್ಟ್ಯವಾಗಿದೆಯೆಂದು ಬಲ್ಲವರು ಗುರ್ತಿಸಿದ್ದಾರೆ. ಇನ್ನೂ ಮುಂದುವರಿದು ಹೇಳುವುದಾದರೆ ಆ ಭವ್ಯತೆಯಲ್ಲಿಯೇ ಮಾನವತೆಯ ಮಂದಾರವನ್ನು ಅರಳಿಸುವುದು ಅದರ ಜೀವಾಳವಾಗಿದೆ. ಹಳ್ಳಿಗರ ಸಂಪ್ರದಾಯದ ಆಚರಣೆ_ಹಾಡುಗಳನ್ನು ಗಮನಿಸಿದಾಗ ಯಾರಿಗಾದರೂ ಈ ಅನುಭವ ಆಗದಿರದು. ಇಂದಿಗೂ ಜೀವಂತವಾಗಿರುವ ಗೌರಿಯ ಹಾಡಿನಲ್ಲಿ ಹಲವಾರು ನಿದರ್ಶನಗಳು ಗೋಚರಿಸುತ್ತವೆ.

ದೀಪಾವಳಿಯ ಪ್ರತಿಪದೆಯಂದು ಹಳ್ಳಿಯ ಪ್ರತಿ ಮನೆಯಲ್ಲಿ ಗೌರಿಯನ್ನು ಕೂಡ್ರಿಸಿ ಆರಾಧಿಸುತ್ತಾರೆ. ಇಲ್ಲಿ ಗೌರಮ್ಮ ಭಾವುಕರ ಆರಾಧ್ಯ ದೇವತೆಯಾಗಿರದೆ ಆತ್ಮೀಯ ಕರುಳಿನ ಕುಡಿಯಾಗುತ್ತಾಳೆ. ಗಂಡನ ಮನೆಯಿಂದ ತವರು ಮನೆಗೆ ಬಂದ ಮಮತೆಯ ಮನೆಯ ಮಗಳೆಂದು ಭಾವಿಸುತ್ತಾರೆ. ಮನೆ ಮಂದಿಯ ವಾತ್ಸಲ್ಯದ ಕೇಂದ್ರ ಬಿಂದುವಾಗುತ್ತಾಳೆ. ಮುಂದೆ ಪೂರ್ಣಿಮೆಯವರೆಗೆ ಅಂದರೆ ಹದಿನೈದು ದಿವಸಗಳವರೆಗೆ ನಿತ್ಯವೂ ಮನೆ ಮನೆಗಳಲ್ಲಿ ಉತ್ಸಾಹದ ಹೊಳೆಯೇ ಹರಿಯುತ್ತದೆ.

ಹೊತ್ತು ಮುಳುಗುತ್ತಲೇ ಚಿಕ್ಕಮಕ್ಕಳಾದಿಯಾಗಿ ಹದಿಹರೆಯದ ಹೆಣ್ಣು ಮಕ್ಕಳು ಗೌರಿಗೆ ಆರತಿಯನ್ನು ಬೆಳಗುವ ಸಂಭ್ರಮವೇ ಸಂಭ್ರಮ. ಮನೆಯ ಮೊಗಸಾಲೆಯ ಮಾಡದಲ್ಲಿ ಮಣ್ಣು – ಕಟ್ಟಿಗೆಯ, ಬಣ್ಣದ ಗೌರಮ್ಮನ ಪುಟ್ಟ ಮೂರುತಿಯನ್ನು ಕೂಡ್ರಿಸಿರುತ್ತಾರೆ. ಬಗೆ ಬಗೆಯ ಹಣ್ಣು, ಹೂ, ಕಾಯಿಗಳಿಂದ ಗೌರಮ್ಮನನ್ನು ಸಿಂಗರಿಸುತ್ತಾರೆ. ಆರತಿಯನ್ನು ಬೆಳಗಿ ಆರಾಧಿಸುತ್ತಾರೆ. ತಿಂಗಳಿನ ತಂಪಾದ ಇರುಳಿನಲ್ಲಿ ಹೆಂಗಳೆಯರು ಮನೆಯಂಗಳದಲ್ಲಿ ಕುಳಿತು ಹಾಡುಗಳನ್ನು ಹೇಳಿ ನಲಿಯುತ್ತಾರೆ.

ಗೌರಿಯ ಹಾಡುಗಳೆಂದರೆ ಅವು ಕನ್ನಡ ಕಾವ್ಯದ ಗಂಗೋತ್ರಿಯೆಂದೇ ಹೇಳಬೇಕು. [illegible]ಂದೋಪ್ರಕಾರಗಳಲ್ಲಿ ಅಂದವಾಗಿ

ಹಾಡುತ್ತಾರೆ. ತ್ರಿಪದಿ, ದ್ವಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ, ರಗಳೆಗಳಲ್ಲಿ ಲಯಬದ್ಧವಾಗಿ ಭಾವಪೂರ್ಣವಾಗಿ ಎದೆತುಂಬಿ ಮನದುಂಬಿ ಹಾಡುತ್ತಾರೆ. ಅವೆಲ್ಲ ಹಾಡುಗಳು ಜೀವನಾನುಭವದ ಖಣಿಗಳಿಂದ ಅಗೆದು ತೆಗೆದ ಅಣಿಮುತ್ತುಗಳು, ಹೆಣ್ಣಿನ ತವರು ಮನೆಯ ಪ್ರೀತಿ, ಹಂಬಲ, ಬಂಧು-ಬಳಗದ ವಾತ್ಸಲ್ಯ, ಗಂಡು ಹೆಣ್ಣಿನ ದಾಂಪತ್ಯ ಜೀವನದ ಸರಸ-ವಿರಸ, ನೋವು-ನಲಿವು, ಅನುವು-ಆಪತ್ತುಗಳ ಸಿಹಿ-ಕಹಿ ಅನುಭವಗಳನ್ನೆಲ್ಲ ಮಧುರವಾದ ಕಂಠದಿಂದ ಭಾವಪೂರ್ಣವಾಗಿ ಹಾಡಿ ತಣಿಯುತ್ತಾರೆ. ಗಂಗೆ, ಗೌರಿ. ಶಿವ, ಗಣಪ, ಕೃಷ್ಣ ರಾಧೆ, ಭಾಮೆ ಇತ್ಯಾದಿ, ಮಾನವ ದೇವತೆಗಳ ಮೇಲೆ ಆರೋಪಿಸಿ ಮಾನವತೆಯ ಮಂದಾರವನ್ನೇ ಅರಳಿಸುತ್ತಾರೆ ತಮ್ಮ ಹೃದಯವನ್ನು ಹಗುರಗೊಳಿಸುತ್ತಾರೆ, ಹಸನುಗೊಳಿಸುತ್ತಾರೆ.

ಹದಿನೈದನೆಯ ದಿವಸಕ್ಕೆ ಅಂದರೆ ಹುಣ್ಣಿಮೆಯ ದಿನದಂದು ಗೌರಮ್ಮ ಗಂಡನ ಮನೆಗೆ ಹೊರಡಬೇಕಾಗುತ್ತದೆ. ಅದೊಂದು ಹೃದಯಸ್ಪರ್ಶಿ ಘಟನೆ. ಇಲ್ಲಿ ಮಧುರವೇದನೆಯ ಅನುಭವ ಘನೀಭೂತಗೊಳ್ಳುತ್ತದೆ. ತವರುಮನೆಯ ಸಂತಸದ ಸಡಗರಕ್ಕೆ ಒಮ್ಮೆಲೇ ಆತಂಕ ಉಂಟಾಗುತ್ತದೆ. ತೌರಿನಲ್ಲಿದ್ದ ಗೌರಮ್ಮನನ್ನು ಮಾವ ಕರೆಯಲು ಬರುತ್ತಾನೆ.

"ಇಂದು ನಮ ಗೌರವ್ವನ ಮಾವ ಕರೆಯಲು ಬಂದ,

ಮಲ್ಲಿಗೆ ಶಾಲು ಮುಗಿದಿಲ್ಲ ಕೋಲ ॥

ಎಂದು ಮಾವನನ್ನು ಹಾಗೇ ಕಳಿಸುತ್ತಾರೆ ನಂತರ

"ಇಂದು ನಮ ಗೌರವ್ವನ ಅತ್ತೆ ಕರೆಯಲು ಬಂದ"

ಮುತ್ತಿನ ಶಾಲು ಮುಗಿದಿಲ್ಲ ಕೋಲ ॥

ಎಂದು ಅತ್ತೆಯನ್ನೂ ಹಾಗೇ ಸಾಗುಹಾಕುತ್ತಾರೆ. ಕೊಟ್ಟ ಹೆಣ್ಣು ಕುಲಕ್ಕೆ ಹೊರತು ಅವಳು ಇಂದಿಲ್ಲ ನಾಳೆಗಂಡನ ಮನೆಸೇರುವಳೆಂಬುದು ಅವರಿಗೆ ಚೆನ್ನಾಗಿ ಗೊತ್ತು. ಆದರೂ ಮಮತೆಯ ಮಗಳು ಇನ್ನೂ ನಾಲ್ಕುದಿನ ತಮ್ಮೆದುರಿನಲ್ಲಿ ಸಡಗರದಿಂದ ಇರಲಿ ಎಂದು ಹೆತ್ತವರ ಸಹಜ ಹಂಬಲ. ಅದಕ್ಕಾಗಿ ಈ ಮೊಂಡುತನ ತೋರಿಸುತ್ತಾರೆ. ಕೊನೆಗೆ ಶಿವರಾಯನೇ ಮಡದಿ ಗೌರಮ್ಮನನ್ನು ಕರೆಯಲು ಬರುತ್ತಾನೆ. ಆವಾಗಲೂ ಅದೇ ರಾಗದಲ್ಲಿ, ಅದೇ ತಾಳದಲ್ಲಿ ಅದೇ ಗತ್ತಿನಲ್ಲಿ ಅದೇ ಪದವನ್ನು ಹಾಡುತ್ತಾರೆ ಆದರೆ ಶಿವರಾಯನ ಮುಂದೆ ಯಾರ ಆಟವೂ ನಡೆಯುವದಿಲ್ಲ. ಯಾರ ಮಾತನ್ನೂ ಅವನು ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ. ನೇರವಾಗಿ ಮಡದಿ ಗೌರಮ್ಮನ್ನನ್ನೇ ಕೇಳಿಬಿಡುತ್ತಾನೆ.

"ಬರತೀಯ ಗೌರಾ! ಇರತೀಯಾ ? " ಕೋಲ

ಈಗ ಗೌರಮ್ಮನ ಧರ್ಮಸಂಕಟ, ಪೇಚಾಟ, ಒಂದು ಕಡೆ ತೌರಿನ ಕರುಳಿನ ಕಕ್ಕುಲಾತಿಯ ಸೆಳೆತ, ಮಗುದೊಂದು ಕಡೆ ಪ್ರೀತಿಯ ಪತಿಯ ಪ್ರೇಮದ ಎಳೆತ, ಈ ಇರಸು ಮುರುಸಿನಲ್ಲಿ ನುಗ್ಗಾಗುತ್ತಾಳೆ. ಕೊನೆಗೆ ಗಂಡನಲ್ಲಿ ನಮ್ರವಾಗಿ ಬೇಡಿಕೊಳ್ಳುತ್ತಾಳೆ.

ಸೀರಿ ತಂದಿಲ್ಲ ಶಿವನೇ!
ಕುಬಸ ತಂದಿಲ್ಲ ಶಿವನೇ!
ಬೆಳ್ಳಿತಂದಿಲ್ಲ ಶಿವನೇ!
ಬಂಗಾರ ತಂದಿಲ್ಲ ಶಿವನೇ!
ಬನದುಣ್ಣೆ ಮಾಡಿ ಬರತೀನಿ! ಕೋಲ,

ಆದರೆ ಶಿವನ ಮನಸ್ಸು ಕರಗಲಿಲ್ಲ. ಅವನ ಧಾಟಿ ಎಳ್ಳಷ್ಟೂ ಬದಲಾಗಲಿಲ್ಲ.

ಬೆಳ್ಳಿ ನಮ್ಮಲ್ಲುಂಟು
ಬಂಗಾರ ನಮ್ಮಲ್ಲುಂಟು
ಬರತೀಯಾ ಗೌರಾ! ಇರತೀಯಾ ? ಕೋಲ,

ಬೇರೆ ದಾರಿ ತೋರದೆ ಗೌರಮ್ಮ ಗಂಡನ ಜತೆ ಹೊರಟು ನಿಲ್ಲುತ್ತಾಳೆ. ಹೆಣ್ಣಿಗೆ ತವರು ಮನೆ ಸ್ಥಿರವಲ್ಲ, ಗಂಡನ ಮನೆ ತಪ್ಪಿದ್ದಲ್ಲ. ಬಗತನದ ಅರಿವು ಅವಳಿಗುಂಟು. ಮಮತೆಯ ಮಡಿಲನ್ನು ಅಗಲಿ ಹೋಗುವಾಗ ದುಃಖ ಒತ್ತರಿಸಿ ಬರುತ್ತದೆ. ಆಗ ತಂದೆ ತಾಯಿಗಳೇ ಅವಳಿಗೆ ಸಮಾಧಾನ ಹೇಳುತ್ತಾರೆ,

"ಆನೆಗಳು ಬಂದಾವ ಬಾಗಿಲಿಗೆ ನಿಂತಾವ
ಒಂಟೆಗಳು ಬಂದಾವ ಸಾಲೇರಿ ನಿಂತಾವ।
ಕುದುರೆಗಳು ಬಂದಾವ ಸದರಿಗೆ ನಿಂತಾವ।
ಹತ್ತೊತ್ತೀಗ ಗೌರಾ! ಅಳಬೇಡ" ಕೋಲ

ಮುದ್ದಿನ ಖನಿಯಾದ ಮಗಳನ್ನು ಕಳುಹಿ ಕೊಡುವಾಗ ಹೆತ್ತವರಿಗೂ ಸಂಕಟವಾಗುತ್ತಿಲ್ಲವೆಂದಲ್ಲ. ಆ ಸಂತಾಪವನ್ನು ಮಗಳ ಒಳಿತಿಗಾಗಿ ಸಹಿಸಿಕೊಂಡು, ಸಂತೋಷದಿಂದಲೇ ಹದುಳದ ಹರಕೆಯನ್ನು ನೀಡಿ ಕಳಿಸಿ ಕೊಡುತ್ತಾರೆ.

"ಹೋಗಿ ಬಾರ ಗೌರಾ! ಬೆನ್ನ ಬಿಸಿಲ!!" ಕೋಲ

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಲ್ಲಿ ಬಳಸಿದ "ಬೆನ್ನ ಬಿಸಿಲು" ಎಂಬ ಎರಡು ಪದಗಳನ್ನು ಕುರಿತು, ಇವು ಮೇಲ್ನೋಟಕ್ಕೆ ಸಾಮಾನ್ಯವೆನಿಸಿದರೂ ಹೃದಯಾಳದ ಕರುಣೆಯ ಕಾಸಾರದಲ್ಲಿ ಅದ್ದಿ ತೆಗೆದ ಆಣಿಮುತ್ತುಗಳಾಗಿವೆ. ಜಾನಪದರ

ಕಾಳಜಿ ಕಕ್ಕುಲಾತಿಗೆ ಉತ್ತಮ ನಿದರ್ಶನಗಳಾಗಿವೆ. ಪ್ರಯಾಣಕ್ಕೆ ಹೊರಡುವಾಗ ಬಿಸಿಲು ಎದುರಾಗಬಾರದು. ಇದು ಲೋಕಾನುಭವ. ಎದುರು ಬಿಸಿಲಿನ ತಾಪಕ್ಕೆ ಕಣ್ಣು ಕುಕ್ಕುತ್ತದೆ. ಗಂಟಲು ಆರುತ್ತದೆ, ತುಟಿಯೊಣಗಿ ದಾಹವೇರಿ ಪ್ರಯಾಣ ಪ್ರಯಾಸಕರ–ಕಷ್ಟಕರವಾಗುತ್ತದೆ. ಬೆನ್ನು ಹಿಂದೆ ಬಿಸಿಲಾಗಲಿ ಎಂಬ ಕಾಳಜಿ ಇಲ್ಲಿ ಕಂಡುಬರುತ್ತದೆ. ಇದು ವಾಚ್ಯಾರ್ಥ. ಕಿವಿದೆರೆಗೆ ತಾಕಿ ಬುದ್ಧಿಗೆ ಮಾತ್ರ ಹೊಳೆಯತಕ್ಕಂತಹದು. ಇಷ್ಟಕ್ಕೆ ಹೃದಯ ಸ್ಪರ್ಶಿಯಾಗಲಾರದು, ನೇರವಾಗಿ ಹೃದಯವನ್ನು ತಾಕಿ ಮನವನ್ನು ಮಿಡಿಯುವ ಧ್ವನಿ, ಈ ಎರಡು ಪದಗಳ ವ್ಯಂಜಕಾರ್ಥದಿಂದ ಸ್ಫುರಿಸುತ್ತದೆ.

ಜೀವನದ ಕಷ್ಟ ಕೋಟಲೆಗಳು ಬಿಸಿಲಿಗಿಂತ ಪ್ರಖರವಾದವುಗಳು. ತಾಪದಾಯಕವಾದವುಗಳು. ಈ ತಾಪತ್ರಯವನ್ನು ಬಿಸಿಲಿಗೆ ಹೋಲಿಸಿದ್ದು ಸಮಂಜಸವಾಗಿವೆ. ಬಂದಂಥ ತಾಪತ್ರಯಗಳು ಹಿಂದಾಗಿ ಹೋಗಲಿ ಎಂಬುದಕ್ಕೆ ಬೆನ್ನು ಸಾಂಕೇತಿಕವಾಗಿ, ಒಟ್ಟು ಅರ್ಥ "ಕಷ್ಟ ಕೋಟಲೆಗಳೆಲ್ಲ ಹಿಂದಾಗಿ ಹೋಗಲಿ! ಹಿಂಗಿಯೋ ಹೋಗಲಿ! ಎಂಬ ನಲ್ಹರಕೆಯಾಗುತ್ತವೆ. ಹಮುಳವ ಹಾರೈಕೆಯಾಗುತ್ತದೆ. ನಿಜವಾಗಿ ನೊಂದ ಜೀವಕ್ಕೆ ನೆಮ್ಮದಿಯನ್ನು ನೀಡುತ್ತದೆ.

ಇಲ್ಲಿ "ಧ್ವನಿಯೇ ಕಾವ್ಯದ ಆತ್ಮ" ಎಂಬ ಆನಂದವರ್ಧನನ ಧ್ವನಿ ಸಿದ್ಧಾಂತ ನಿರಕ್ಷರಿ ಕುಷಿಗಳ ಅಭಿವ್ಯಕ್ತಿಯಲ್ಲಿ ಸಹಜವಾಗಿ ಸುಂದರವಾಗಿ ಸ್ಫುಟವಾಗಿ ಹೊರಹೊಮ್ಮಿದೆ. ಆಹ್ಲಾದಕರವಾಗಿದೆ. ಅಂತೆಯೇ ಕವಿರಾಜಮಾರ್ಗಕಾರನು "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎಂದು ಕನ್ನಡ ಜಾನಪದರನ್ನು ಕುರಿತು ಮನದುಂಬಿ ಹಾಡಿದ್ದಾನೆ.

ಈ ಸಂಚಿಕೆಯ ಲೇಖಕರು

- ಡಾ. ಬಸವರಾಜ ನಾಯ್ಕರ, ಎಂ. ಎ, ಪಿಎಚ್.ಡಿ.
  ಆಂಗ್ಲಭಾಷಾ ಅಧ್ಯಾಪಕರು
  ಗುಲಬರ್ಗಾ ವಿಶ್ವವಿದ್ಯಾಲಯ
  ಗುಲಬರ್ಗಾ–೬

- ಆರ್. ಪಿ. ಹೆಗಡೆ
  ಕನ್ನಡ ಉಪನ್ಯಾಸಕ
  ಮಹಾತ್ಮಾಗಾಂಧಿ ಶತಾಬ್ಧಿ
  ಮಹಾವಿದ್ಯಾಲಯ, ಸಿದ್ಧಾಪುರ (ಉ. ಕ.)

- ಡಾ. ವ್ಹಿ. ಜಿ. ಪೂಜಾರ, ಎಂ. ಎ. ಪಿಎಚ್.ಡಿ.
  ಕನ್ನಡ ಅಧ್ಯಾಪಕರು
  ಗುಲಬರ್ಗಾ ವಿಶ್ವವಿದ್ಯಾಲಯ
  ಗುಲಬರ್ಗಾ–೬

- ಎಚ್. ಆರ್. ಅಮರನಾಥ
  ಇಂಗ್ಲೀಷ್ ಅಧ್ಯಾಪಕರು
  ಸರಕಾರಿ ಪದವಿ ಕಾಲೇಜು
  ಹಳಿಯಾಳ (ಉ. ಕ.)–೫೮೧ ೩೨೯

- ವಿಜಯಶ್ರೀ ಸಬರದ
  ಕನ್ನಡ ಉಪನ್ಯಾಸಕಿಯರು
  ಅಕ್ಕಮಹಾದೇವಿ ಮಹಿಳಾ ಕಾಲೇಜು
  ಬೀದರ–೫೮೫ ೪೦೧

- ಡಾ. ಎಸ್. ಪಿ. ಪಾಟೀಲ
  ಉಪನ್ಯಾಸಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ವಿಲ್ಯಂ ಮಾಡ್ತ
  ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಶ್ರೀಧರ ಎಚ್. ಜಿ.
  ಮುಂಡಿಗೆ ಹಳ್ಳಿ
  ಅಂಚೆ–ಶಿರವಂತೆ
  ಸಾಗರ–ಶಿವಮೊಗ್ಗ ೫೭೭ ೪೩೦

- ಎ. ಮುರಿಗೆಪ್ಪ
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಬಿ. ಆರ್. ಹಿರೇಮಠ
  ರೀಡರ್, ಕನ್ನಡ ಅಧ್ಯಯನ ಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಶ್ರೀ ವಿರೂಪಾಕ್ಷಪ್ಪ ಕೆರಿಯವರ
  ಸಾ. ಕೋಡಿಕೊಪ್ಪ

- ಕಂಚ್ಯಾಣಿ ಶರಣಪ್ಪ
  ಮಲಘಾಣ–೫೮೬ ೧೨೧
  ತಾ. ಬಸವನ ಬಾಗೇವಾಡಿ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ: ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ. ೧೦೦-೦೦ (ಒಂದು ನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯು ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪-೦೦

ಹಣವನ್ನು, ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩ ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ್ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩